ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಶಿಕ್ಷಣ
ಜೆಇಇ ಪರೀಕ್ಷೆಯನ್ನು ಈ ಬಾರಿ ನಾಲ್ಕು ಸೆಷನ್‌ಗಳಲ್ಲಿ ನಡೆಸಲಾಗುತ್ತಿದ್ದು ಅರ್ಹತೆ ಪಡೆಯಲು ಸಾಕಷ್ಟು ಅವಕಾಶಗಳಿವೆ



ಬಿಜೆಪಿಗೆ ಬಿಪಿಎಫ್ ಸವಾಲು 8

ಕುಂಚಿಟಿಗರ ಸಮಾವೇಶದಲ್ಲಿ ಶಾಂತವೀರ ಸ್ವಾಮೀಜಿ ಪ್ರತಿಪಾದನೆ

ಅನುಭವ ಮಂಟಪ — ಮೀಸಲಾತಿ ಹೋರಾಟವಲ್ಲ, ಧಮ್ಕಿ

‘ಜಲಮೂಲ ಸ್ವಚ್ಛತೆಗೆ ಅಭಿಯಾನ’ 9

ಜಾತಿಗಿಂತ ಆರ್ಥಿಕ ಆಧಾರದಲ್ಲಿ ಮೀಸಲಾತಿ 4


60 ದಾಟಿದವರು, ಅನಾರೋಗ್ಯವಿರುವ 45ರ ಮೇಲಿನ 27 ಕೋಟಿ ಮಂದಿಗೆ ಲಸಿಕೆ

ಬೃಹತ್ ಅಭಿಯಾನ: ಇಂದು ಚಾಲನೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಜಗತ್ತಿನ ಅತ್ಯಂತ ದೊಡ್ಡ ಲಸಿಕೆ ಅಭಿಯಾನಕ್ಕೆ ಭಾರತವು ಸೋಮವಾರ ಚಾಲನೆ ನೀಡಲಿದೆ. ಕೋವಿಡ್-19 ತಡೆಯ ಎರಡನೇ ಹಂತದ ಲಸಿಕೆ ಕಾರ್ಯಕ್ರಮ ಸೋಮವಾರದಿಂದ (ಮಾರ್ಚ್ 1) ಆರಂಭವಾಗಲಿದೆ. ಲಸಿಕೆ ನೋಂದಣಿಯ ಕೋ-ವಿನ್ 2.0 ಆ್ಯಪ್ ಅಥವಾ ಪೋರ್ಟಲ್ ಸೋಮವಾರ ಬೆಳಿಗ್ಗೆ 9 ಗಂಟೆಗೆ ಸಕ್ರಿಯವಾಗಲಿದೆ.

ಅರ್ಹ ವ್ಯಕ್ತಿಗಳು ಲಸಿಕೆ ಪಡೆಯುವುದಕ್ಕಾಗಿ ಕೋ-ವಿನ್ ಆ್ಯಪ್ ಅಥವಾ ಆರೋಗ್ಯ ಸೇತು ಆ್ಯಪ್ ಮೂಲಕ ಯಾವುದೇ ಸಮಯದಲ್ಲಿ, ಯಾವುದೇ ಸ್ಥಳದಿಂದ ಸಮಯ ಕಾಯ್ದಿರಿಸಬಹುದು ಎಂದು ಕೇಂದ್ರ ಆರೋಗ್ಯ ಸಚಿವಾಲಯವು ಹೇಳಿದೆ.



60 ವರ್ಷ ದಾಟಿದವರು ಮತ್ತು 2022ರ ಜನವರಿ 1ಕ್ಕೆ 60 ವರ್ಷ ತುಂಬುವವರು ಲಸಿಕೆಗಾಗಿ ನೋಂದಣಿ ಮಾಡಿಕೊಳ್ಳಲು ಅರ್ಹರು. ಬೇರೆ ರೋಗಗಳನ್ನು ಹೊಂದಿರುವ, 2022ರ ಜನವರಿ 1ಕ್ಕೆ 45 ವರ್ಷ ತುಂಬುವವರು ಮತ್ತು ಈಗಾಗಲೇ 45 ದಾಟಿದವರು ಕೂಡ ನೋಂದಣಿಗೆ ಅರ್ಹರು. 20 ಅನಾರೋಗ್ಯಗಳನ್ನು ಆರೋಗ್ಯ ಸಚಿವಾಲಯವು ಪಟ್ಟಿ ಮಾಡಿದೆ.

ಒಂದು ಮೊಬೈಲ್ ಸಂಖ್ಯೆ ನೀಡಿ ಗರಿಷ್ಠ ನಾಲ್ಕು ಫಲಾನುಭವಿಗಳು ನೋಂದಣಿ ಮಾಡಿಕೊಳ್ಳಬಹುದು. ಆಧಾರ್ ಕಾರ್ಡ್, ಮತದಾರರ ಗುರುತಿನ ಚೀಟಿ, ಪಾಸ್‌ಪೋರ್ಟ್, ಚಾಲನಾ ಪರವಾನಗಿ, ಪ್ಯಾನ್ ಕಾರ್ಡ್, ಎನ್‌ಪಿಆರ್ ಸ್ಮಾರ್ಟ್ ಕಾರ್ಡ್, ಭಾವಚಿತ್ರ ಇರುವ ಪಿಂಚಣಿ ಪತ್ರದಲ್ಲಿ ಯಾವುದಾದರೂ ಒಂದನ್ನು ಬಳಸಿ ನೋಂದಣಿ ಮಾಡಬಹುದು.

ಕೇಂದ್ರ ಸರ್ಕಾರವು ಗುರುತಿಸಿರುವ 8,600ಕ್ಕೂ ಹೆಚ್ಚು ಸರ್ಕಾರಿ ಮತ್ತು ಖಾಸಗಿ ಆಸ್ಪತ್ರೆಗಳಲ್ಲಿ ಲಸಿಕೆ ನೀಡಿಕೆ ನಡೆಯಲಿದೆ. ಪ್ರತಿ ದಿನ ಸಂಜೆ 3 ಗಂಟೆಯವರೆಗೆ ಈ ಆಸ್ಪತ್ರೆಗೆ ಭೇಟಿ ನೀಡಿಯೂ ಲಸಿಕೆಗಾಗಿ ನೋಂದಣಿ ಮಾಡಿಕೊಳ್ಳಬಹುದು.

ರಾಜ್ಯದ 250ಕ್ಕೂ ಹೆಚ್ಚು ಆಸ್ಪತ್ರೆಗಳು

ಬೆಂಗಳೂರು: ಲಸಿಕೆ ನೀಡಿಕೆಗಾಗಿ ರಾಜ್ಯದ 250ಕ್ಕೂ ಹೆಚ್ಚು ಆಸ್ಪತ್ರೆಗಳನ್ನು ಗುರುತಿಸಲಾಗಿದೆ.



ರಾಜ್ಯದಲ್ಲಿ ಜ.16 ರಿಂದ ಪ್ರಾರಂಭವಾಗಿದ್ದ ಮೊದಲ ಹಂತದ ಅಭಿಯಾನದಲ್ಲಿ ಆರೋಗ್ಯ ಕಾರ್ಯಕರ್ತರಿಗೆ ಲಸಿಕೆ ನೀಡಲಾಗಿದೆ. ಈವರೆಗೆ 4,47,267 ಮಂದಿ ಆರೋಗ್ಯ ಕಾರ್ಯಕರ್ತರು ಹಾಗೂ 1,58,575 ಮಂದಿ ಮುಂಚೂಣಿ ಯೋಧರು ಲಸಿಕೆ ಪಡೆದುಕೊಂಡಿದ್ದಾರೆ.

ರಾಜ್ಯದ ಎಲ್ಲ ಜಿಲ್ಲಾ ಆಸ್ಪತ್ರೆಗಳು, ತಾಲ್ಲೂಕು ಆಸ್ಪತ್ರೆಗಳು, ಆಯ್ದ ವೈದ್ಯಕೀಯ ಕಾಲೇಜುಗಳು ಹಾಗೂ ಕೆಲ ಖಾಸಗಿ ಆಸ್ಪತ್ರೆಗಳನ್ನು ಗುರುತಿಸಲಾಗಿದೆ. ಮಧ್ಯಾಹ್ನ 12 ಗಂಟೆಯಿಂದ ಸಂಜೆ 5 ಗಂಟೆಯವರೆಗೆ ಲಸಿಕೆ ನೀಡಲಾಗುತ್ತದೆ. ಸರ್ಕಾರಿ ಆಸ್ಪತ್ರೆಯಲ್ಲಿ ಉಚಿತವಾಗಿ ಲಸಿಕೆ ನೀಡಲಾಗುತ್ತದೆ. ಖಾಸಗಿ ಆಸ್ಪತ್ರೆಗಳಲ್ಲಿ ₹ 250 ಪಾವತಿಸಬೇಕು. ಈಗಾಲೇ ಮೊದಲ ಡೋಸ್ ಲಸಿಕೆ ಪಡೆದವರಿಗೆ ಎರಡನೇ ಡೋಸ್ ನೀಡಿಕೆ ಮುಂದುವರಿಯಲಿದೆ. ಅದೇ ರೀತಿ, ಮೊದಲ ಹಂತದಲ್ಲಿ ಬಿಟ್ಟು ಹೋದ ಮತ್ತು ಗೈರಾದ ಆರೋಗ್ಯ ಕಾರ್ಯಕರ್ತರು ಹಾಗೂ ಮುಂಚೂಣಿ ಯೋಧರಿಗೆ ಸಹ ಲಸಿಕೆ ನೀಡಲಾಗುತ್ತದೆ.

ಆಯ್ಕೆಗೆ ಅವಕಾಶ ಇಲ್ಲ

ದೇಶದಲ್ಲಿ ಈಗ ಎರಡು ಲಸಿಕೆಗಳು ಲಭ್ಯ ಇವೆ. ಪುಣೆಯ ಸೀರಂ ಇನ್‌ಸ್ಟಿಟ್ಯೂಟ್ ತಯಾರಿಸಿರುವ ಕೋವಿಶೀಲ್ಡ್ ಮತ್ತು ಹೈದರಾಬಾದ್‌ನ ಭಾರತ್ ಬಯೋಟೆಕ್ ಅಭಿವೃದ್ಧಿಪಡಿಸಿರುವ ಕೋವ್ಯಾಕ್ಸಿನ್‌ಗಳನ್ನು ಜನರು ಪಡೆದುಕೊಳ್ಳಬಹುದು. ಆದರೆ, ಇದರಲ್ಲಿ ಯಾವುದನ್ನು ಪಡೆದುಕೊಳ್ಳಬೇಕು ಎಂಬ ಆಯ್ಕೆಯು ಜನರಿಗೆ ಇಲ್ಲ. ಆಸ್ಪತ್ರೆಯವರು ಯಾವ ಲಸಿಕೆ ನೀಡುತ್ತಾರೆಯೋ ಅದನ್ನೇ ಪಡೆದುಕೊಳ್ಳಬೇಕು. ಹೆಚ್ಚಿನವರಿಗೆ ಕೋವಿಶೀಲ್ಡ್ ಲಸಿಕೆಯನ್ನೇ ನೀಡಲಾಗುವುದು. ಆದರೆ, ಪರಿಣಾಮಕಾರಿತ್ವದ ದತ್ತಾಂಶ ಲಭ್ಯ ಇಲ್ಲದೆಯೂ ಭಾರತೀಯ ಔಷಧ ನಿಯಂತ್ರಕರು ಅನುಮೋದನೆ ನೀಡಿರುವ ಕೋವ್ಯಾಕ್ಸಿನ್ ಲಸಿಕೆಯನ್ನು ಕೆಲವು ಜನರಿಗೆ ನೀಡಲಾಗುವುದು ಎಂದು ಮೂಲಗಳು ತಿಳಿಸಿವೆ.

ಲಸಿಕೆ ವೆಚ್ಚ: ಮಜುಂದಾರ್ ಶಾ ಆಕ್ರೋಶ

ಖಾಸಗಿ ಆಸ್ಪತ್ರೆಗಳಲ್ಲಿ ಕೋವಿಡ್-19 ಲಸಿಕೆಗೆ ₹ 250ರ ಮಿತಿ ವಿಧಿಸಿರುವ ಕೇಂದ್ರ ಸರ್ಕಾರದ ಕ್ರಮವನ್ನು ಬಯೋಕಾನ್ ಅಧ್ಯಕ್ಷೆ ಕಿರಣ್ ಮಜುಂದಾರ್ ಷಾ ವಿರೋಧಿಸಿದ್ದಾರೆ. ‘ಲಸಿಕೆಗೆ ನಿಗದಿ ಮಾಡಿರುವ ಬೆಲೆಯು ತೀರಾ ಕಡಿಮೆ. ಲಸಿಕೆ ಕಂಪನಿಗಳಿಗೆ ಮೋಸಹೋದಂತಹ ಅನುಭವ ಆಗುತ್ತಿದೆ’ ಎಂದು ಕೂಡ ಅವರು ಹೇಳಿದ್ದಾರೆ.

ಸರ್ಕಾರ ನಿಗದಿ ಮಾಡಿರುವ ₹ 250ರಲ್ಲಿ, ಒಂದು ಡೋಸ್ ಲಸಿಕೆಯ ವೆಚ್ಚ ₹ 150 ಹಾಗೂ ಸೇವಾ ಶುಲ್ಕ ₹ 100 ಸೇರಿದೆ ಎನ್ನಲಾಗಿದೆ.

ಎಸ್ಸೆಸ್ಸೆಲ್ಸಿ- ಪಿಯುಸಿ


ಪರೀಕ್ಷೆ ದಿಕ್ಸೂಚಿ

ಪ್ರಿಯ ವಿದ್ಯಾರ್ಥಿಗಳೇ, ಕೋವಿಡ್‌ನಿಂದಾಗಿ ಈ ವರ್ಷ ತರಗತಿಗಳಿಗೆ ಖುದ್ದಾಗಿ ಹಾಜರಾಗಲು ನಿಮಗೆ ಸಾಧ್ಯವಾಗದಿರಬಹುದು. ಎಸ್ಸೆಸ್ಸೆಲ್ಸಿ-ಪಿಯುಸಿ ಪರೀಕ್ಷೆ ಬರೆಯುವ ನಿಮಗಾಗಿ ಅನುಭವಿ ಶಿಕ್ಷಕರು ನೀಡಿರುವ ಮಾರ್ಗದರ್ಶನ ದಿಕ್ಸೂಚಿಯಲ್ಲಿ..

ಪುಟ-5

ವಾಸ್ತವ ಮುಚ್ಚಿಡದ ಪ್ರಧಾನಿ: ಆಜಾದ್

ಜಮ್ಮು (ಪಿಟಿಐ): ‘ಪ್ರಧಾನಿ ನರೇಂದ್ರ ಮೋದಿ ಅವರು ತಮ್ಮ ಹಿನ್ನೆಲೆಯನ್ನು ಜಗತ್ತಿನಿಂದ ಮುಚ್ಚಿಡಲು ಪ್ರಯತ್ನಿಸಲಿಲ್ಲ. ಇಂತಹ ನಾಯಕರನ್ನು ನಾನು ಇದಕ್ಕಾಗಿಯೇ ಇಷ್ಟಪಡುತ್ತೇನೆ’ ಎಂದು ಹಿರಿಯ ಕಾಂಗ್ರೆಸ್ ನಾಯಕ ಗುಲಾಂ ನಬಿ ಆಜಾದ್ ಹೇಳಿದರು.



ರಾಜ್ಯಸಭೆಯಲ್ಲಿ ಪ್ರಧಾನಿ ಮೋದಿ ಅವರು ಆಜಾದ್ ಅವರನ್ನು ಹೊಗಳಿ ಮಾತನಾಡಿದ ಕೆಲವೇ ದಿನಗಳಲ್ಲಿ ಆಜಾದ್ ಅವರಿಂದಲೂ ಇಂತಹ ಪ್ರಶಂಸಾ ನುಡಿ ಹೊರಬಿದ್ದಿದೆ.

ಭಾನುವಾರ ಇಲ್ಲಿ ‘ಗುಜ್ಜಾರ್ ದೇಶ್ ಚಾರಿಟಬಲ್ ಟ್ರಸ್ಟ್’ನ ಕಾರ್ಯಕ್ರಮದಲ್ಲಿ ಮಾತನಾಡಿದ ಆಜಾದ್, ‘ವ್ಯಕ್ತಿಯೊಬ್ಬ ತನ್ನ ಹಿನ್ನೆಲೆಯನ್ನು ಜಗತ್ತಿನೆದುರು ಮುಚ್ಚಿಡಲು ಯತ್ನಿಸಬಾರದು, ಆತನಿಗೆ ಆತನ ಮೂಲದ ಬಗ್ಗೆ ಹೆಮ್ಮೆ ಇರಬೇಕು’ ಎಂದರು.

‘ಕೆಲವು ನಾಯಕರ ಹಲವು ವಿಷಯಗಳಲ್ಲಿ ನಾನು ಬಹಳ ಅಚ್ಚರಿಗೊಳ್ಳುತ್ತೇನೆ. ನಾನು ಸಹ ಹಳ್ಳಿಯಿಂದ ಬಂದವ, ನನಗೆ ಅದಕ್ಕೆ ಹೆಮ್ಮೆ ಇದೆ. ದೊಡ್ಡ ನಾಯಕರಾದ ನಮ್ಮ ಪ್ರಧಾನಿ ಅವರೂ ಹಳ್ಳಿಯಿಂದಲೇ ಬಂದವರು, ಅವರು ಚಹಾ ಮಾರುತ್ತಿದ್ದವರು. ನಮ್ಮ ನಡುವೆ ರಾಜಕೀಯ ಭಿನ್ನತೆ ಇರಬಹುದು, ಆದರೆ ಅವರು ಕನಿಷ್ಠ ಪಕ್ಷ ತಮ್ಮ ವಾಸ್ತವವನ್ನು ಮರೆಮಾಚಲಿಲ್ಲ’ ಎಂದು ಪ್ರಶಂಸಿಸಿದರು.

ಕಾಂಗ್ರೆಸ್‌ನ ನಾಯಕತ್ವದ ವಿರುದ್ಧ ಬಹಿರಂಗವಾಗಿಯೇ ಹೇಳಿಕೆ ನೀಡಿದ ನಾಯಕರ ಗುಂಪಿನಲ್ಲಿದ್ದ (ಜಿ-23 ಎಂದೇ ಖ್ಯಾತವಾಗಿದೆ) ಆಜಾದ್ ಅವರನ್ನು ಪ್ರಧಾನಿ ನರೇಂದ್ರ ಮೋದಿ ಅವರು ಈಚೆಗೆ ರಾಜ್ಯಸಭೆಯಲ್ಲಿಮುಕ್ತ ಕಂಠದಿಂದ ಹೊಗಳಿದ್ದರು. ‘ಗುಲಾಂ ನಬಿ ಜೀ ಅವರ ಸ್ಥಾನವನ್ನು ತುಂಬುವುದು ಕಷ್ಟವಿದೆ. ಅವರಂತೆಯೇ ಕೆಲಸ ಮಾಡುವುದು ಸುಲಭವಲ್ಲ. ಅವರು ತಮ್ಮ ಪಕ್ಷದ ಬಗ್ಗೆ ಮಾತ್ರ ಕಾಳಜಿ ಇದ್ದವರಲ್ಲ. ಇಡೀ ದೇಶ ಹಾಗೂ ಸದನದ ಬಗ್ಗೆ ಕಾಳಜಿಯುಳ್ಳವರಾಗಿದ್ದಾರೆ’ ಎಂದು ಮೆಚ್ಚುಗೆ ವ್ಯಕ್ತಪಡಿಸಿದ್ದರು. ಈ ಮಾತುಗಳನ್ನಾಡುವ ಮಧ್ಯೆ ಮೋದಿ ಅವರು ಹಲವು ಬಾರಿ ಗದ್ಗದಿತರಾಗಿದ್ದರು.

ಶನಿವಾರ ಇಲ್ಲಿ ಆಜಾದ್ ನೇತೃತ್ವದಲ್ಲಿ ಪ್ರಮುಖ ಸಭೆಯೊಂದು ನಡೆದಿತ್ತು. ಪಕ್ಷದ ನಾಯಕತ್ವದ ವಿರುದ್ಧ ಧ್ವನಿ ಎತ್ತಿದ ಪ್ರಮುಖ ನಾಯಕರು ಇದರಲ್ಲಿ ಭಾಗವಹಿಸಿದ್ದರು. ಅದರ ಮರುದಿನವೇ ಆಜಾದ್ ಅವರಿಂದ ಪ್ರಧಾನಿ ಗುಣಗಾನ ನಡೆದಿದೆ.

ದೇವದತ್ತ ಪಡಿಕ್ಕಲ್ ಶತಕದ ‘ಹ್ಯಾಟ್ರಿಕ್’



ಶತಕ ಸಂಭ್ರಮದಲ್ಲಿ ಕರ್ನಾಟಕದ ದೇವದತ್ತ ಪಡಿಕ್ಕಲ್

ಬೆಂಗಳೂರು: ಕರ್ನಾಟಕ ತಂಡದ ಆರಂಭಿಕ ಬ್ಯಾಟ್ಸ್‌ಮನ್ ದೇವದತ್ತ ಪಡಿಕ್ಕಲ್ ವಿಜಯ್ ಹಜಾರೆ ಟ್ರೋಫಿ ಕ್ರಿಕೆಟ್ ಟೂರ್ನಿಯಲ್ಲಿ ಶತಕದ ಹ್ಯಾಟ್ರಿಕ್ ಸಾಧಿಸಿದರು.

ಭಾನುವಾರ ದೇವದತ್ತ, ಸಿ ಗುಂಪಿನ ಕೊನೆಯ ಪಂದ್ಯದಲ್ಲಿ ರೈಲ್ವೆಸ್ ವಿರುದ್ಧ ಅಜೇಯ ಶತಕ (145;125ಎಸೆತ, 9ಬೌಂಡರಿ, 9ಸಿಕ್ಸರ್) ದಾಖಲಿಸಿದರು. ಮುರಿಯದ ಮೊದಲ ವಿಕೆಟ್ ಜೊತೆಯಾಟದಲ್ಲಿ ದೇವದತ್ತ ಮತ್ತು ಸಮರ್ಥ್ (ಔಟಾಗದೆ 130; 118ಎಸೆತ, 17ಬೌಂಡರಿ) 285 ರನ್‌ಗಳನ್ನು ಸೇರಿಸಿದರು. ಇದರಿಂದಾಗಿ ಕರ್ನಾಟಕ ತಂಡವು 10 ವಿಕೆಟ್‌ಗಳಿಂದ ಗೆದ್ದಿತು.

ಇದರೊಂದಿಗೆ ತಂಡವು ಎಂಟರ ಘಟ್ಟಕ್ಕೆ ಪ್ರವೇಶಿಸಿತು. 20 ವರ್ಷದ ದೇವದತ್ತ(572 ರನ್), ಟೂರ್ನಿಯಲ್ಲಿ ಅತಿ ಹೆಚ್ಚು ರನ್‌ಗಳಿಸಿದವರ ಪಟ್ಟಿಯಲ್ಲಿ ಅಗ್ರಸ್ಥಾನಕ್ಕೇರಿದರು. ಹೋದ ವರ್ಷದ ಇಂಡಿಯನ್ ಪ್ರೀಮಿಯರ್ ಲೀಗ್ ಟಿ20 ಕ್ರಿಕೆಟ್ ಟೂರ್ನಿಯಲ್ಲಿ ವಿರಾಟ್ ಕೊಹ್ಲಿ ನಾಯಕತ್ವದ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡದಲ್ಲಿ ಆಡಿದ್ದರು. 10

ಶತಕಗಳ ಹ್ಯಾಟ್ರಿಕ್

ರನ್	ಎದುರಾಳಿ	ಕ್ರೀಡಾಂಗಣ
152	ಒಡಿಶಾ	ಕೆಎಸ್‌ಸಿಎ, ಆಲೂರು
126*	ಕೇರಳ	ಚಿನ್ನಸ್ವಾಮಿ, ಬೆಂಗಳೂರು
145*	ರೈಲ್ವೆಸ್	ಚಿನ್ನಸ್ವಾಮಿ, ಬೆಂಗಳೂರು

ಒಳ ಪುಟಗಳಲ್ಲಿ

4 ವರ್ಷಗಳಲ್ಲಿ 95.12 ಕೆ.ಜಿ ಚಿನ್ನ ಜಪ್ತಿ 3B



19 ಉಪಗ್ರಹಗಳು ಕಕ್ಷೆಗೆ 3B

‘ಅರುಣಾಚಲ ಪ್ರದೇಶ ಕೊರೊನಾ ಮುಕ್ತ’ 9

‘ವಿದ್ಯಾರ್ಥಿಗಳಿಗೆ ಸಿರಿಧಾನ್ಯ ಆಹಾರ’

ಹುಬ್ಬಳ್ಳಿ: ‘ಶಾಲೆಗಳ ಬಿಸಿಯೂಟ ಮತ್ತು ಹಾಸ್ಟೆಲ್ ವಿದ್ಯಾರ್ಥಿಗಳಿಗೆ ಸಿರಿಧಾನ್ಯದ ಆಹಾರ ನೀಡಲು ನಿರ್ಧರಿಸಲಾಗಿದೆ’ ಎಂದು ಕೃಷಿ ಸಚಿವ ಬಿ.ಸಿ. ಪಾಟೀಲ ಹೇಳಿದರು.

ನವಲಗುಂದ ತಾಲ್ಲೂಕಿನ ಬೆಳವಟಗಿಯಲ್ಲಿ ಭಾನುವಾರ ‘ರೈತರೊಂದಿಗೆ ಒಂದು ದಿನ’ ಕಾರ್ಯಕ್ರಮದಲ್ಲಿ ಮಾತನಾಡಿ, ‘ಸಿರಿಧಾನ್ಯದ ಆಹಾರವನ್ನು ವಾರಕ್ಕೊಮ್ಮೆ ಮಧ್ಯಾಹ್ನದ ಬಿಸಿಯೂಟಕ್ಕೆ ಮತ್ತು ಹಾಸ್ಟೆಲ್‌ನಲ್ಲಿ ದಿನಕ್ಕೊಮ್ಮೆ ನೀಡಲಾಗುವುದು. ಮೊದಲ ಹಂತದಲ್ಲಿ ಕೃಷಿ ವಿಶ್ವ ವಿದ್ಯಾಲಯದ ಹಾಸ್ಟೆಲ್ ವಿದ್ಯಾರ್ಥಿಗಳಿಗೆ ಕೊಡಲು ನಿರ್ಧರಿಸಲಾಗಿದೆ. ಇದರಿಂದ ರೈತರಿಗೂ ಉತ್ತೇಜನ ಸಿಕ್ಕಂತಾಗುತ್ತದೆ’ ಎಂದರು.

‘ಕೃಷಿ ಮಿತ್ರ ಯೋಜನೆಯಡಿ ಕೃಷಿ ಡಿಪ್ಲೊಮಾ ವಿದ್ಯಾರ್ಥಿಗಳನ್ನು ನೇಮಕ ಮಾಡಿಕೊಳ್ಳುವ ಕುರಿತು ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರು ಬಜೆಟ್‌ನಲ್ಲಿ ಘೋಷಣೆ ಮಾಡುವ ನಿರೀಕ್ಷೆ ಇದೆ’ ಎಂದು ಹೇಳಿದರು.

ಇಂದಿನ ಪಾಡ್‌ಕಾಸ್ಟ್ ವಿಶೇಷ

ವಚನವಾಣಿ

ಪ್ರತೀ ದಿನ: ದಿನದ ಸೂಕ್ತಿ, ಸಂಪಾದಕೀಯ, ಪ್ರಚಲಿತ

Prajavani.net/podcast

ಚಿನಕುರಳಿ

ಪ್ರಕಾಶ್ ಶೆಟ್ಟಿ



ಮಾ.7ರಿಂದ 'ಜ್ಞಾನ ಯಜ್ಞ'

ಬೆಂಗಳೂರು: ಕಬೀರ್ ಟ್ರಸ್ಟ್, ಪ್ರತಿ ವರ್ಷದಂತೆ ಈ ಬಾರಿಯೂ ಎಸ್ಸೆಸ್ಸೆಲ್ಸಿ ಓದುತ್ತಿರುವ ಬಡ ವಿದ್ಯಾರ್ಥಿಗಳಿಗಾಗಿ '100 ದಿನಗಳ ಜ್ಞಾನ ಯಜ್ಞ' ಉಪನ್ಯಾಸ ಸರಣಿ ಹಮ್ಮಿಕೊಂಡಿದ್ದು, ಇದು ಮಾರ್ಚ್ 7ರಿಂದ ಆರಂಭವಾಗಲಿದೆ.

ಜೆ.ಸಿ.ನಗರದ ದೂರದರ್ಶನ ಕೇಂದ್ರದ ಹಿಂಭಾಗದಲ್ಲಿರುವ ಕಬೀರ್ ಆಶ್ರಮದಲ್ಲಿ ಪ್ರತಿದಿನ ಬೆಳಿಗ್ಗೆ 6ರಿಂದ 8ರವರೆಗೆ ಅನುಭವಿ ಶಿಕ್ಷಕರು ಉಪನ್ಯಾಸ ನೀಡಲಿದ್ದಾರೆ. ಕಬೀರ್ ಆಶ್ರಮದ ಮಹಡಿ ಮೇಲಿರುವ ಐ-ಟೆಕ್ ಇನ್‌ಸ್ಟಿಟ್ಯೂಟ್ ಆಫ್ ಕಂಪ್ಯೂಟರ್ಸ್ ಕಚೇರಿಯಲ್ಲಿ ಅರ್ಜಿಗಳು ಲಭ್ಯವಿದ್ದು, ಆಸಕ್ತರು ಬೆಳಿಗ್ಗೆ 8 ರಿಂದ ರಾತ್ರಿ 8ರೊಳಗೆ ಇವುಗಳನ್ನು ಪಡೆದುಕೊಳ್ಳುವಂತೆ ಪ್ರಕಟಣೆ ತಿಳಿಸಿದೆ. ಮಾಹಿತಿಗೆ 9845011000 ಸಂಪರ್ಕಿಸಬಹುದು.

ನಿಧನವಾರ್ತೆ

ಎಚ್.ಬಿ.ಮಂಜುನಾಥ್



ನೆಲಮಂಗಲ: ಸಾರ್ವಜನಿಕ ಶಿಕ್ಷಣ ಇಲಾಖೆಯ ನಿವೃತ್ತ ಉಪನಿರ್ದೇಶಕ ಎಚ್.ಬಿ. ಮಂಜುನಾಥ್ (64) ಹೃದಯಾಘಾತದಿಂದ ನಿಧನರಾದರು. ಅವರಿಗೆ ಪತ್ನಿ, ಪುತ್ರ, ಪುತ್ರಿ ಇದ್ದಾರೆ. ಸೋಮವಾರ ಮಧ್ಯಾಹ್ನ ಸ್ವಗ್ರಾಮ ಮಧುರೆ ಹೋಬಳಿಯ ಹೊನ್ನಾವರದಲ್ಲಿ ಅಂತ್ಯಕ್ರಿಯೆ ನಡೆಯಲಿದೆ.

ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಡಾ.ಸಿ. ಸೋಮಶೇಖರ್ ಎಚ್ಚರಿಕೆ

'ಕನ್ನಡಿಗರ ಸ್ವಾಭಿಮಾನ ಕೆಣಕಿದರೆ ತಕ್ಕ ಪಾಠ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಅನಗತ್ಯವಾಗಿ ಆಗಾಗ ಗಡಿ ಭಾಗದಲ್ಲಿನ ಕನ್ನಡಿಗರ ಸ್ವಾಭಿಮಾನ ಕೆಣಕುವ ಕಾರ್ಯಗಳಿಗೆ ಮಹಾರಾಷ್ಟ್ರ ಸರ್ಕಾರ ಮುಂದಾಗಬಾರದು. ಕನ್ನಡಿಗರು ಒಂದು ಇಂಚು ಜಾಗವನ್ನೂ ಅವರಿಗೆ ಬಿಟ್ಟುಕೊಡುವುದಿಲ್ಲ' ಎಂದು ಕರ್ನಾಟಕ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಡಾ.ಸಿ. ಸೋಮಶೇಖರ್ ತಿಳಿಸಿದರು.

ಹೃದಯವಾಹಿನಿ ಸಂಸ್ಥೆಯು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಯೋಗದಲ್ಲಿ ನಗರದಲ್ಲಿ ಹಮ್ಮಿಕೊಂಡಿದ್ದ 14ನೇ ರಾಷ್ಟ್ರೀಯ ಕನ್ನಡ ಸಂಸ್ಕೃತಿ ಸಮ್ಮೇಳನದಲ್ಲಿ ಮಾತನಾಡಿದರು.

'ಭಾಷಾ ಸಾಮರಸ್ಯ ಮತ್ತು ಸಹಬಾಳ್ವೆಯೇ ಗಡಿ ಭಾಗದ ಜನರ ಸಾಮಾಜಿಕ ಭದ್ರತೆಗೆ ಪ್ರಮುಖ ಸಾಧನ ಎಂಬುದನ್ನು ಮಹಾರಾಷ್ಟ್ರ ಸರ್ಕಾರ ಅರಿತುಕೊಳ್ಳಬೇಕು. ಗಡಿ ಭಾಗದಲ್ಲಿ ಕನ್ನಡಿಗರ ಸ್ಥಿತಿ ಚಿಂತಾಜನಕವಾಗಿದೆ. ಮರಾಠಿ ಪುಂಡರು ನಡೆಸುತ್ತಿರುವ ಉದ್ಧಟತನ ಸಹಿಸಲಾಗುತ್ತಿಲ್ಲ.



ಸಮ್ಮೇಳನವನ್ನು ಡಾ.ಸಿ. ಸೋಮಶೇಖರ್ ಉದ್ಘಾಟಿಸಿದರು. ಸಮ್ಮೇಳನ ಸಮಿತಿಯ ಅಧ್ಯಕ್ಷ ಕೆ.ಪಿ. ಮಂಜುನಾಥ್ ಸಾಗರ್, ಮಸ್ಕತ್‌ನ ಕನ್ನಡಿಗರ ಅಧ್ಯಕ್ಷ ಎಸ್.ಡಿ.ಟಿ. ಪ್ರಸಾದ್, ವಿಶ್ವ ಕನ್ನಡ ಸಮ್ಮೇಳನ ಸಮಿತಿಯ ಗೌರವಾಧ್ಯಕ್ಷ ಹಾಜಿ ಮುನೀರ್ ಬಾವ, ಚಿತ್ತೂರು ಆರ್‌ವಿಎಸ್ ವೈದ್ಯಕೀಯ ಕಾಲೇಜಿನ ಆರ್. ವೆಂಕಟಸ್ವಾಮಿ ಇದ್ದರು.

ಮಹಾರಾಷ್ಟ್ರ ಗಡಿ ಭಾಗದಲ್ಲಿನ ನಮ್ಮ ಕನ್ನಡಿಗರ ಭಾವನೆಗಳಿಗೆ ಮತ್ತು ಅವರ ಸಮಸ್ಯೆಗಳಿಗೆ ರಾಜ್ಯ ಸರ್ಕಾರ ಸ್ಪಂದಿಸಬೇಕು' ಎಂದು ತಿಳಿಸಿದರು.

'ಕನ್ನಡ ಬಳಕೆಯು ಹೆಚ್ಚಾಗಬೇಕಾದರೆ ಪ್ರತಿಯೊಬ್ಬರೂ ಮನೆಯಲ್ಲಿ ಕನ್ನಡ ಬಳಸುವ ಪ್ರತಿಜ್ಞೆ ಮಾಡಬೇಕು. ಸಾಮಾನ್ಯ ಜನರ ಭಾಷೆಯಾಗಿರುವ ಕನ್ನಡವನ್ನು ಆಡಳಿತ ಭಾಷೆಯಾಗಿಸಬೇಕು. ಇದಕ್ಕೆ ರಾಜಕೀಯ ಇಚ್ಛಾಶಕ್ತಿಯೂ ಅಗತ್ಯ. ಆಂಗ್ಲ ಭಾಷೆಯ ವ್ಯಾಮೋಹವು ಕನ್ನಡದ ಅಸ್ಮಿತೆಗೆ ಧಕ್ಕೆಯಾಗುತ್ತಿದೆ. ವಚನ ಸಾಹಿತ್ಯ, ದಾಸ ಸಾಹಿತ್ಯದಲ್ಲಿನ ಮೌಲ್ಯಗಳನ್ನು ಮಕ್ಕಳಿಗೆ ತಿಳಿಸುವ ಕೆಲಸವಾಗಬೇಕು' ಎಂದರು.

ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ ಸುರೇಶ್ ಕುಮಾರ್, ರಾಜಣ್ಣ ಎಚ್., ಎಚ್.ಜಿ. ಅನಿಲ್ ಕುಮಾರ್, ಅಬ್ದುಲ್ ಸುಬಾನ್, ವನಿತಾ ಕೆ., ವಿನಯ್ ಕೆ.ಸಿ., ಬಾಣಾವರ ವಿಜಯ್, ವಿಜಯ್ ಶ್ರೀನಿವಾಸ್ ಹಾಗೂ ಕೆ.ಪಿ ನಾರಾಯಣ ಅವರಿಗೆ 'ಹೃದಯವಂತ ಪ್ರಶಸ್ತಿ' ಪ್ರದಾನ ಮಾಡಲಾಯಿತು.

ಸುದ್ದಿ 2 ನಿಮಿಷ

ನ್ಯಾಯಾಂಗ ಇಲಾಖೆಗೆ ಹೆಚ್ಚಿನ ಅನುದಾನಕ್ಕೆ ಮನವಿ

ಬೆಂಗಳೂರು: ಬಜೆಟ್‌ನಲ್ಲಿ ವಕೀಲರಿಗೆ ಮತ್ತು ನ್ಯಾಯಾಂಗ ಇಲಾಖೆಗೆ ಹೆಚ್ಚು ಅನುದಾನ ನೀಡುವಂತೆ ಬಿಜೆಪಿ ಕಾನೂನು ಪ್ರಕೋಷ್ಠವು ಕಾನೂನು ಮತ್ತು ಸಂಸದೀಯ ಸಚಿವ ಬಸವರಾಜ ಬೊಮ್ಮಾಯಿ ಅವರಿಗೆ ಮನವಿ ಸಲ್ಲಿಸಿದೆ.

ರಾಜ್ಯದಲ್ಲಿ ಒಟ್ಟು 1.11 ಲಕ್ಷಕ್ಕೂ ಹೆಚ್ಚು ವಕೀಲರು ಇದ್ದು, 200 ವಕೀಲರ ಸಂಘಗಳಿವೆ. ಈ ವಕೀಲರ ಹಾಗೂ ವಕೀಲರ ಸಂಘಗಳ ಮೂಲ ಬೆಂಗಳೂರಿನ ಕರ್ನಾಟಕ ರಾಜ್ಯ ವಕೀಲರ ಪರಿಷತ್. ಹಳೆಯ ಚುನಾವಣಾ ಆಯೋಗದ ಕಟ್ಟಡವನ್ನು ತಾತ್ಕಾಲಿಕವಾಗಿ ಪರಿಷತ್ತಿಗೆ ನೀಡಲಾಗಿದೆ. ಅದರ ಸಂಪೂರ್ಣ ಸ್ವಾಧೀನತೆಯನ್ನು ರಾಜ್ಯ ವಕೀಲರ ಪರಿಷತ್ತಿಗೇ ನೀಡಬೇಕು ಎಂದು ಮನವಿ ಮಾಡಲಾಗಿದೆ.

ವಕೀಲರಿಗೆ ಹಾಗೂ ಅವರ ಕುಟುಂಬಕ್ಕೆ ಆರೋಗ್ಯ ವಿಮೆ ಕಲ್ಪಿಸಲು ಬಜೆಟ್‌ನಲ್ಲಿ ಅನುದಾನ ಘೋಷಿಸಬೇಕು. ರಾಜ್ಯದಲ್ಲಿ ಸಹಾಯಕ ಸರ್ಕಾರಿ ವಕೀಲರು ಹಾಗೂ ಸ್ಪೆಷಲ್ ಪಿ.ಪಿ, ಎಜಿಪಿ, ಡಿಜಿಪಿ, ಜಿಎ,ಜಿಪಿ ಖಾಲಿ ಇದ್ದ ಹುದ್ದೆಗಳನ್ನು ಆದಷ್ಟು ಶೀಘ್ರ ಭರ್ತಿ ಮಾಡಬೇಕು ಎಂದು ಕೋರಲಾಯಿತು.

ಕಾನೂನು ಪ್ರಕೋಷ್ಠದ ಸಂಚಾಲಕ ಎಸ್.ಎಸ್. ಮಿಟ್ಟಲಕೋಡ್, ಪ್ರಕೋಷ್ಠದ ಸಹ ಸಂಚಾಲಕ ಯೋಗೇಂದ್ರ ಹೊಡಾಘಟ್ಟ, ಮಾಜಿ ಸಂಚಾಲಕ ವಿವೇಕ್ ರೆಡ್ಡಿ ಮತ್ತು ಆರ್. ರಾಜಣ್ಣ ನಿಯೋಗದಲ್ಲಿದ್ದರು.

ಲಯನ್ಸ್ ವತಿಯಿಂದ ₹15 ಲಕ್ಷದ ಸೌಲಭ್ಯ ವಿತರಣೆ



ನೆಲಮಂಗಲ: 'ಹಳೆ ವಿದ್ಯಾರ್ಥಿಗಳು ಶಾಲೆಯ ಅಭಿವೃದ್ಧಿಗೆ ಸಹಕರಿಸಿ ಋಣ ಸಂದಾಯ ಮಾಡಬೇಕು' ಎಂದು ಲಯನ್ಸ್ ಸಂಸ್ಥೆಯ ಎಂ.ಬಿ. ದೀಪಕ್ ಸುಮನ್ ತಿಳಿಸಿದರು.

ಲಯನ್ಸ್ ಸಂಸ್ಥೆ ವತಿಯಿಂದ ಹಮ್ಮಿಕೊಂಡಿದ್ದ ವಿವಿಧ ಸೇವೆಗಳ ವಿತರಣಾ ಸಮಾರಂಭದಲ್ಲಿ ಪಟ್ಟಣದ ಸರ್ಕಾರಿ ಪ್ರೌಢಶಾಲೆ ವಿದ್ಯಾರ್ಥಿಗಳಿಗೆ ಟ್ಯಾಬ್‌ಗಳನ್ನು ವಿತರಿಸಿ ಮಾತನಾಡಿದರು.

'ಲಯನ್ಸ್ ಕಣ್ಣು ತಪಾಸಣೆ ಮತ್ತು ಚಿಕಿತ್ಸಾ ಕೇಂದ್ರ ನೆಲಮಂಗಲಕ್ಕೆ ಮಂಜೂರಾಗಿದ್ದು, ಸೇವಾ ಕಾರ್ಯಗಳಲ್ಲಿ ಇನ್ನೂ ಹೆಚ್ಚು ಸಕ್ರಿಯರಾಗಲು ಅವಕಾಶ ದೊರೆತಂತಾಗಿದೆ' ಎಂದರು.

ಲಯನ್ಸ್ ಸಂಸ್ಥೆಯ ಅಧ್ಯಕ್ಷ ಡಾ.ಎಂ.ಜಯಪ್ರಸಾದ್, ಲಯನ್ಸ್ ಸಂಸ್ಥೆಯ ಕಾರ್ಯದರ್ಶಿ ಎನ್.ಪಿ.ಹೇಮಂತಕುಮಾರ್ ಮಾತನಾಡಿದರು.

ಪುರಸಭೆ ವ್ಯಾಪ್ತಿಯಲ್ಲಿ ಕಸದ ಬುಟ್ಟಿಗಳ ವಿತರಣೆ, ಸರ್ಕಾರಿ ಶಾಲೆಯ ಕಂಪ್ಯೂಟರ್ ಪ್ರಯೋಗಾಲಯಕ್ಕೆ ಯುಪಿಎಸ್, ಟ್ಯಾಬ್‌ಗಳ ವಿತರಣೆ, ಸರ್ಕಾರಿ ಪದವಿ ಪೂರ್ವ ಕಾಲೇಜಿನ ವಿಜ್ಞಾನ ಪ್ರಯೋಗಾಲಯದ ಸಲಕರಣೆಗಳು, ಕಾಲೇಜಿನ ಸಭಾಂಗಣ ನಿರ್ಮಾಣ, ಬಸವಣ್ಣದೇವರ ಮಠದಲ್ಲಿ ಶುದ್ಧ ಕುಡಿಯುವ ನೀರಿನ ಘಟಕವನ್ನು ವಿದ್ಯಾರ್ಥಿಗಳ ಉಪಯೋಗಕ್ಕೆ ನೀಡಲಾಯಿತು.

ಲಯನ್ಸ್ ಸಂಸ್ಥೆಯ ಮನೋಹರನ್ ನಂಬಿಯಾರ್, ರಾಜಶೇಖರಯ್ಯ, ಪದಾಧಿಕಾರಿಗಳಾದ ಅರವಿಂದ್ ಶೆಟ್ಟಿ, ಅಜಿತ್ ಬಾಬು, ರಾಮನಾಥನ್ ನಾರಾಯಣ್, ಎಲ್.ಸಿ.ರಾಮಕೃಷ್ಣ, ಡಾ.ರಾಜೇಂದ್ರಪ್ರಸಾದ್, ಡಾ.ನಸೀರ್ ಅಬ್ಬಾಸ್, ಡಾ.ಲಕ್ಷ್ಮೀನಾರಾಯಣ ಶ್ರೇಷ್ಠಿ, ಡಾ.ವೆಂಕಟೇಶಲು ಇದ್ದರು.

'ವಿಶ್ವಭಾರತಿ ಸೊಸೈಟಿ– ಸಂಕಟ ಬಗೆಹರಿಸಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಶ್ವಭಾರತಿ ಹೌಸ್ ಬಿಲ್ಡಿಂಗ್ ಕೋ-ಆಪರೇಟಿವ್ ಸೊಸೈಟಿ ವತಿಯಿಂದ ಸಚ್ಚಿದಾನಂದ ನಗರದಲ್ಲಿ ನಿರ್ಮಾಣವಾಗಿರುವ ಬಡಾವಣೆಯ ನಿವೇಶನದಾರರಿಗೆ ಸ್ವಂತ ಮನೆ ನಿರ್ಮಿಸಲು ಮೂರು ದಶಕಗಳಿಂದ ಅಡ್ಡಿಪಡಿಸಲಾಗುತ್ತಿದೆ. ಇಲ್ಲಿನ ನಿವೇಶನದಾರರ ಸಮಸ್ಯೆಗೆ ಸರ್ಕಾರ ಮುಕ್ತಿ ನೀಡಬೇಕು ಎಂದು ಸಚ್ಚಿದಾನಂದ ನಗರ ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘವು ಒತ್ತಾಯಿಸಿದೆ.

'ಸೊಸೈಟಿಯು 65 ಎಕರೆಗಳಷ್ಟು ವಿಶಾಲ ಜಾಗದಲ್ಲಿ ಅಭಿವೃದ್ಧಿಪಡಿಸಿರುವ ಬಡಾವಣೆಯಲ್ಲಿ 170ಕ್ಕೂ ಹೆಚ್ಚು ಹಿರಿಯ ನಾಗರಿಕರು ನಿವೇಶನ ಹೊಂದಿದ್ದಾರೆ. ಸರ್ವೆ ನಂಬರ್ 212 ಮತ್ತು 213ರಲ್ಲಿ ಒಟ್ಟು 11 ಎಕರೆ ಪ್ರದೇಶದಲ್ಲಿ ನಿವೇಶನಗಳು ಸೊಸೈಟಿ ಸದಸ್ಯರ ಸ್ವಾಧೀನದಲ್ಲಿದೆ. ಆದರೆ, ಮುಂಗಡ ಪಡೆದು ಲಿಖಿತ ಒಪ್ಪಂದದ ಮೂಲಕ ಬಡಾವಣೆಗೆ ಜಾಗ ಬಿಟ್ಟುಕೊಟ್ಟ ಭೂಮಾಲೀಕರೊಬ್ಬರು ಸದಸ್ಯರು ಇಲ್ಲಿ ಮನೆ ನಿರ್ಮಿಸಲು ಅಡ್ಡಿಪಡಿಸುತ್ತಿದ್ದಾರೆ' ಎಂದು ಸಂಘವು ದೂರಿದೆ.

'ಜಾಗ ಬಿಟ್ಟುಕೊಟ್ಟ ಭೂಮಾಲೀಕರ ವಿರುದ್ಧ ಸೊಸೈಟಿಯು 1996ರಲ್ಲಿ ಸಿವಿಲ್ ಕೋರ್ಟ್‌ನಲ್ಲಿ ಮೊಕದ್ದಮೆ ದಾಖಲಿಸಿದ್ದು, ನ್ಯಾಯಾಲಯವು ಈ ಬಡಾವಣೆಯ ಕಾನೂನುಬದ್ಧತೆಯನ್ನು 2005ರಲ್ಲಿ ಎತ್ತಿ ಹಿಡಿದಿದೆ. ಕ್ರಯಪತ್ರಗಳನ್ನು ನೋಂದಣಿ ಮಾಡುವಂತೆ ಉಪನೋಂದಣಾಧಿಕಾರಿಗಳಿಗೆ ಆದೇಶವನ್ನೂ ಮಾಡಿದೆ. 2010ರಲ್ಲಿ ಭೂಮಾಲೀಕರು ಸಲ್ಲಿಸಿದ ಮೇಲ್ಮನವಿಯನ್ನು ಹೈಕೋರ್ಟ್ ತಳ್ಳಿಹಾಕಿದೆ. ಇನ್ನೊಬ್ಬ ವ್ಯಕ್ತಿಯು ಈ ಸ್ವತ್ತಿನ ಮಾಲೀಕ ನಾನು ಎಂದು ಇದೇ ಫೆ 13ರಂದು ದಾಂಧಲೆ ನಡೆಸಿದ್ದಾರೆ.'

'ಈ ನಡುವೆ ಸರ್ವೆ ನಂಬರ್ 213ರ ಜಾಗವನ್ನು ಕ್ರಯಪತ್ರದ ಮೂಲಕ ಬೇರೊಬ್ಬರ ಹೆಸರಿಗೆ ₹ 27.50 ಕೋಟಿಗೆ ಮಾರಾಟ ಮಾಡಲಾಗಿದ್ದು, ಇದರ ನೋಂದಣಿಯೂ ನಡೆದಿದೆ. ಈ ಬೆಳವಣಿಗೆಗಳಿಂದ ಇಲ್ಲಿ ನಿವೇಶನ ಹೊಂದಿರುವ ಹಿರಿಯ ನಾಗರಿಕರು ರೋಸಿ ಹೋಗಿದ್ದಾರೆ' ಎಂದು ಸಂಘವು ಹೇಳಿದೆ.

'ಈ ಅಕ್ರಮ ನೋಂದಣಿಯನ್ನು ರದ್ದುಪಡಿಸಿ, ಈ ಬಡಾವಣೆಯ ನಿವೇಶನದಾರರಿಗೆ ಸರ್ಕಾರ ನ್ಯಾಯ ಒದಗಿಸಬೇಕು ಹಾಗೂ ಅವರು ಮನೆ ನಿರ್ಮಿಸುವುದಕ್ಕೆ ಪೊಲೀಸ್ ಇಲಾಖೆ ರಕ್ಷಣೆ ಒದಗಿಸಬೇಕು ಎಂದು ಸಂಘದ ಅಧ್ಯಕ್ಷ ದಾಮೋದರ ನಾಯ್ಡು ಒತ್ತಾಯಿಸಿದ್ದಾರೆ.

ತಿಗಳರ ಸಂಘದಿಂದ ವಿದ್ಯಾರ್ಥಿ ವೇತನಕ್ಕೆ ಅರ್ಜಿ ಆಹ್ವಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ತಿಗಳರ ಸಾರ್ವಜನಿಕ ವಿದ್ಯಾಭಿವೃದ್ಧಿ ಸಂಘವು 2020ನೇ ಸಾಲಿನ ಎಸ್ಸೆಸ್ಸೆಲ್ಸಿ ಹಾಗೂ ಪಿ.ಯು.ಸಿ.ಪರೀಕ್ಷೆಗಳಲ್ಲಿ ಶೇ 85ಕ್ಕಿಂತಲೂ ಹೆಚ್ಚಿನ ಅಂಕಗಳೊಂದಿಗೆ ತೇರ್ಗಡೆ ಹೊಂದಿರುವ ಸಮಾಜದ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ ನೀಡಲಿದೆ.

ಅಗ್ನಿವಂಶ ಕ್ಷತ್ರಿಯ ಪಂಗಡಕ್ಕೆ ಸೇರಿದ ವಿದ್ಯಾರ್ಥಿಗಳು ಅರ್ಜಿ ಸಲ್ಲಿಸಲು ಅರ್ಹರು. ಆಸಕ್ತರು ಇತ್ತೀಚಿನ ಭಾವಚಿತ್ರ, ಸ್ವವಿವರ, ಮೊಬೈಲ್ ಸಂಖ್ಯೆ, ಅಂಕಪಟ್ಟಿ ಹಾಗೂ ಜಾತಿ ಪ್ರಮಾಣ ಪತ್ರದ ನೆರಳಚ್ಚು ಪ್ರತಿಗಳೊಂದಿಗೆ ಮಾರ್ಚ್ 10ರೊಳಗೆ ಅರ್ಜಿ ಸಲ್ಲಿಸಬಹುದು.

ವಿಳಾಸ: ಕಾರ್ಯದರ್ಶಿ, ಕರ್ನಾಟಕ ತಿಗಳರ ಸಾರ್ವಜನಿಕ ವಿದ್ಯಾಭಿವೃದ್ಧಿ ಸಂಘ, ರಾಜಾಜಿನಗರ 5ನೇ ಬ್ಲಾಕ್, ಬೆಂಗಳೂರು-10.

FORM-IV
PRAJAVANI

STATEMENT about ownership and other particulars about newspaper 'PRAJAVANI' Bangalore as required to be published under Section 19-D (b) of the Press and Registration of Books Act, read with Rule-8 of the Registration of Newspapers (Central) Rules, 1956.

1. Place of Publication: Bangalore

2. Periodicity of Publication: Daily

3. Printer : Mr. B. A. Ravi, Citizen of India, No.1857/P HIG, Sri Ranga Nilaya, Jalavahini Road, Srirampuram 2nd Stage, Mysore-570023

4. Publisher : Mr. B. A. Ravi, Citizen of India, No.1857/P HIG, Sri Ranga Nilaya, Jalavahini Road, Srirampuram 2nd Stage, Mysore-570023

5. Editor : Mr. Sudesha Doddapalya Citizen of India, Olavu, # 286, 12th Cross, Janatha Nagar, T.K. Layout, Mysore.

6.Names and addresses of individuals who own the newspaper and partners or shareholders holding more than one percent of the total capital.

Proprietors: The Printers (Mysore) Pvt. Ltd. CIN. No. U22110KA1948PTC000521 Plot No. 7-12, Kumbalgodu Industrial Area II Phase, Mysore Road, Bangalore-560 074.

Shareholders holding more than one percent of the total capital:

1. Mr. K. N. Hari Kumar, No. 22 1st 'A' Main, 1st Block, RMV 2nd Stage, Bangalore-560 094.

2. Mr. K. N. Tilak Kumar, No. 173, Subbaramachetty Road, Basavanagudi, Bangalore-560 004.

3. Mr. K. N. Shanth Kumar, No. 298/A, 1st Main Road, 8th Block, Jayanagar, Bangalore - 560 082.

4. K. N. Guruswamy & Co. Pvt. Ltd. No. 75, M. G. Road, Bangalore-560 001 5. Legal Heirs of Late Khan Bahadur Budan Saheb, Landlord, Hindupur, Andhra Pradesh. 6. Mr. S. N. Srinivasa Murthy, Mr. S. N. Shiva Shankar, No. 10, VI Main, II Cross, Gandhinagar, Bangalore - 560 009. 7. Mr. S. D. Eswarasa, Sri. Durgamba Lodge, 305, Subedar Chatram Road, 6th Main, Gandhinagar, Bangalore - 560 009. 8. Mr. S.D. Aswathnarayana, Mr. S. D. Nageshwar, Mr. S. D. Shivaram, Mr. S. D. Krishnamurthy, Mr. S. N. Raghavendra, No. 361, II 'C' Cross, 4th Main Road, 3rd Stage, 3rd Block, Basaveswaranagar, Bangalore-560 079 9. Mr. M. P. Manjunath, No.172, Ground Floor, Moksha Marga, Siddartha Layout, Mysore - 570011, 10. Mr. S.D. Muniswamy, Swamy Dhondusa Fabric, Sri Lodge (Basement) No. 9, 6th Main, 2nd Cross, Gandhinagar, Bangalore-560 009 11. Mrs. Prema B. Moola, Mr. Ananda Ranga Moola, Mr. Ved Manu Moola, & Ms. Dev Siri Moola, No. 9, 'Rangapuri', Lalbagh Road, Bangalore-560 027. 12. Mrs. Pratibha S. Moola, Mr. Siddartha S. Moola, Ms. Lakshmi S. Moola, Ms. Vidya S. Moola, Ms. Aparna S. Moola, No. 38, Wellington Street, Richmond Town, Bangalore-560 025. 13. Mrs. Anuradha R. Moola, Ms. Sharuna R. Moola, Ms. Bhavana R. Moola, 'Centropolis', No. 21, Langford Road, Richmond Town, Bangalore-560 025. 14. Mrs. Dechu R. Moola, Mr. Vishnu R. Moola, Ms. Brinda Devi Moola, Ms. Maya R. Moola, Flat No. 32, August Mansion Apts. No. 42, Curley Street, Richmond Town, Bangalore-560 025.

I, B. A. Ravi, hereby declare that the particulars given above are true to the best of my knowledge and belief.

Place : Bangalore
Date : 28-02-2021

Sd/-
(B. A. Ravi)
Publisher

ಕಾವೇರಿ ನೀರಿನ ಸಂಪರ್ಕಕ್ಕೆ ಕಾಮಗಾರಿಗೆ ಚಾಲನೆ

ಪ್ರಜಾವಾಣಿ ವಾರ್ತೆ



ಕಾಮಗಾರಿಗೆ ಶಾಸಕ ಕೃಷ್ಣಬೈರೇಗೌಡ ಚಾಲನೆ ನೀಡಿದರು.

ಯಲಹಂಕ: ಬ್ಯಾಟರಾಯನಪುರ ಕ್ಷೇತ್ರ ವ್ಯಾಪ್ತಿಯ ಎಮರಾಲ್ಡ್ ಬಡಾವಣೆಯಲ್ಲಿ ಕಾವೇರಿ ನೀರು ಸಂಪರ್ಕ ಕಲ್ಪಿಸುವ ಸಲುವಾಗಿ ಕೊಳವೆಮಾರ್ಗ ಅಳವಡಿಸುವ ಕಾಮಗಾರಿಗೆ ಶಾಸಕ ಕೃಷ್ಣ ಬೈರೇಗೌಡ ಚಾಲನೆ ನೀಡಿದರು.

ನಂತರ ಮಾತನಾಡಿದ ಅವರು, 'ಈ ಬಡಾವಣೆಯ ನಾಗರಿಕರ ಹಲವು ದಿನಗಳ ಬೇಡಿಕೆಯಂತೆ ನೀರಿನ ಸಮಸ್ಯೆ ಪರಿಹರಿಸಲು ಮೊದಲ ಆದ್ಯತೆ ನೀಡಿ, ಕಾವೇರಿ ಪೈಪ್‌ಲೈನ್ ಅಳವಡಿಸುವ ಕಾಮಗಾರಿ ಮಂಜೂರು ಮಾಡಿಸಿ, ಕೆಲಸ ಆರಂಭಿಸಲಾಗಿದೆ. ಆದಷ್ಟು ಬೇಗನೆ ಕಾಮಗಾರಿ ಪೂರ್ಣಗೊಳ್ಳಲಿದ್ದು, ನಂತರ ಬಡಾವಣೆಯ ರಸ್ತೆ ಅಭಿವೃದ್ಧಿ ಸೇರಿದಂತೆ ಬಾಕಿಯಿರುವ ಮೂಲಸೌಕರ್ಯಗಳನ್ನು ಕಲ್ಪಿಸಲು ಕ್ರಮ ಕೈಗೊಳ್ಳಲಾಗುವುದು. ನಾಗರಿಕರು ಕೂಡಲೇ ಅರ್ಜಿ ಸಲ್ಲಿಸಿ, ಕಾವೇರಿ ನೀರಿನ ಸಂಪರ್ಕ ಪಡೆದರೆ ನೀರು ಸರಬರಾಜು ಮಾಡಲು ಸಾಧ್ಯವಾಗಲಿದೆ ಎಂದು ತಿಳಿಸಿದರು.

ಕಾಂಗ್ರೆಸ್ ಮುಖಂಡರಾದ ಎಚ್.ಎ.ಶಿವಕುಮಾರ್, ಗೋವಿಂದ ರಾಜ್, ರಮೇಶ್, ಆಸಿಫ್, ಉದಯಶಂಕರ್, ವಿನೋದ್ ಮತ್ತಿತರರು ಉಪಸ್ಥಿತರಿದ್ದರು.

ರಸ್ತೆ ಅಭಿವೃದ್ಧಿ ಕಾಮಗಾರಿಗೆ ಚಾಲನೆ: ಇದಕ್ಕೂ ಮುನ್ನ ವಿದ್ಯಾರಣ್ಯಪುರ ವಾರ್ಡ್ ವ್ಯಾಪ್ತಿಯ ಸೋಮಣ್ಣ ಗಾರ್ಡನ್, ಸಪ್ತಗಿರಿ ಬಡಾವಣೆ ಹಾಗೂ ಎನ್‌ಟಿಆರ್ ಬಡಾವಣೆಯಲ್ಲಿ ₹ 80 ಲಕ್ಷ ವೆಚ್ಚದಲ್ಲಿ 12 ಮುಖ್ಯರಸ್ತೆ ಮತ್ತು ಅಡ್ಡರಸ್ತೆಗಳ ಹಾಗೂ ಚರಂಡಿ ಅಭಿವೃದ್ಧಿ ಕಾಮಗಾರಿಗೆ ಕೃಷ್ಣ ಬೈರೇಗೌಡ ಚಾಲನೆ ನೀಡಿದರು.

ಈ ರಸ್ತೆಗಳಲ್ಲಿ ಹೆಚ್ಚಿನ ವಾಹನ ಸಂದಣಿ ಇರುವುದರಿಂದ ಈ ಹಿಂದೆ ಅಭಿವೃದ್ಧಿಪಡಿಸಿದ್ದ ರಸ್ತೆಗಳು ಹದಗೆಟ್ಟಿದ್ದವು. ಹಾಗಾಗಿ ಇದಕ್ಕೆ ಹೆಚ್ಚಿನ ಆದ್ಯತೆ ನೀಡಿ ರಸ್ತೆಗಳ ಮರುಡಾಂಬರೀಕರಣ ಹಾಗೂ ಅಭಿವೃದ್ಧಿಗೆ ಚಾಲನೆ ನೀಡಲಾಗಿದೆ ಎಂದು ತಿಳಿಸಿದರು.

ನಾಳೆ ವಿಚಾರ ಸಂಕಿರಣ

ಬೆಂಗಳೂರು: ಕರ್ನಾಟಕ ಮುಸ್ಲಿಂ ಜಮಾತ್‌ನ ಬೆಂಗಳೂರು ನಗರ ಜಿಲ್ಲಾ ಸಮಿತಿಯು ಮಾ.2ರಂದು ಮಧ್ಯಾಹ್ನ 3 ಗಂಟೆಗೆ 'ಮುಸ್ಲಿಂ ಮೀಸಲಾತಿಯ ಪ್ರಾಯೋಗಿಕತೆ' ಕುರಿತು ವಿಚಾರ ಸಂಕಿರಣವನ್ನು ಅರಮನೆ ರಸ್ತೆಯ ವೀರಶೈವ ಮಹಾಸಭಾ ಸಭಾಂಗಣದಲ್ಲಿ ಹಮ್ಮಿಕೊಂಡಿದೆ.

'ರಾಜ್ಯಸಭಾ ಸದಸ್ಯ ಎಲ್. ಹನುಮಂತಯ್ಯ ಅವರು ವಿಚಾರ ಸಂಕಿರಣ ಉದ್ಘಾಟಿಸಲಿದ್ದಾರೆ. ಕಾರ್ಯಕ್ರಮದಲ್ಲಿ ಹಿರಿಯ ಪತ್ರಕರ್ತ ಬಿ.ಎಂ. ಹನೀಫ್ ಹಾಗೂ ಕರ್ನಾಟಕ ಮುಸ್ಲಿಂ ಜಮಾತ್ ಅಧ್ಯಕ್ಷ ಮುಫ್ತಿ ಅನ್ವರ್ ಅಲಿ ಭಾಗವಹಿಸಲಿದ್ದಾರೆ' ಎಂದು ಪ್ರಕಟಣೆ ತಿಳಿಸಿದೆ.

ಭಾರತದಿಂದ ಹತ್ತಿ ಆಮದಿಗೆ ಪಾಕ್ ಅನುಮತಿ ಸಾಧ್ಯತೆ

ಇಸ್ಲಾಮಾಬಾದ್ (ಪಿಟಿಐ): ಭಾರತ ಮತ್ತು ಪಾಕಿಸ್ತಾನ ನಡುವೆ ದ್ವಿಪಕ್ಷೀಯ ವ್ಯಾಪಾರವು ಮತ್ತೆ ಆರಂಭವಾಗುವ ನಿರೀಕ್ಷೆ ವ್ಯಕ್ತವಾಗುತ್ತಿದೆ. ಪಾಕಿಸ್ತಾನವು ಭೂಮಾರ್ಗದ ಮೂಲಕ ಭಾರತದಿಂದ ಹತ್ತಿಯನ್ನು ಆಮದು ಮಾಡಿಕೊಳ್ಳಲು ಒಪ್ಪಿಗೆ ನೀಡುವ ಸಾಧ್ಯತೆ ಇದೆ ಎಂದು ಮಾಧ್ಯಮಗಳು ಭಾನುವಾರ ವರದಿ ಮಾಡಿವೆ.

ವಾಣಿಜ್ಯ ವಿಷಯದಲ್ಲಿ ಪ್ರಧಾನಿಯ ಸಲಹೆಗಾರ ಸಚಿವ ಅಬ್ದುಲ್ ರಜಾಕ್ ದಾವೂದ್ ಅವರು ಹತ್ತಿ ಮತ್ತು ನೂಲನ್ನು ಭಾರತದಿಂದ ಮುಂದಿನ ವಾರದಿಂದ ಆಮದು ಮಾಡಿಕೊಳ್ಳಬೇಕೇ ಬೇಡವೇ ಎನ್ನುವ ನಿರ್ಧಾರವನ್ನು ತೆಗೆದುಕೊಳ್ಳಲಿದ್ದಾರೆ ಎಂದು 'ದಿ ಎಕ್ಸ್‌ಪ್ರೆಸ್ ಟ್ರಿಬ್ಯೂನ್' ವರದಿ ಮಾಡಿದೆ.

ದೇಶದಲ್ಲಿ ಹತ್ತಿಯ ಕೊರತೆ ಉಂಟಾಗಿರುವುದನ್ನು ಪ್ರಧಾನಿ ಇಮ್ರಾನ್ ಖಾನ್ ಅವರ ಗಮನಕ್ಕೆ ಈಗಾಗಲೇ ತರಲಾಗಿದೆ. ಆಮದು ಮಾಡಿಕೊಳ್ಳುವ ಕುರಿತು ನಿರ್ಧಾರ ತೆಗೆದುಕೊಂಡ ಬಳಿಕ ಔಪಚಾರಿಕ ಆದೇಶವನ್ನು ಸಂಸತ್‌ನ ಆರ್ಥಿಕ ಸಮನ್ವಯ ಸಮಿತಿಯ ಮುಂದೆ ಇರಿಸಲಾಗುವುದು ಎಂದು ಮೂಲಗಳು ಹೇಳಿವೆ.

ಮೂಲಗಳ ಪ್ರಕಾರ, ಆಮದು ಮಾಡಿಕೊಳ್ಳುವ ಕುರಿತು ಆಂತರಿಕ ಚರ್ಚೆಗಳು ಈಗಾಗಲೇ ಪ್ರಾರಂಭವಾಗಿವೆ. ಆದರೆ ಪ್ರಧಾನಿಯ ಒಪ್ಪಿಗೆ ದೊರೆತ ನಂತರವಷ್ಟೇ ಅಂತಿಮ ನಿರ್ಧಾರ ತೆಗೆದುಕೊಳ್ಳಲಾಗುತ್ತದೆ. ಭಾರತದಿಂದ ಆಮದು ತೀರಾ ಅಗ್ಗವಾಗಲಿದ್ದು, ಮೂರರಿಂದ ನಾಲ್ಕು ದಿನಗಳಲ್ಲಿ ಪಾಕಿಸ್ತಾನ ತಲುಪಲಿದೆ.

ಆದರೆ, ಭಾರತದಿಂದ ಆಮದು ಮಾಡಿಕೊಳ್ಳದಂತೆ ಆಲ್ ಪಾಕಿಸ್ತಾನ್ ಟೆಕ್ಸ್‌ಟೈಲ್ ಮಿಲ್ಸ್ ಅಸೋಸಿಯೇಷನ್ (ಎಪಿಟಿಎಂಎ) ಅಲ್ಲಿನ ಸರ್ಕಾರಕ್ಕೆ ಒತ್ತಡ ತರುತ್ತಿದೆ.

‘ವಿದ್ಯಾರ್ಥಿ ಕೇಂದ್ರಿತ ಶಿಕ್ಷಣಕ್ಕೆ ಆದ್ಯತೆ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ವಿದ್ಯಾರ್ಥಿ ಕೇಂದ್ರಿತ ಶಿಕ್ಷಣ ಕೊಡುವ ನಿಟ್ಟಿನಲ್ಲಿ ಸರ್ಕಾರವು ಈಗಾಗಲೇ ಅನೇಕ ಹೆಜ್ಜೆಗಳನ್ನು ಇಟ್ಟಿದೆ. ರಾಜ್ಯದ ಶೈಕ್ಷಣಿಕ ವಲಯದಲ್ಲಿ ದೊಡ್ಡ ಸುಧಾರಣಾ ಪರ್ವವೇ ಆರಂಭವಾಗಿದೆ’ ಎಂದು ಉಪಮುಖ್ಯಮಂತ್ರಿ ಡಾ.ಸಿ.ಎನ್. ಅಶ್ವತ್ಥನಾರಾಯಣ ಹೇಳಿದರು.

ಡಾ. ದ.ರಾ. ಬೇಂದ್ರೆಯವರ ಜಯಂತ್ಯುತ್ಸವ ಅಂಗವಾಗಿ ವಿ. ಸೋಮಣ್ಣ ಪ್ರತಿಷ್ಠಾನ ವತಿಯಿಂದ ನಗರದಲ್ಲಿ ಭಾನುವಾರ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಎಸ್ಸೆಸ್ಸೆಲ್ಸಿ ಪ್ರತಿಭಾವಂತ ವಿದ್ಯಾರ್ಥಿಗಳನ್ನು ಸನ್ಮಾನಿಸಿ ಮಾತನಾಡಿದ ಅವರು, ‘ಉತ್ತಮ ಸಮಾಜದ ಜತೆಗೆ ಉತ್ತಮ ಬದುಕು ಕಟ್ಟಿಕೊಳ್ಳಲು ಗುಣಮಟ್ಟದ ಶಿಕ್ಷಣದಿಂದ ಮಾತ್ರ ಸಾಧ್ಯ' ಎಂದರು.



ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ ಹೆಚ್ಚು ಅಂಕಗಳಿಸಿದ ಸರ್ಕಾರಿ ಪ್ರೌಢಶಾಲೆಗಳ ಪ್ರತಿಭಾವಂತ ವಿದ್ಯಾರ್ಥಿಗಳಾದ ಹರ್ಷಿತಾ, ಐಶ್ವರ್ಯ, ತನುಜಾ, ಭಾವನಗೌಡ, ದಿವ್ಯಶ್ರೀ, ಮೋನಿಕಾ, ಯಶಸ್ವಿನಿ, ಲಿಖಿತ್ ಗೌಡ, ಗೋಕುಲ್, ಹಬೀಬಾ ಅವರನ್ನು ಸನ್ಮಾನಿಸಲಾಯಿತು. ಅ. ದೇವೇಗೌಡ, ಶೈಲಜಾ ಸೋಮಣ್ಣ, ಡಾ. ನರಹಳ್ಳಿ ಬಾಲಸುಬ್ರಹ್ಮಣ್ಯ, ಸೊಗಡು ಶಿವಣ್ಣ, ಡಾ. ಸಿ. ಎನ್. ಅಶ್ವತ್ಥನಾರಾಯಣ, ವಿ. ಸೋಮಣ್ಣ, ಜಗದೀಶ್, ಪಾಲನೇತ್ರ ಇದ್ದಾರೆ –ಪ್ರಜಾವಾಣಿ ಚಿತ್ರ

‘ಶಿಕ್ಷಣವನ್ನು ಕೇವಲ ಅಕಾಡೆಮಿಕ್ ದೃಷ್ಟಿಯಿಂದ ಕಲಿಯುವುದಲ್ಲ. ಅದು ಎಲ್ಲ ಹಂತಗಳಲ್ಲೂ ದೇಶಕ್ಕೆ ಪೂರಕವಾಗಿರಬೇಕು. ವಿಜ್ಞಾನ, ತಂತ್ರಜ್ಞಾನ, ವೈದ್ಯಕೀಯ ಇನ್ನಾವುದೇ ಉದ್ದೇಶವಿದ್ದರೂ ಅಂತಿಮವಾಗಿ ನಮ್ಮ ಕಲಿಕೆಯು ಸಮಾಜಕ್ಕೆ ಅರ್ಪಣೆಯಾಗಬೇಕು. ಈ ನಿಟ್ಟಿನಲ್ಲಿ ಶೈಕ್ಷಣಿಕ ಕ್ಷೇತ್ರವನ್ನು ಮರು ನಿರ್ಮಾಣ ಮಾಡಲಾಗುತ್ತಿದೆ’ ಎಂದರು.

ವಸತಿ ಸಚಿವ ವಿ. ಸೋಮಣ್ಣ, ‘ಯಾವುದೇ ಕಾರ್ಯದಲ್ಲಿ ಸರ್ಕಾರದ ಜೊತೆಗೆ ಖಾಸಗಿಯವರ ಸಹಕಾರವೂ ಇದ್ದರೆ ಅಭಿವೃದ್ಧಿ ಸಾಧ್ಯ’ ಎಂದು ಹೇಳಿದರು.

ದ.ರಾ.ಬೇಂದ್ರೆ ಅವರ ಬಗ್ಗೆ ವಿಮರ್ಶಕ ನರಹಳ್ಳಿ ಬಾಲಸುಬ್ರಹ್ಮಣ್ಯ ಮಾತನಾಡಿದರು. ವಿಧಾನ ಪರಿಷತ್ ಸದಸ್ಯ ಅ.ದೇವೇಗೌಡ, ಸೊಗಡು ಶಿವಣ್ಣ, ಪ್ರತಿಷ್ಠಾನದ ಅಧ್ಯಕ್ಷೆ ಶೈಲಜಾ ಸೋಮಣ್ಣ, ಕಾರ್ಯಾಧ್ಯಕ್ಷ ಡಾ.ಅರುಣ್ ಸೋಮಣ್ಣ, ಕೋಶಾಧ್ಯಕ್ಷ ನವೀನ್ ಸೋಮಣ್ಣ, ಕಾಸಿಯಾ ಕಾರ್ಯದರ್ಶಿ ಜಗದೀಶ್ ಪಾಲ್ಗೊಂಡಿದ್ದರು.

2019-20ನೇ ಸಾಲಿನ ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ ಹೆಚ್ಚು ಅಂಕ ಗಳಿಸಿದ ಸರ್ಕಾರಿ, ಬಿಬಿಎಂಪಿ ಪ್ರೌಢಶಾಲೆಗಳ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡಲಾಯಿತು.

ಕೇರಳದಲ್ಲಿ ಬಿಜೆಪಿಯತ್ತ ಒಲವು: ಅಶ್ವತ್ಥನಾರಾಯಣ

ಬೆಂಗಳೂರು: ಕೇರಳದಲ್ಲಿ ಜನರು ಎಡಪಕ್ಷಗಳ ನೇತೃತ್ವದ ಎಲ್‌ಡಿಎಫ್ ಮತ್ತು ಕಾಂಗ್ರೆಸ್ ನೇತೃತ್ವದ ಯುಡಿಎಫ್ ಮೈತ್ರಿಕೂಟಗಳ ದುರಾಡಳಿತದಿಂದ ಬೇಸತ್ತುಹೋಗಿದ್ದಾರೆ. ಈ ಬಾರಿಯ ಚುನಾವಣೆಯಲ್ಲಿ ಬಿಜೆಪಿಯತ್ತ ಒಲವು ಹೊಂದಿದ್ದಾರೆ ಎಂದು ಬಿಜೆಪಿಯ ಕೇರಳ ಸಹ ಪ್ರಭಾರಿಯೂ ಆಗಿರುವ ಉಪ ಮುಖ್ಯಮಂತ್ರಿ ಡಾ.ಸಿ.ಎನ್. ಅಶ್ವತ್ಥನಾರಾಯಣ ಹೇಳಿದರು.

ನಗರದಲ್ಲಿ ನೆಲೆಸಿರುವ ಕೇರಳದ ಜನರೊಂದಿಗೆ ಭಾನುವಾರ ಸಂವಾದ ನಡೆಸಿದ ಬಳಿಕ ಮಾಧ್ಯಮ ಪ್ರತಿನಿಧಿಗಳ ಜತೆ ಮಾತನಾಡಿದ ಅವರು, ‘ಎರಡೂ ಮೈತ್ರಿಕೂಟಗಳು 70 ವರ್ಷಗಳಿಂದ ಕೇರಳದ ಜನರನ್ನು ಕತ್ತಲೆಯಲ್ಲಿಟ್ಟು, ರಾಜಕೀಯ ಮಾಡುತ್ತಿವೆ. ಎರಡೂ ಮೈತ್ರಿಕೂಟಗಳ ಆಡಳಿತ ಸಂಪೂರ್ಣ ವಿಫಲವಾಗಿದೆ. ಈ ಚುನಾವಣೆಯಲ್ಲಿ ಜನರು ಬದಲಾವಣೆ ಬಯಸುತ್ತಿದ್ದಾರೆ’ ಎಂದರು.



ಶ್ರೀರಾಘವೇಂದ್ರ ಸಂಗೀತ ಸೇವಾ ಪ್ರತಿಷ್ಠಾನವು ನಗರದಲ್ಲಿ ಭಾನುವಾರ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ವಾರ್ತಾವಾಚಕಿ ಆರ್.ಸಬೀಹಾ ಬಾನು ಅವರಿಗೆ ‘ಸಾಹಿತಿ ಎಸ್.ಬೆಳಗೆರೆ ಮಹಾಲಕ್ಷ್ಮಮ್ಮ ಸ್ಮರಣಾರ್ಥ ಪ್ರಶಸ್ತಿ’ ಪ್ರದಾನ ಮಾಡಲಾಯಿತು. ಪ್ರತಿಷ್ಠಾನದ ಅಧ್ಯಕ್ಷೆ ಗೌರಿ ನಾಗರಾಜ್, ಉಪಾಧ್ಯಕ್ಷೆ ವೀಣಾ ಸುರೇಶ್, ಕಾರ್ಯದರ್ಶಿ ನಾಗರಾಜ್, ಶಿಕ್ಷಕಿ ಉಷಾದೇವಿ, ನಿವೃತ್ತ ದೈಹಿಕ ಶಿಕ್ಷಣ ಶಿಕ್ಷಕ ಪಿ.ವೈ. ನಾಗರಾಜ್, ಚಂದ್ರಿಕಾ ಇದ್ದರು –ಪ್ರಜಾವಾಣಿ ಚಿತ್ರ

‘ಎಲ್ಲ ವರ್ಗದವರಿಗೂ ನ್ಯಾಯ ಒದಗಿಸಲಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಮೀಸಲಾತಿ ವಿಚಾರದಲ್ಲಿ ರಾಜ್ಯ ಸರ್ಕಾರವು ಎಲ್ಲ ವರ್ಗದವರಿಗೂ ನ್ಯಾಯ ಕಲ್ಪಿಸುವ ಕೆಲಸ ಮಾಡಲಿ. ಆಯಾ ಸಮಾಜದ ಸ್ವಾಮೀಜಿಗಳು, ಮುಖಂಡರು, ತಜ್ಞರು ಹಾಗೂ ಸಾಮಾನ್ಯ ಜನರ ಅಭಿಪ್ರಾಯಗಳನ್ನು ಆಲಿಸಿ ಸೂಕ್ತ ತೀರ್ಮಾನ ಕೈಗೊಳ್ಳಲಿ. ಹಾಗಾದಾಗ ಸಮಾಜದಲ್ಲಿ ಶಾಂತಿ ನೆಲೆಸುತ್ತದೆ’ ಎಂದು ಮಹಾತ್ಮ ಗಾಂಧಿ ಸೇವಾ ಟ್ರಸ್ಟ್‌ನ ಸಂಸ್ಥಾಪಕ ವಿನಯ್ ಗುರೂಜಿ ಹೇಳಿದರು.

ಕರ್ನಾಟಕ ಆರ್ಯವೈಶ್ಯ ಮಹಾಮಂಡಳಿಯು ಭಾನುವಾರ ಹಮ್ಮಿಕೊಂಡಿದ್ದ ‘ಸಮಾಜದ ಬಡ ವಿದ್ಯಾರ್ಥಿಗಳಿಗೆ ಉಚಿತ ಟ್ಯಾಬ್ ವಿತರಣೆ ಮತ್ತು ಗ್ರಾಮ ಪಂಚಾಯಿತಿ ನೂತನ ಸದಸ್ಯರಿಗೆ ಅಭಿನಂದನೆ’ ಸಮಾರಂಭವನ್ನು ಉದ್ಘಾಟಿಸಿ ಮಾತನಾಡಿದರು.

‘ಯಾರಿಗೆ ಅಗತ್ಯವಿದೆಯೊ ಅಂತಹವರಿಗೆ ಸರ್ಕಾರದ ಸವಲತ್ತುಗಳು ಸಿಗುವಂತಾಗಬೇಕು. ಈ ನಿಟ್ಟಿನಲ್ಲಿ ಸರ್ಕಾರ ಸೂಕ್ತ ಕ್ರಮ ಕೈಗೊಳ್ಳಬೇಕು’ ಎಂದರು.

ಆರ್ಯವೈಶ್ಯ ಮಹಾಮಂಡಳಿಯ ಅಧ್ಯಕ್ಷ ಟಿ.ಎ.ಶರವಣ, ‘ನಮ್ಮ ಸಮುದಾಯಕ್ಕೆ ಸೂಕ್ತ ಪ್ರಾತಿನಿಧ್ಯ ಸಿಗಬೇಕು ಎಂಬ ಉದ್ದೇಶದಿಂದ ಸರ್ಕಾರದ ಮೇಲೆ ಒತ್ತಡ ಹೇರಿ ಆರ್ಯವೈಶ್ಯ ಅಭಿವೃದ್ಧಿ ನಿಗಮ ಸ್ಥಾಪನೆಗೆ ಶ್ರಮಿಸಿದ್ದೇನೆ. ನಾನು ಅಧ್ಯಕ್ಷನಾಗಿದ್ದಾಗ ನಿಗಮಕ್ಕೆ ₹11 ಕೋಟಿ ಅನುದಾನ ನೀಡಲಾಗಿತ್ತು. ಆದರೆ ಈಗ ಕೇವಲ ₹5 ಕೋಟಿ ನಿಗದಿ ಮಾಡಲಾಗಿದೆ. ಇದರಲ್ಲಿ ₹1 ಕೋಟಿಯನ್ನು ಆಡಳಿತಾತ್ಮಕ ವೆಚ್ಚಕ್ಕೆ ತೆಗೆದಿಟ್ಟರೆ, ಉಳಿದ ಹಣದಲ್ಲಿ ಯಾವ ಅಭಿವೃದ್ಧಿ ಕಾರ್ಯಕ್ರಮಗಳನ್ನು ಕೈಗೊಳ್ಳಲು ಆಗುವುದಿಲ್ಲ’ ಎಂದರು.

‘ಬಜೆಟ್‌ನಲ್ಲಿ ಸಮುದಾಯದ ಅಭಿವೃದ್ಧಿಗಾಗಿ ₹100 ಕೋಟಿ ಮೀಸಲಿಡಬೇಕು. ಆರ್ಥಿಕವಾಗಿ ಹಿಂದುಳಿದ ಸಾಮಾನ್ಯ ವರ್ಗಕ್ಕೆ ನಮ್ಮ ಸಮುದಾಯವನ್ನೂ ಸೇರ್ಪಡೆ ಮಾಡಬೇಕು. ಇಲ್ಲದಿದ್ದರೆ ಮುಂದಿನ ದಿನಗಳಲ್ಲಿ ಪ್ರತಿಭಟನೆ ನಡೆಸಲಾಗುತ್ತದೆ’ ಎಂದು ಎಚ್ಚರಿಸಿದರು.

ಸಚ್ಚಿದಾನಂದ ಸರಸ್ವತಿ ಸ್ವಾಮೀಜಿ, ‘ಟ್ಯಾಬ್ ಪಡೆದವರೆಲ್ಲಾ ಅದನ್ನು ಒಳ್ಳೆಯ ಉದ್ದೇಶಕ್ಕೆ ಬಳಸಬೇಕು. ಸಾಮಾಜಿಕ ಜಾಲತಾಣಗಳಿಂದ ದೂರ ಇರಬೇಕು. ಸಾಧಕರ ಜೀವನ ಚರಿತ್ರೆಗಳನ್ನು ಓದುವ ಮೂಲಕ ಸದ್ಗುಣಗಳನ್ನು ಮೈಗೂಡಿಸಿಕೊಳ್ಳಬೇಕು’ ಎಂದು ಕಿವಿಮಾತು ಹೇಳಿದರು.



ಬಡ ವಿದ್ಯಾರ್ಥಿಗಳಿಗೆ ಉಚಿತ ಟ್ಯಾಬ್ ವಿತರಣೆ ಮಾಡಲಾಯಿತು. ವಿಶ್ವ ವಾಸವಿ ಪೀಠದ ಸಚ್ಚಿದಾನಂದ ಸರಸ್ವತಿ ಸ್ವಾಮೀಜಿ, ವಿನಯ್ ಗುರೂಜಿ ಮತ್ತು ಟಿ.ಎ. ಶರವಣ ಇದ್ದರು – ಪ್ರಜಾವಾಣಿ ಚಿತ್ರ

ಎಐಸಿಸಿ ಮುಖಂಡರ ಭೇಟಿಯಾದ ಸಿದ್ದರಾಮಯ್ಯ

ಬೆಂಗಳೂರು: ರಾಜ್ಯ ಕಾಂಗ್ರೆಸ್ ಉಸ್ತುವಾರಿಯೂ ಆಗಿರುವ ಎಐಸಿಸಿ ಪ್ರಧಾನ ಕಾರ್ಯದರ್ಶಿ ರಣದೀಪ್ ಸಿಂಗ್ ಸುರ್ಜೇವಾಲಾ ಅವರ ಪುತ್ರ ಅರ್ಜುನ್ ಮದುವೆಯಲ್ಲಿ ಭಾಗವಹಿಸಲು ಭಾನುವಾರ ದೆಹಲಿ ಪ್ರವಾಸ ಕೈಗೊಂಡಿದ್ದ ಕಾಂಗ್ರೆಸ್ ಶಾಸಕಾಂಗ ಪಕ್ಷದ ನಾಯಕ ಸಿದ್ದರಾಮಯ್ಯ ಅವರು, ಮದುವೆ ಸಮಾರಂಭದಲ್ಲೇ ಎಐಸಿಸಿಯ ಹಲವು ಮುಖಂಡರನ್ನು ಭೇಟಿ ಮಾಡಿದ್ದಾರೆ.



ಭಾನುವಾರ ಬೆಳಿಗ್ಗೆ ದೆಹಲಿಗೆ ತೆರಳಿದ್ದ ಸಿದ್ದರಾಮಯ್ಯ, ರಾತ್ರಿ ಬೆಂಗಳೂರಿಗೆ ವಾಪಸಾದರು. ಮದುವೆ ಸಮಾರಂಭದಲ್ಲೇ ರಾಜ್ಯ ಸಭೆಯ ವಿರೋಧ ಪಕ್ಷದ ನಾಯಕ ಮಲ್ಲಿಕಾರ್ಜುನ ಖರ್ಗೆ, ಎಐಸಿಸಿ ಸಂಘಟನಾ ಪ್ರಧಾನ ಕಾರ್ಯದರ್ಶಿ ಕೆ.ಸಿ. ವೇಣುಗೋಪಾಲ್, ಹಿರಿಯ ನಾಯಕ ಎ.ಕೆ. ಆ್ಯಂಟನಿ, ಲೋಕಸಭೆಯ ಮಾಜಿ ಸ್ಪೀಕರ್ ಮೀರಾ ಕುಮಾರ್ ಸೇರಿದಂತೆ ಹಲವು ಮುಖಂಡರನ್ನು ಭೇಟಿ ಮಾಡಿದರು. ಶಾಸಕರಾದ ಜಮೀರ್ ಅಹಮ್ಮದ್ ಖಾನ್, ಬೈರತಿ ಸುರೇಶ್ ಸೇರಿದಂತೆ ಹಲವರು ಸಿದ್ದರಾಮಯ್ಯ ಅವರ ದೆಹಲಿ ಪ್ರವಾಸದ ವೇಳೆ ಜತೆಗಿದ್ದರು. ಮೈಸೂರು ಮಹಾನಗರ ಪಾಲಿಕೆ ಮೇಯರ್ ಚುನಾವಣೆ ವೇಳೆ ಸಿದ್ದರಾಮಯ್ಯ ಅವರ ಗಮನಕ್ಕೆ ತಾರದೆ ಜೆಡಿಎಸ್‌ಗೆ ಮೇಯರ್ ಸ್ಥಾನ ಬಿಟ್ಟುಕೊಟ್ಟಿರುವುದು ಸೇರಿ ದಂತೆ ಪಕ್ಷದಲ್ಲಿನ ಆಂತರಿಕ ಭಿನ್ನಾಭಿ ಪ್ರಾಯಗಳ ಕುರಿತು ವರಿಷ್ಠರ ಜತೆ ಚರ್ಚಿಸಲು ಸಿದ್ದರಾಮಯ್ಯ ಮುಂದಾಗಿದ್ದಾರೆ ಎಂಬ ಸುದ್ದಿ ಹಬ್ಬಿತ್ತು.

‘ಸಿದ್ದರಾಮಯ್ಯ ಅವರ ಮದುವೆ ಸಮಾರಂಭದಲ್ಲಿ ಎಐಸಿಸಿ ಮುಖಂಡರನ್ನು ಭೇಟಿ ಮಾಡಿದ್ದಾರೆ. ಅಲ್ಲಿ ಯಾವುದೇ ರೀತಿಯ ರಾಜಕೀಯ ಚರ್ಚೆಗಳು ನಡೆದಿಲ್ಲ’ ಎಂದು ಸಿದ್ದರಾಮಯ್ಯ ಅವರ ಆಪ್ತ ವಲಯದ ಮೂಲಗಳು ತಿಳಿಸಿವೆ.

‘ಉದ್ಯೋಗ ಮೇಳ’ದಿಂದ 250 ಮಂದಿಗೆ ಉದ್ಯೋಗ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಂಸದ ತೇಜಸ್ವಿ ಸೂರ್ಯ ಅವರ ಸಂಸದ್ ಉದ್ಯೋಗ ಮಿತ್ರ ಹಾಗೂ ನವ ಬೆಂಗಳೂರು ಪ್ರತಿಷ್ಠಾನದ ಸಹಭಾಗಿತ್ವದಲ್ಲಿ ಬಿಟಿಎಂ ಬಡಾವಣೆಯ ಶಾಂತಿನಿಕೇತನ ಶಾಲೆಯ ಆವರಣದಲ್ಲಿ ‘ಬೃಹತ್ ಉದ್ಯೋಗ ಮೇಳ’ವನ್ನು ಭಾನುವಾರ ಆಯೋಜಿಸಲಾಗಿತ್ತು.

ಉದ್ಘಾಟನಾ ಕಾರ್ಯಕ್ರಮದಲ್ಲಿ ನವ ಬೆಂಗಳೂರು ಪ್ರತಿಷ್ಠಾನದ ಮುಖ್ಯಸ್ಥ ಅನಿಲ್ ಶೆಟ್ಟಿ, ಮುಖಂಡರಾದ ಗೋಪಿನಾಥ್ ರೆಡ್ಡಿ, ಪ್ರಕ್ಸೋ ಸಂಸ್ಥೆಯ ಮುಖ್ಯಸ್ಥ ಶಶಾಂಕ್, ರಿಚರ್ಡ್ ಪಟ್ಟಲೆ ಹಾಗೂ ‘ಕು ಆ್ಯಪ್’ನ ಸಂಸ್ಥಾಪಕ ಅಪ್ರಮೇಯ ರಾಧಾಕೃಷ್ಣ ಭಾಗವಹಿಸಿದ್ದರು.

‘ಮೇಳದಲ್ಲಿ 70ಕ್ಕೂ ಹೆಚ್ಚು ವಿವಿಧ ಕಂಪನಿಗಳು ಭಾಗವಹಿಸಿದ್ದವು. ಉದ್ಯೋಗ ಮೇಳಕ್ಕೆ 1,500ಕ್ಕೂ ಹೆಚ್ಚು ಅಭ್ಯರ್ಥಿಗಳು ನೋಂದಾಯಿಸಿಕೊಂಡಿದ್ದರು. ಈ ಪೈಕಿ 250 ಮಂದಿ ಸ್ಥಳದಲ್ಲೇ ವಿವಿಧ ಉದ್ಯೋಗಗಳಿಗೆ ಆಯ್ಕೆಯಾದರು. 750 ಮಂದಿ ಅಭ್ಯರ್ಥಿಗಳನ್ನು ಎರಡನೇ ಹಂತದ ಸಂದರ್ಶನಕ್ಕೆ ಕರೆಯಲಾಗಿದೆ’ ಎಂದು ಸಂಸ್ಥೆಯ ಪ್ರಕಟಣೆ ತಿಳಿಸಿದೆ.

ಯೋಗೇಶ್ವರ್‌ಗೆ ಜೆಡಿಎಸ್ ಮುಖಂಡರ ತಿರುಗೇಟು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ. ಕುಮಾರಸ್ವಾಮಿ ಅವರನ್ನು ‘ಜೋಕರ್’ ಎಂದು ಟೀಕಿಸಿದ್ದ ಪ್ರವಾಸೋದ್ಯಮ ಸಚಿವ ಸಿ.ಪಿ. ಯೋಗೇಶ್ವರ್ ವಿರುದ್ಧ ಜೆಡಿಎಸ್ ಮುಖಂಡರು ಹರಿಹಾಯ್ದಿದ್ದಾರೆ.

ಶಾಸಕ ಸಾ.ರಾ. ಮಹೇಶ್, ವಿಧಾನ ಪರಿಷತ್ ಸದಸ್ಯ ಎಸ್.ಎಲ್. ಭೋಜೇಗೌಡ ಮತ್ತು ಮಾಜಿ ಸದಸ್ಯ ಟಿ.ಎ. ಶರವಣ ಅವರು ಭಾನುವಾರ ಸಚಿವರ ವಿರುದ್ಧ ಸರಣಿಯೋಪಾದಿಯಲ್ಲಿ ವಾಗ್ದಾಳಿ ನಡೆಸಿದ್ದಾರೆ.

‘ಚನ್ನಪಟ್ಟಣ ವಿಧಾನಸಭಾ ಕ್ಷೇತ್ರದಲ್ಲಿ ಗ್ರಾಮ ಪಂಚಾಯಿತಿ ಚುನಾವಣೆಯಲ್ಲಿ ಶೇಕಡ 80ರಷ್ಟು ಮಂದಿ ಜೆಡಿಎಸ್ ಬೆಂಬಲಿತ ಅಭ್ಯರ್ಥಿಗಳೇ ಗೆಲುವು ಸಾಧಿಸಿದ್ದಾರೆ. ಕ್ಷೇತ್ರ ಕೈತಪ್ಪುತ್ತಿರುವುದನ್ನು ನೋಡಲಾಗದೇ ಯೋಗೇಶ್ವರ್ ಅವರಿಗೆ ಮತಿಭ್ರಮಣೆಯಾಗಿದೆ. ಅದಕ್ಕಾಗಿಯೇ ಈ ಉರಿ ಮಾತುಗಳನ್ನು ಆಡಿದ್ದಾರೆ’ ಎಂದು ಸಾ.ರಾ.ಮಹೇಶ್ ಟ್ವಿಟರ್‌ನಲ್ಲಿ ತಿರುಗೇಟು ನೀಡಿದ್ದಾರೆ.

‘ಸರ್ವ ಪಕ್ಷ ಸದಸ್ಯರಾಗಿರುವ ಯೋಗೇಶ್ವರ್ ಅವರಿಗೆ ಹುಟ್ಟೂರು ಚಕ್ಕೆರೆಯಲ್ಲೇ ಮರ್ಯಾದೆ ಇಲ್ಲ. ಅವರ ಮಾತಿಗೆ ನಾಲ್ಕಾಣೆ ಬೆಲೆಯೂ ಅಲ್ಲಿ ಇಲ್ಲ. ಚಕ್ಕೆರೆಯಲ್ಲಿ ಗ್ರಾಮ ಪಂಚಾಯಿತಿ ಚುನಾವಣೆಯಲ್ಲಿ ಎಲ್ಲ ಸ್ಥಾನಗಳಲ್ಲೂ ಜೆಡಿಎಸ್ ಬೆಂಬಲಿತರೇ ಗೆದ್ದಿರುವುದು ಇದಕ್ಕೆ ಸಾಕ್ಷಿ. ಹುಟ್ಟೂರಿನಲ್ಲೇ ಗೆಲ್ಲದ ಯೋಗೇಶ್ವರ್, ಚನ್ನಪಟ್ಟಣ ಕ್ಷೇತ್ರದಲ್ಲಿ ಗೆಲ್ಲಲು ಸಾಧ್ಯವೆ? ಸಿ.ಡಿಯಿಂದಲೋ ಅಥವಾ ಫೋಟೊ ಕಾರಣದಿಂದಲೂ ಬಿಜೆಪಿ ಅವರಿಗೆ ವಿಧಾನ ಪರಿಷತ್ ಸದಸ್ಯ ಸ್ಥಾನ ಮತ್ತು ಸಚಿವ ಪದವಿ ಎರಡನ್ನೂ ಕೊಟ್ಟಿದೆ. ಅದನ್ನು ಅಚ್ಚುಕಟ್ಟಾಗಿ ಮಾಡಲಿ’ ಎಂದು ಟ್ವೀಟ್ ಮಾಡಿದ್ದಾರೆ.

ಮರ್ಕಟ ಮನಸ್ಥಿತಿ: ‘ಅಧಿಕಾರಕ್ಕಾಗಿ ಪಕ್ಷದಿಂದ ಪಕ್ಷಕ್ಕೆ ನೆಗೆಯುವ ಯೋಗೇಶ್ವರ್ ಮರ್ಕಟ ಮನಸ್ಥಿತಿಯ ರಾಜಕಾರಣಿ. ಕುಮಾರಸ್ವಾಮಿ ಅವರನ್ನು ಹಣಿಯಲು ಯೋಗೇಶ್ವರ್ ಅವರು ಡಿ.ಕೆ. ಶಿವಕುಮಾರ್ ಅವರ ಪಾದ ನೆಕ್ಕಿದ್ದನ್ನು ನಾವು ನೋಡಿಲ್ಲವೆ? ಕುಮಾರಸ್ವಾಮಿ ಜೋಕರ್ ಅಲ್ಲ, ರಾಜಕೀಯದ ಮದಗಜ. ಅವರನ್ನು ನಿಂದಿಸಿ ರಾಜಕೀಯವಾಗಿ ಬೆಳೆಯುತ್ತೇನೆ ಎಂಬುದು ಮೂರ್ಖತನ’ ಎಂದು ಭೋಜೇಗೌಡ ಟ್ವೀಟ್ ಮಾಡಿದ್ದಾರೆ.

‘ಯೋಗೇಶ್ವರ್ ಅವರೇ ಸಿ.ಡಿ, ಫೋಟೊಗಳ ಬಗ್ಗೆ ಹುಷಾರಾಗಿರಿ. ನಿಮ್ಮ ಮಾತು ನಿಮ್ಮ ಮನೆಯವರನ್ನೇ ಬೀದಿಗೆ ತಂದುಬಿಟ್ಟೀತು. ಡ್ರಗ್ಸ್ ದಂಧೆಯಲ್ಲಿ ಜೈಲು ಸೇರಿದವರ ಪಲ್ಲಂಗದಲ್ಲಿ ಪಂದ್ಯವಾಡಿದ ನಿಮ್ಮವರ ಫೋಟೊ, ವಿಡಿಯೊಗಳು ನಿಮ್ಮನ್ನು ಬಟಾಬಯಲು ಮಾಡಲಿವೆ. ಗಾಜಿನ ಮನೆಯಲ್ಲಿ ನಿಂತು ಕಲ್ಲೆಸೆಯಬೇಡಿ, ಬಾಯಿ ಚಪಲಕ್ಕೆ ಮಾತನಾಡಬೇಡಿ’ ಎಂದು ಎಚ್ಚರಿಸಿದ್ದಾರೆ.

‘ಯೋಗೇಶ್ವರ್ ಒಬ್ಬ ಸುಳ್ಳುಕೋರ. ಮಂಗನಂತೆ ಚಂಚಲ ಮನಸ್ಸಿನ ವ್ಯಕ್ತಿ. ಮೆಗಾಸಿಟಿ ಹಗರಣದಲ್ಲಿ ಅವರಿಂದ ವಂಚನೆಗೊಳಗಾದವರು ನೊಂದು, ಆತ್ಮಹತ್ಯೆ ಮಾಡಿಕೊಂಡವರನ್ನೇ ಅವರು ಮರೆಯುತ್ತಾರೆ. ಎಲ್ಲ ಪಕ್ಷಗಳನ್ನೂ ಸುತ್ತಿಬಂದು, ಈಗ ಬಿಜೆಪಿಯಲ್ಲಿ ಕುಳಿತು ಸಿದ್ಧಾಂತದ ಮಾತನಾಡುತ್ತಿದ್ದಾರೆ’ ಎಂದು ಶರವಣ ಟೀಕಿಸಿದ್ದಾರೆ.

ದೇವರಸನಹಳ್ಳಿ: ಗುಂಪು ಘರ್ಷಣೆ

ನಂಜನಗೂಡು (ಮೈಸೂರು ಜಿಲ್ಲೆ): ತಾಲ್ಲೂಕಿನ ದೇವರಸನಹಳ್ಳಿಯಲ್ಲಿ 2 ಗುಂಪುಗಳ ನಡುವೆ ಘರ್ಷಣೆ ಸಂಭವಿಸಿದ್ದು, ನಾಲ್ವರಿಗೆ ಗಾಯಗಳಾಗಿವೆ. ಗ್ರಾಮದಲ್ಲಿ ಪ್ರಕ್ಷುಬ್ದ ಪರಿಸ್ಥಿತಿ ನೆಲೆಸಿದ್ದು, ಬಿಗಿ ಪೊಲೀಸ್ ಬಂದೋಬಸ್ತ್ ಮಾಡಲಾಗಿದೆ.

‘ಗ್ರಾಮದಲ್ಲಿ ಕ್ಷುಲ್ಲಕ ವಿಚಾರಕ್ಕೆ ಕೆಲ ಯುವಕರ ಮಧ್ಯೆ ಜಗಳ ಸಂಭವಿಸಿದೆ. ಮುಂಜಾಗ್ರತಾ ಕ್ರಮವಾಗಿ ಒಂದು ಕೆಎಸ್ಆರ್‌ಪಿ ತುಕಡಿ ಹಾಗೂ ಜಿಲ್ಲಾ ಸಶಸ್ತ್ರ ಪಡೆಯ 2 ತುಕಡಿ ನಿಯೋಜಿಸಲಾಗಿದೆ’ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಸಿ.ಬಿ.ರಿಷ್ಯಂತ್ ತಿಳಿಸಿದ್ದಾರೆ.

ಅಕ್ರಮ ಮದ್ಯ ಮಾರಾಟ ತಡೆಗೆ ಟ್ವಿಟರ್ ಅಭಿಯಾನ

ಬೆಂಗಳೂರು: ರಾಜ್ಯದಲ್ಲಿ ಅಕ್ರಮ ಮದ್ಯ ಮಾರಾಟವನ್ನು ಸಂಪೂರ್ಣವಾಗಿ ನಿಷೇಧಿಸುವಂತೆ ಒತ್ತಾಯಿಸಿ ಮದ್ಯ ನಿಷೇಧ ಆಂದೋಲನ ಕರ್ನಾಟಕವು ಭಾನುವಾರ ಟ್ವಿಟರ್ ಅಭಿಯಾನ ಹಮ್ಮಿಕೊಂಡಿತ್ತು.

ಬೆಳಿಗ್ಗೆ 11ರಿಂದ ಮಧ್ಯಾಹ್ನ 2 ಗಂಟೆಯವರೆಗೆ ಟ್ವಿಟರ್ ಅಭಿಯಾನದಲ್ಲಿ #StopIllegalLiquorSale ಹಾಗೂ #ImplementHCOrder ಹ್ಯಾಷ್ ಟ್ಯಾಗ್‌ಗಳು ಟ್ರೆಂಡಿಂಗ್‌ನಲ್ಲಿದ್ದವು.

‘ರಾಜ್ಯದಲ್ಲಿ ಸಂಪೂರ್ಣವಾಗಿ ಅಕ್ರಮ ಮದ್ಯ ನಿಷೇಧ ಆಗಬೇಕು. ಹೈಕೋರ್ಟ್ ಸಹ ಅಕ್ರಮ ಮದ್ಯ ಮಾರಾಟ ನಿಷೇಧಿಸಿ ಆದೇಶಿಸಿದೆ. ಆದರೂ, ರಾಜ್ಯದಲ್ಲಿ ಅಕ್ರಮ ಮದ್ಯ ಮಾರಾಟ ಅವ್ಯಾಹತವಾಗಿ ನಡೆಯುತ್ತಲೇ ಇದ್ದು, ಗ್ರಾಮೀಣ ಭಾಗಗಳಲ್ಲಿ ರಾಜಾರೋಷವಾಗಿದೆ’ ಎಂದು ಮದ್ಯ ನಿಷೇಧ ಆಂದೋಲನದ ಸ್ವರ್ಣ ಭಟ್ ತಿಳಿಸಿದರು. ‘ಇದು ರಾಜ್ಯಕ್ಕೆ ಮಾತ್ರ ಸೀಮಿತವಾಗಿರುವ ಸಮಸ್ಯೆ ಅಲ್ಲ. ರಾಷ್ಟ್ರಮಟ್ಟದಲ್ಲೂ ಈ ಬಗ್ಗೆ ಜಾಗೃತಿ ಮೂಡುವ ಅಗತ್ಯವಿದ್ದು, ಇದಕ್ಕಾಗಿ ಟ್ವಿಟರ್ ಅಭಿಯಾನ ಹಮ್ಮಿಕೊಂಡಿದ್ದೇವೆ’ ಎಂದರು.

ಅಭಿಯಾನ ಬೆಂಬಲಿಸಿ ಟ್ವೀಟ್ ಮಾಡಿದ ಸ್ವರಾಜ್ ಇಂಡಿಯಾದ ಅಧ್ಯಕ್ಷ ಯೋಗೇಂದ್ರ ಯಾದವ್,‘ಅಕ್ರಮ ಮದ್ಯ ಮಾರಾಟ ತಡೆಯಬೇಕೆಂದು ಕೇಳಲು ಅಥವಾ ಮಹಿಳಾ ನಿಯೋಗವನ್ನು ಮುಖ್ಯಮಂತ್ರಿ ಭೇಟಿ ಮಾಡಬೇಕೆಂದು ಒತ್ತಾಯಿಸಲು ಕರ್ನಾಟಕದಲ್ಲಿ ಪ್ರತಿಭಟನೆ ಅಗತ್ಯವೇ?’ ಎಂದು ಆಕ್ರೋಶ ಹೊರಹಾಕಿದರು.

ಕರ್ನಾಟಕ ರಾಷ್ಟ್ರ ಸಮಿತಿ ಪಕ್ಷದ ಅಧ್ಯಕ್ಷ ರವಿಕೃಷ್ಣಾರೆಡ್ಡಿ, ‘ರಾಯಚೂರಿನಲ್ಲಿ ಕಳೆದ 18 ದಿನಗಳಿಂದ ಮಹಿಳೆಯರು ಮದ್ಯ ನಿಷೇಧಕ್ಕಾಗಿ ಧರಣಿ ನಡೆಸುತ್ತಿದ್ದಾರೆ. ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರಿಗೆ ಸಿಕ್ಕಾಪಟ್ಟೆ ಕೆಲಸ. ಏನು ಮಾಡುತ್ತೀರಿ? ಆದರೂ, ಇವರ ಕಡೆ ಸ್ವಲ್ಪ ಗಮನ ಕೊಡಿ’ ಎಂದು ಹೇಳಿದರು.

ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ಬಳಿ ತಲೆ ಎತ್ತಿದೆ ಕೈಗಾರಿಕಾ ಪ್ರದೇಶ

ಏರೋಸ್ಪೇಸ್ ಹಬ್ ಆಗಲಿದೆ ಬೆಂಗಳೂರು

• ವಿಜಯಕುಮಾರ್ ಎಸ್.ಕೆ.

ಬೆಂಗಳೂರು: ಭಾರತದ 'ಸಿಲಿಕಾನ್ ವ್ಯಾಲಿ' ಎಂದು ಕರೆಸಿಕೊಳ್ಳುವ ಬೆಂಗಳೂರು ಈಗ ಏರೋಸ್ಪೇಸ್ ಹಬ್ ಆಗುವತ್ತ ದಾಪುಗಾಲಿಡುತ್ತಿದೆ. ಅತ್ಯಂತ ಕ್ಷಿಪ್ರಗತಿಯಲ್ಲಿ ಬೆಳೆಯುತ್ತಿರುವ ಈ ಕ್ಷೇತ್ರಕ್ಕೆ ಕೊಡುಗೆ ನೀಡಲು ಏರೋಸ್ಪೇಸ್ ಪಾರ್ಕ್ ಮತ್ತು ಏರೋಸ್ಪೇಸ್ ವಿಶೇಷ ಆರ್ಥಿಕ ವಲಯ (ಎಸ್‌ಇಜಡ್) ಸಜ್ಜಾಗುತ್ತಿವೆ.

ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ರನ್–ವೇ ಗೆ ಸ್ವಲ್ಪ ದೂರದಲ್ಲೇ ಈ ಕೈಗಾರಿಕಾ ಪ್ರದೇಶ ಅಭಿವೃದ್ಧಿಗೊಂಡಿದೆ. ಕಾಡು-ಮೇಡಿನಂತಿದ್ದ ಭೂಮಿ ಜೊತೆಗೆ ರೈತರ ಕೃಷಿ ಜಮೀನನ್ನು ಕರ್ನಾಟಕ ಕೈಗಾರಿಕಾ ಅಭಿವೃದ್ಧಿ ಮಂಡಳಿ (ಕೆಐಎಡಿಬಿ) ಹದಿನೈದು ವರ್ಷಗಳ ಹಿಂದೆ ಸ್ವಾಧೀನ ಮಾಡಿಕೊಂಡಿದೆ. ಒಟ್ಟು 2,989 ಎಕರೆ ಪ್ರದೇಶವನ್ನು ಮೂರು ಕ್ಲಸ್ಟರ್‌ಗಳಾಗಿ ವಿಭಾಗಿಸಲಾಗಿದೆ.

ಇದರಲ್ಲಿ ಏರೋಸ್ಪೇಸ್ ಕ್ಷೇತ್ರಕ್ಕೆ 984 ಎಕರೆ ಮೀಸಲಿಡಲಾಗಿದೆ. ಈ ಬೆಳವಣಿಗೆಯು ಜಾಗತಿಕ ಏರೋಸ್ಪೇಸ್ ದಿಗ್ಗಜ ಸಂಸ್ಥೆಗಳನ್ನು ಭಾರತೀಯ ಮಾರುಕಟ್ಟೆಗೆ ಸೆಳೆಯುವಂತೆ ಮಾಡಿದೆ. ದೇಶೀಯ ವಿಮಾನಯಾನ ಮಾರುಕಟ್ಟೆಯಲ್ಲಿ ಶೇ 75ರಷ್ಟು ಖಾಸಗಿ ವಿಮಾನಯಾನ ಸಂಸ್ಥೆಗಳ ಮೇಲೆ ಅವಲಂಬಿತವಾಗಿದ್ದರೂ, ವೇಗವಾಗಿ ಬೆಳೆಯುತ್ತಿರುವ ವಲಯ ಎಂದು ಗುರುತಿಸಲ್ಪಟ್ಟಿದೆ.

ರಕ್ಷಣೆ ಮತ್ತು ನಾಗರಿಕ ವಿಮಾನಯಾನಕ್ಕೆ ಬೇಡಿಕೆ ಹೆಚ್ಚಾಗುತ್ತಿರುವ ಕಾರಣ ಈ ಕ್ಷೇತ್ರದಲ್ಲಿ ಹೂಡಿಕೆ ಮಾಡಲು ಹಲವು ರಾಜ್ಯಗಳು ಮುಂದಾಗುತ್ತಿವೆ. ಇಂತಹ ರಾಜ್ಯಗಳಲ್ಲಿ ಕರ್ನಾಟಕವು ಒಂದಾಗಿದೆ. ಅದರ ಭಾಗವಾಗಿಯೇ ಏರೋಸ್ಪೇಸ್ ಎಸ್‌ಇಜಡ್ ಅಸ್ತಿತ್ವಕ್ಕೆ ಬಂದಿದೆ.

ವಿಶ್ವದ ಹಲವು ಏರೋಸ್ಪೇಸ್ ಉದ್ದಿಮೆಗಳು ಬೆಂಗಳೂರಿನ ಏರೋಸ್ಪೇಸ್ ಹಬ್‌ನಲ್ಲಿ ಇರಲು ಬಯಸುತ್ತಿವೆ. ಈ ನಿಟ್ಟಿನಲ್ಲಿ ಸ್ಥಳೀಯ ಅನೇಕ ಸಣ್ಣ ಮತ್ತು ಮಧ್ಯಮ ಪ್ರಮಾಣದ ಉದ್ದಿಮೆಗಳ ಸಹಭಾಗಿತ್ವ ಮಾಡಿಕೊಳ್ಳಲು ಆರಂಭಿಸಿವೆ.

'ಸದ್ಯ ರಕ್ಷಣಾ ಮತ್ತು ಏರೋಸ್ಪೇಸ್‌ಗೆ ಸಂಬಂಧಿಸಿದಂತೆ ಕರ್ನಾಟಕದಲ್ಲಿ 2 ಸಾವಿರಕ್ಕೂ ಅಧಿಕ ತಯಾರಿಕಾ ಘಟಕಗಳಿವೆ. ದೇಶದ ಒಟ್ಟು ರಫ್ತಿನ ಪೈಕಿ ಕರ್ನಾಟಕದಿಂದ ಶೇ 65ರಷ್ಟು ಹಾಗೂ ಎಲ್ಲ ರೀತಿಯ ಹೆಲಿಕಾಪ್ಟರ್ ಮತ್ತು ವಿಮಾನಗಳ ಉತ್ಪಾದನೆಯ ಪೈಕಿ ಶೇ 67 ರಷ್ಟು ರಾಜ್ಯದಲ್ಲಾಗುತ್ತಿದೆ. ಎಚ್‌ಎಎಲ್ ₹48,000 ಕೋಟಿ ಮೊತ್ತದಲ್ಲಿ 83 ತೇಜಸ್ ಯುದ್ಧ ವಿಮಾನಗಳನ್ನು ತಯಾರಿಸಲು ಭಾರತೀಯ ವಾಯುಸೇನೆ ಜತೆಗೆ ಒಪ್ಪಂದ ಮಾಡಿಕೊಂಡಿದೆ. ಇದರಿಂದ ರಾಜ್ಯದಲ್ಲಿ ಹೆಚ್ಚು ಹೂಡಿಕೆ ಹರಿದು ಬರುತ್ತದೆ ಮತ್ತು ಉದ್ಯೋಗಗಳ ಸೃಷ್ಟಿಯಾಗಲಿದೆ' ಎನ್ನುತ್ತಾರೆ ಇಂಡೊ–ಜರ್ಮನ್ ಕಂಪನಿಯಾದ ಎಡಿಡಿ ಎಂಜಿನಿಯರ್ಸ್ ಇಂಡಿಯಾ (ಪ್ರೈವೇಟ್) ಲಿಮಿಟೆಡ್‌ನ ನಿರ್ದೇಶಕ ಗಿರೀಶ್ ಲಿಂಗಣ್ಣ.


ಗಿರೀಶ್ ಲಿಂಗಣ್ಣ

'101 ರಕ್ಷಣಾ ಸಾಧನಗಳ ಆಮದನ್ನು ಸರ್ಕಾರ ನಿಷೇಧಿಸಿರುವುದರಿಂದ ದೇಶೀಯ ಉತ್ಪಾದನೆಗೆ ಉತ್ತೇಜನ ದೊರೆತಂತಾಗಿದೆ. ಸರ್ಕಾರದ ಪ್ರಕಾರವೇ ಇಲ್ಲಿ ₹14,720 ಕೋಟಿ ಹೂಡಿಕೆಯಾಗಿದ್ದು, 10 ಸಾವಿರಕ್ಕೂ ಹೆಚ್ಚು ಉದ್ಯೋಗಗಳು ಸೃಷ್ಟಿಯಾಗಲಿವೆ. ವಿಮಾನ ನಿಲ್ದಾಣ ಬಳಿಯ ಹೊಸ ಏರೋಸ್ಪೇಸ್ ಪಾರ್ಕ್ ಇದರಲ್ಲಿ ಪ್ರಮುಖ ಪಾತ್ರ ವಹಿಸಲಿದೆ' ಎಂದು ಅವರು ಅಭಿಪ್ರಾಯಪಟ್ಟರು.



ಬೆಂಗಳೂರಿನ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ಬಳಿ ತಲೆಯೆತ್ತುತ್ತಿರುವ ಟೆಕ್ ಪಾರ್ಕ್ –ಪ್ರಜಾವಾಣಿ ಚಿತ್ರ


ಕೈಗಾರಿಕಾ ಪ್ರದೇಶದಲ್ಲಿ ನಿರ್ಮಾಣವಾಗಿರುವ ವಿಶಾಲವಾದ ರಸ್ತೆ

ಏರೋಸ್ಪೇಸ್ ಯುಗ ಆರಂಭದ ಲಕ್ಷಣ

'ನಾಗರಿಕ ಮತ್ತು ರಕ್ಷಣಾ ಕ್ಷೇತ್ರದ ಬೇಡಿಕೆಯನ್ನು ಗಮನಿಸಿದರೆ ಈ ವಲಯದ ಬೆಳವಣಿಗೆಗೆ ಸಾಕಷ್ಟು ಅವಕಾಶ ಇದೆ. ರಾಜ್ಯ ಸರ್ಕಾರ ಕೂಡ ಈ ದಿಕ್ಕಿನಲ್ಲಿ ಮುನ್ನಡೆಯುತ್ತಿದೆ. ರಾಜ್ಯದಲ್ಲಿ ಏರೋಸ್ಪೇಸ್ ಕ್ಷೇತ್ರದ ಹೊಸ ಯುಗ ಆರಂಭವಾಗುವ ಲಕ್ಷಣ ಇದೆ' ಎಂದು ಎಡಿಡಿ ಎಂಜಿನಿಯರ್ಸ್ ಇಂಡಿಯಾ (ಪ್ರೈವೇಟ್) ಲಿಮಿಟೆಡ್‌ನ ನಿರ್ದೇಶಕ ಗಿರೀಶ್ ಲಿಂಗಣ್ಣ ಅಭಿಪ್ರಾಯಪಟ್ಟರು.

'ವಿದೇಶಿ ಕಂಪನಿಗಳ ಜಂಟಿ ಸಹಭಾಗಿತ್ವಕ್ಕೆ ಪ್ರೋತ್ಸಾಹ ದೊರಕುತ್ತಿದೆ. ಸಂಶೋಧನೆ ಮತ್ತು ಅಭಿವೃದ್ಧಿ ಕೇಂದ್ರಗಳ ಸ್ಥಾಪನೆ, ಉತ್ಪಾದನಾ ಘಟಕಗಳ ಆರಂಭ, ಬಿಡಿ ಭಾಗಗಳ ತಯಾರಿಕೆಗೆ ಉತ್ತೇಜನ ಸೇರಿದಂತೆ ಇದಕ್ಕೆ ಸಂಬಂಧಿಸಿದ ಇನ್ನಿತರೆ ಉದ್ದಿಮೆಗಳನ್ನು ಆರಂಭಿಸಲು ಅವಕಾಶ ಲಭಿಸುತ್ತದೆ. ಯೋಜನೆಯಂತೆ ಕಾರ್ಯರೂಪಕ್ಕೆ ತಂದರೆ ರಾಜ್ಯಕ್ಕೆ ಅನೇಕ ರೀತಿಯ ಅನುಕೂಲಗಳಿವೆ. ಸರ್ಕಾರದ ಕೈಗಾರಿಕಾ ನೀತಿಗಳೂ ಉದ್ಯಮ ಆರಂಭಿಸುವವರಿಗೆ ಪೂರಕವಾಗಿವೆ' ಎಂದು ಹೇಳಿದರು.

ಈಗಾಗಲೇ ಸಾಫ್ಟ್‌ವೇರ್ ಕಂಪನಿಗಳ ತವರು ಎನಿಸಿಕೊಂಡಿರುವ ಬೆಂಗಳೂರಿಗೆ ಮತ್ತೊಂದು ಗರಿ ಎಂಬಂತೆ ಐ.ಟಿ ಟೆಕ್ ಪಾರ್ಕ್ ಕೂಡ ಈ ಕೈಗಾರಿಕಾ ಪ್ರದೇಶದಲ್ಲಿ ತಲೆ ಎತ್ತಲಿದೆ. ಇದರೊಂದಿಗೆ ಹಾರ್ಡ್‌ವೇರ್ ಪಾರ್ಕ್‌ನಲ್ಲಿ ಎಲೆಕ್ಟ್ರಾನಿಕ್ಸ್, ಆಹಾರ, ಔಷಧಕ್ಕೆ ಸಂಬಂಧಿಸಿದ ಘಟಕಗಳೂ ಬರಲಿವೆ. ಎಲ್ಲವೂ ಅಂದುಕೊಂಡಂತೆ ನಡೆದರೆ, ನಿರೀಕ್ಷೆಯಂತೆ ಬಂಡವಾಳ ಹೂಡಿಕೆಯಾದರೆ ಲಕ್ಷಾಂತರ ಜನರಿಗೆ ಉದ್ಯೋಗ ದೊರಕಲಿದೆ. ಬೆಂಗಳೂರಿನ ಬೆಳವಣಿಗೆ ಇನ್ನೊಂದು ಮಗ್ಗುಲಿಗೆ ಹೊರಳುವ ಸಾಧ್ಯತೆ ಇದೆ.

ವಿಡಿಯೋ ನೋಡಲು ಕೋಡ್ ಸ್ಕ್ಯಾನ್ ಮಾಡಿ
ಪ್ರಜಾವಾಣಿ ನೋಡಿಯೊ

ಅಂಕಿ ಅಂಶ

1,155 ಎಕರೆ – ಐ.ಟಿ ಪಾರ್ಕ್‌ಗೆ

984 ಎಕರೆ – ಏರೋಸ್ಪೇಸ್ ಪಾರ್ಕ್ ಮತ್ತು ಏರೋಸ್ಪೇಸ್ ವಿಶೇಷ ಆರ್ಥಿಕ ವಲಯ

849 ಎಕರೆ – ಹಾರ್ಡ್‌ವೇರ್ ಪಾರ್ಕ್

ಬಾಡಿಗೆ ಮನೆಗಳಿಗೆ ಬೇಡಿಕೆ

ಈ ಕೈಗಾರಿಕಾ ಪ್ರದೇಶಕ್ಕೆ ಹೊಂದಿಕೊಂಡಂತೆ ಇರುವ ಹಳ್ಳಿಗಳಲ್ಲಿ ಬಾಡಿಗೆ ಮನೆಗಳಿಗೆ ಈಗ ಬೇಡಿಕೆ ಶುರುವಾಗಿದೆ.

ಬಾಡಿಗೆಗೆ ಕೊಡುವ ಉದ್ದೇಶಕ್ಕಾಗಿಯೇ ಸಣ್ಣ ಸಣ್ಣ ಮನೆಗಳನ್ನು ಹಳ್ಳಿಯ ಜನರು ನಿರ್ಮಿಸುತ್ತಿದ್ದಾರೆ. ಈ ಹಿಂದೆ ಕೊಟ್ಟಿಗೆಯಾಗಿದ್ದ ಮನೆಗಳನ್ನೂ ಬಾಡಿಗೆ ಮನೆಗಳಾಗಿ ಕೆಲವರು ಮಾರ್ಪಡಿಸುತ್ತಿದ್ದಾರೆ.

ಸಿಂಗನಗಳ್ಳಿ, ಹುತ್ತನಹಳ್ಳಿ, ಮೀಸಗಾನಹಳ್ಳಿ, ಭಟ್ರಮಾರನೇಹಳ್ಳಿ, ಮೈಲನಹಳ್ಳಿ, ಶೆಟ್ಟಿಗೆರೆ, ಬಾಗಲೂರು ಮತ್ತು ಸುತ್ತಮುತ್ತಲ ಗ್ರಾಮಗಳಲ್ಲಿ ಅಭಿವೃದ್ಧಿಯ ಸಂಚಲನ ಶುರುವಾಗಿದೆ. ಈಗಾಗಲೇ ಕಾರ್ಯಾರಂಭಗೊಂಡಿರುವ ಕೈಗಾರಿಕೆಗಳಲ್ಲಿ ಸ್ಥಳೀಯರಿಗೆ ಉದ್ಯೋಗ ನೀಡುತ್ತಿಲ್ಲ ಎಂಬ ಆರೋಪಗಳೂ ಇವೆ.

'ರಿಯಲ್ ಎಸ್ಟೇಟ್‌ಗೆ ಉತ್ತೇಜನ'



ವಿಮಾನ ನಿಲ್ದಾಣದ ಪಕ್ಕದಲೇ ಐಟಿ, ಏರೋಸ್ಪೇಸ್ ಹಾಗೂ ಹಾರ್ಡ್‌ವೇರ್ ಪಾರ್ಕ್ ನಿರ್ಮಾಣವಾಗುತ್ತಿದ್ದು, ಮುಂದಿನ ದಿನಗಳಲ್ಲಿ ದೇವನಹಳ್ಳಿ ಜಾಗತಿಕ ಮಟ್ಟದಲ್ಲಿ ಗುರುತಿಸಿಕೊಳ್ಳಲಿದೆ. ಜತೆಗೆ, ಸ್ಥಳೀಯರಿಗೆ ಉದ್ಯೋಗ ಸಿಗಲಿದೆ. ಅನೇಕ ಮಂದಿ ಆರ್ಥಿಕವಾಗಿ ಸಬಲರಾಗಲಿದ್ದಾರೆ. ಸುತ್ತಮುತ್ತಲಿನ ಗ್ರಾಮಗಳಿಗೆ ಅಗತ್ಯ ಮೂಲಸೌಕರ್ಯ ಸಿಗಲಿದೆ. ರಿಯಲ್ ಎಸ್ಟೇಟ್ ಉದ್ಯಮಕ್ಕೆ ಉತ್ತೇಜನ ಸಿಕ್ಕಿ ಕೆಲವೇ ವರ್ಷಗಳಲ್ಲಿ ಸುತ್ತಮುತ್ತಲಿನ ಗ್ರಾಮಗಳ ಭೂಮಿ ಮೌಲ್ಯ ಹತ್ತು ಪಟ್ಟು ಹೆಚ್ಚಾಗಲಿದೆ.

ಡಾ. ಆನಂದ ಕುಮಾರ್, ಮಾನಸ ಸಮೂಹ ಸಂಸ್ಥೆಯ ಮಾಲೀಕ

ವಿಶಾಲವಾದ ರಸ್ತೆ: ಸ್ಥಳೀಯರಲ್ಲಿ ಸಂತಸ

ಮೂರು ಕ್ಲಸ್ಟರ್‌ಗಳನ್ನು ಒಳಗೊಂಡ ಇಡೀ ಕೈಗಾರಿಕಾ ಅಭಿವೃದ್ಧಿ ಪ್ರದೇಶದಲ್ಲಿ ವಿಶಾಲವಾದ ರಸ್ತೆಗಳು ನಿರ್ಮಾಣವಾಗಿವೆ. ಕಳೆದ ಎರಡು ವರ್ಷಕ್ಕೆ ಹೋಲಿಸಿದರೆ ಈ ಪ್ರದೇಶದ ಚಿತ್ರಣವೇ ಬದಲಾಗಿದೆ.

ದೇವನಹಳ್ಳಿಯಿಂದ ಕೆ.ಆರ್.ಪುರ, ಕಾಟಂನಲ್ಲೂರು ಮೂಲಕ ವೈಟ್‌ಫೀಲ್ಡ್ ಮತ್ತು ಹೊಸಕೋಟೆ ಸಂಪರ್ಕಿಸಲು ರಸ್ತೆ ನಿರ್ಮಾಣವಾಗಿದೆ. ಬಾಗಲೂರು ಮೂಲಕ ಹೆಣ್ಣೂರು ಸಂಪರ್ಕಿಸುವ ರಸ್ತೆಯೂ ವಿಸ್ತರಣೆಯಾಗಿದೆ.

ವಸತಿ ಉದ್ದೇಶಕ್ಕೆ 250 ಎಕರೆ

'ಕೈಗಾರಿಕಾ ಪ್ರದೇಶ ಪರಿಪೂರ್ಣವಾಗಿ ಆರಂಭವಾದ ನಂತರ ಇಲ್ಲಿನ ಉದ್ಯೋಗಿಗಳಿಗೆ ಅನುಕೂಲ ಆಗುವಂತೆ ವಸತಿ ಉದ್ದೇಶಕ್ಕೆ 250 ಎಕರೆ ಮೀಸಲಿರಿಸಲಾಗಿದೆ' ಎಂದು ಕೆಐಎಡಿಬಿ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಡಾ. ಎನ್. ಶಿವಶಂಕರ್ ತಿಳಿಸಿದರು.

ಇಲ್ಲಿ ವಸತಿ ಕಟ್ಟಡಗಳ ನಿರ್ಮಾಣಕ್ಕೆ ಪ್ರೆಸ್ಟೀಜ್, ಬ್ರಿಗೇಡ್ ರೀತಿಯ ಹಲವು ಕಂಪನಿಗಳು ಜಾಗ ಪಡೆದುಕೊಂಡಿವೆ ಎಂದರು.


'ಏರೋಸ್ಪೇಸ್ ಎಸ್‌ಇಝಡ್ ಹೊರತುಪಡಿಸಿ ಬೇರೆಲ್ಲಾ ಕ್ಲಸ್ಟರ್‌ಗಳಲ್ಲಿ ಭೂಮಿ ಹಂಚಿಕೆಯಾಗಿದೆ. ಶೆಲ್, ಬೋಯಿಂಗ್ ಇಂಡಿಯಾ, ವಿಪ್ರೊ, ಥಾಯಿಸನ್, ಮಹಿಂದ್ರ, ಬಿಇಎಲ್ ಸೇರಿ ಹಲವು ಪ್ರತಿಷ್ಠಿತ ಕಂಪನಿಗಳು ಇಲ್ಲಿ ಜಾಗ ಪಡೆದಿವೆ' ಎಂದು ವಿವರಿಸಿದರು.



15 ವರ್ಷಗಳ ಹಿಂದೆ ಸರ್ಕಾರ ಎಕರೆಗೆ ₹55 ಲಕ್ಷ ಕೊಟ್ಟಿದೆ. ಸ್ವಾಧೀನವಾಗದೆ ಉಳಿದಿರುವ ಜಮೀನೀಗ ಮೂರ್ನಾಲ್ಕು ಕೋಟಿ ಬೆಲೆ ಬಾಳುತ್ತದೆ. ಬಂದ ಪರಿಹಾರವನ್ನು ಬುದ್ದಿವಂತರು ಉಳಿಸಿಕೊಂಡಿದ್ದಾರೆ, ಬಹುತೇಕರು ಖರ್ಚು ಮಾಡಿ ಈಗ ಬರಿಗೈ ಆಗಿದ್ದಾರೆ **ಚಿನ್ನಪ್ಪ,** ಸ್ಥಳೀಯ ನಿವಾಸಿ



ಮೊದಲು ಸೌದೆ ಮಾರಾಟ ಮಾಡಿ ಜೀವನ ನಡೆಸಬೇಕಿತ್ತು. ಬಂದ ಪರಿಹಾರದ ಹಣದಲ್ಲಿ ಹಲವರು ಮನೆ ಕಟ್ಟಿಕೊಂಡಿದ್ದಾರೆ. ಕೆಲವರು ಮೋಜು ಮಾಡಿ ಹಣ ಮುಗಿಸಿದ್ದಾರೆ. ಬಾಡಿಗೆ ಮನೆಗಳಿಗೆ ಬೇಡಿಕೆ ಶುರು ಆಗಿದೆ. ಆದರೆ, ಕಟ್ಟಿಕೊಡಲು ಹಣವೇ ಇಲ್ಲ
ಆನಂದ್, ಸ್ಥಳೀಯ



ಕೈಗಾರಿಕೆಗಳು ಆರಂಭವಾದ ಬಳಿಕ ಮೈಲನಹಳ್ಳಿ, ಸಿಂಗೇನಹಳ್ಳಿ, ಬೇಗೂರು, ಭಟ್ರಮಾರೇನಹಳ್ಳಿ ಹೀಗೆ ಹಲವು ಕಡೆ ಬಾಡಿಗೆ ಮನೆಗಳಿಗೆ ಬೇಡಿಕೆ ಜಾಸ್ತಿ ಆಗಿದೆ. ಸಣ್ಣ ಸಣ್ಣ ಮನೆಗಳನ್ನು ಮಾಡಿ ಕಾರ್ಮಿಕರಿಗೆ ಬಾಡಿಗೆಗೆ ಕೊಡುತ್ತಿದ್ದಾರ
ರಾಮಚಂದ್ರಪ್ಪ, ಸ್ಥಳೀಯ ನಿವಾಸಿ



ಈಗಾಗಲೇ ಆರಂಭ ಆಗಿರುವ ಕೈಗಾರಿಕೆಗಳಲ್ಲಿ ಸ್ಥಳೀಯರಿಗೆ ಉದ್ಯೋಗ ನೀಡುತ್ತಿಲ್ಲ. ಅಕ್ಕ–ಪಕ್ಕದ ಊರಿನ ಹೆಸರು ಕೇಳಿದ ಕೂಡಲೇ ವಾಪಸ್ ಕಳುಹಿಸುತ್ತಾರೆ
ಅರವಿಂದ್, ಉದ್ಯೋಗಾಕಾಂಕ್ಷಿ



ಮೊದಲು ಹುಲ್ಲಿನ ಮನೆಯಲ್ಲಿ ಇದ್ದವರು ಆರ್‌ಸಿಸಿ ಮನೆ ಮಾಡಿಕೊಂಡರು. ಕೆಲವರು ಬೇರೆ ಕಡೆ ಜಮೀನು ತೆಗೆದುಕೊಂಡಿದ್ದಾರೆ. ಇನ್ನೂ ಹಲವರು ಅನಗತ್ಯವಾಗಿ ಹಣ ಖರ್ಚು ಮಾಡಿ ಬದುಕನ್ನು ಹಾಳು ಮಾಡಿಕೊಂಡಿದ್ದಾರೆ
ಮುನಿಪಿಳ್ಳಪ್ಪ, ಸ್ಥಳೀಯ ನಿವಾಸಿ.

ಆರ್.ಟಿ. ನಗರದಲ್ಲಿ 'ಕ್ಯೂಪಾ' ಸಣ್ಣ ಪ್ರಾಣಿಗಳ ವಿಶೇಷ ಆಸ್ಪತ್ರೆ ಕಾರ್ಯಾರಂಭ

ಕೋವಿಡ್ ಕಾಲದಲ್ಲಿ ಸಣ್ಣ ಪ್ರಾಣಿಗಳ ರಕ್ಷಣೆ

• ಗುರು ಪಿ.ಎಸ್.

ಬೆಂಗಳೂರು: ಕೋವಿಡ್ ಸಂದರ್ಭದಲ್ಲಿ ಸಣ್ಣ ಪ್ರಾಣಿಗಳ ಶುಶ್ರೂಷಕ ವಲಯವೂ ಸಾಕಷ್ಟು ಸವಾಲು ಎದುರಿಸಿತ್ತು. ಶ್ವಾನಗಳು, ಬೆಕ್ಕುಗಳಂತಹ ಪ್ರಾಣಿಗಳು ಅನಾರೋಗ್ಯಕ್ಕೀಡಾಗಿದ್ದಾಗ ಅವುಗಳಿಗೆ ಚಿಕಿತ್ಸೆ ನೀಡುವುದು, ಪ್ರಾಣಿಪ್ರಿಯರ ನಡುವೆ ಅಂತರ ಕಾಪಾಡಿಕೊಳ್ಳುವುದು ಕಷ್ಟವಾದಾಗ, ಆಸ್ಪತ್ರೆಯನ್ನೇ ಸ್ಥಳಾಂತರಿಸಿ, ಅತ್ಯಾಧುನಿಕ ಚಿಕಿತ್ಸೆಗೆ ವ್ಯವಸ್ಥೆ ಮಾಡಿದೆ ಕ್ಯೂಪಾ (ಕಂಪ್ಯಾಶನ್ ಅನ್‌ಲಿಮಿಟೆಡ್ ಪ್ಲಸ್ ಆ್ಯಕ್ಷನ್).


ಕರ್ನಲ್ ಡಾ. ಎಂ. ಜಗದೀಶ್


ಡಾ. ಶೀಲಾ

ಇಲ್ಲಿನ ಆರ್.ಟಿ. ನಗರ ಮುಖ್ಯರಸ್ತೆಯಲ್ಲಿ ಕ್ಯೂಪಾದ ಸಣ್ಣ ಪ್ರಾಣಿಗಳ ವಿಶೇಷ ಆಸ್ಪತ್ರೆ ಕಾರ್ಯಾರಂಭ ಮಾಡಿದೆ. ಮೊದಲು, ದೇವೇಗೌಡ ರಸ್ತೆಯಲ್ಲಿದ್ದ ಈ ಆಸ್ಪತ್ರೆ, ಕೋವಿಡ್ ಸಂದರ್ಭದಲ್ಲಿ ಪ್ರಾಣಿಗಳ ಚಿಕಿತ್ಸೆ ದುಸ್ತರವಾದಾಗ, ಈಗಿನ ಈ ಸ್ಥಳದಲ್ಲಿ 5 ಸಾವಿರ ಚದರ ಅಡಿ ವಿಸ್ತೀರ್ಣದಲ್ಲಿ ಆಸ್ಪತ್ರೆ ಕಾರ್ಯನಿರ್ವಹಿಸುತ್ತಿದೆ.

'ಹಿಂದಿಗಿಂತಲೂ ಈಗ (ಕೋವಿಡ್ ಸಂದರ್ಭ) ಸ್ವಚ್ಛತೆಗೆ ಹೆಚ್ಚು ಆದ್ಯತೆ ನೀಡಬೇಕಾಗಿದೆ. ಪ್ರಾಣಿಗಳ ಆರೋಗ್ಯ ಸ್ಥಿತಿ ತುಂಬಾ ಸೂಕ್ಷ್ಮವಾಗಿರುವುದರಿಂದ ಹೆಚ್ಚು ಗಮನ ಕೊಡಬೇಕಾಗುತ್ತದೆ. ಈ ಹಿಂದಿನ ಆಸ್ಪತ್ರೆ ಚಿಕ್ಕದಾಗಿದ್ದು, ಕಷ್ಟವಾಗುತ್ತಿತ್ತು. ಸಾಕು ಪ್ರಾಣಿಗಳಿಗೆ ಅನಾರೋಗ್ಯ ತಪ್ಪಿದಾಗ ಅದರ ಜೊತೆ ಮೂರು–ನಾಲ್ಕು ಜನ ಬಂದು ಬಿಡುತ್ತಿದ್ದರು. ಅಂತರ ಕಾಪಾಡಿಕೊಳ್ಳುವುದು ಕಷ್ಟವಾಗುತ್ತಿತ್ತು. ಈ ನಿಟ್ಟಿನಲ್ಲಿ ಆಸ್ಪತ್ರೆಯನ್ನೇ ಸ್ಥಳಾಂತರಿಸಿ, ವಿಶಾಲ ಜಾಗದ ವ್ಯವಸ್ಥೆ ಮಾಡಿದ್ದೇವೆ. ಜ.14ರಿಂದ ಈ ಸ್ಥಳದಲ್ಲಿ ಆಸ್ಪತ್ರೆ ತೆರೆಯಲಾಗಿದೆ' ಎಂದು ಕ್ಯೂಪಾದ ಆರ್.ಟಿ. ನಗರ ಆಸ್ಪತ್ರೆ ಉಸ್ತುವಾರಿ ಕರ್ನಲ್ ಎಂ. ಜಗದೀಶ್ ಹೇಳಿದರು.

'ದಿನಕ್ಕೆ 70ರಿಂದ 80 ಪ್ರಾಣಿಗಳು ಚಿಕಿತ್ಸೆಗಾಗಿ ಬರುತ್ತವೆ. ಎಂಟಕ್ಕೂ ಹೆಚ್ಚು ವೈದ್ಯರು ಇದ್ದು, 20 ಸಹಾಯಕರು ಇದ್ದಾರೆ. ಬೇರೆ ಪ್ರಾಣಿ ಚಿಕಿತ್ಸಾ ಕೇಂದ್ರಗಳಿಗೆ ಹೋಲಿಸಿದರೆ, ವೈದ್ಯಕೀಯ ಶುಲ್ಕ ತುಂಬಾ ಕಡಿಮೆ ನಿಗದಿ ಮಾಡಲಾಗಿದೆ. ನಿಯಮಿತ ಆರೋಗ್ಯ ತಪಾಸಣೆಗೆ ₹100 ಹಾಗೂ ಶಸ್ತ್ರ ಚಿಕಿತ್ಸೆಯಂತಹ ಕಾರ್ಯಗಳಿಗೆ ₹1,000ದಿಂದ ₹2,000 ತೆಗೆದುಕೊಳ್ಳಲಾಗುತ್ತದೆ' ಎಂದು ತಿಳಿಸಿದರು.

ಲಾಭದಾಯಕವಲ್ಲದ ಸಂಸ್ಥೆ: 'ಕ್ಯೂಪಾ' ಒಂದು ಲಾಭದಾಯಕವಲ್ಲದ, ಸರ್ಕಾರೇತರ ಸಂಸ್ಥೆ. ಬೀದಿನಾಯಿಗಳು, ದನಗಳು, ಇತ್ಯಾದಿ ಪ್ರಾಣಿಗಳ ಪೋಷಣೆ, ಜನರು ಸಾಕಲು ಆಗದೇ ತಂದು ಬಿಟ್ಟ ಶ್ವಾನಗಳ ರಕ್ಷಣೆ, ವಯಸ್ಸಾದ ಸಣ್ಣ ಪ್ರಾಣಿಗಳ ಸಂರಕ್ಷಣೆಯ ಕಾರ್ಯವನ್ನು ಮಾಡುತ್ತಿದ್ದೇವೆ. ನಗರದ ಆರು ಕಡೆಗಳಲ್ಲಿ ನಮ್ಮ ಕೇಂದ್ರಗಳಿವೆ. ಆರ್.ಟಿ. ನಗರದ ಕ್ಲಿನಿಕ್‌ನಿಂದ ಬಂದ ಆದಾಯವನ್ನು ಈ ಕೇಂದ್ರಗಳ ನಿರ್ವಹಣೆಗೆ ಬಳಸುತ್ತಿದ್ದೇವೆ' ಎಂದು ಕ್ಯೂಪಾ ಟ್ರಸ್ಟಿ ಡಾ. ಶೀಲಾ ರಾವ್ ಹೇಳಿದರು.

'ಇಂಗ್ಲೆಂಡ್‌ನ ಮಹಿಳೆ ಕ್ರಿಸ್ಟಲ್ ರೋಜರ್ಸ್ ಬೆಂಗಳೂರಿನಲ್ಲಿ ಈ ಕೇಂದ್ರವನ್ನು ಪ್ರಾರಂಭಿಸಿದರು. ಅವರ ಜೊತೆ ನಾನು, ಸುಪರ್ಣಾ ಗಂಗೂಲಿ ಈ ಟ್ರಸ್ಟ್ ರಚಿಸಿದೆವು. 30 ವರ್ಷಗಳಿಂದ ಕ್ಯೂಪಾ ಕೆಲಸ ಮಾಡುತ್ತಿದೆ' ಎಂದು ಹೇಳಿದರು.

ಸಂಪರ್ಕಕ್ಕೆ: 83771-67314.


'ಕ್ಯೂಪಾ' ಆಸ್ಪತ್ರೆಯಲ್ಲಿ ತಮ್ಮ ಸಾಕು ಪ್ರಾಣಿಗಳಿಗೆ ಚಿಕಿತ್ಸೆ ಕೊಡಿಸುತ್ತಿರುವ ಜನ –ಪ್ರಜಾವಾಣಿ ಚಿತ್ರ/ ಕೃಷ್ಣಕುಮಾರ್ ಪಿ.ಎಸ್.



ಸಣ್ಣ ಪ್ರಾಣಿಗಳಲ್ಲಿ ಜ್ವರ, ಚರ್ಮದ ಸಮಸ್ಯೆ ಹೆಚ್ಚಾಗಿ ಕಾಣಿಸಿಕೊಳ್ಳುತ್ತಿದೆ. ಎಕ್ಸ್‌ರೇ- ಸ್ಕ್ಯಾನ್ ಸೌಲಭ್ಯ ಇರುವುದರಿಂದ ಸಮಸ್ಯೆ ತಿಳಿದು ಚಿಕಿತ್ಸೆ ನೀಡಲು ಅನುಕೂಲವಾಗಿದೆ
ಡಾ. ಅನ್ವಿತಾ, ವೈದ್ಯೆ



ವೈದ್ಯರು, ಸಿಬ್ಬಂದಿ ಸೌಜನ್ಯದಿಂದ ನಡೆದುಕೊಳ್ಳುತ್ತಾರೆ. 20 ಕಿ.ಮೀ. ದೂರದಿಂದಲೂ ಪ್ರಾಣಿಗಳನ್ನು ಇಲ್ಲಿಗೆ ಕರೆ ತರುವುದನ್ನು ನೋಡಿದ್ದೇನೆ. ಚಿಕಿತ್ಸಾ ಶುಲ್ಕವೂ ಕಡಿಮೆ ಇದೆ.
ವನಜಾ, ಪ್ರಾಣಿಪ್ರಿಯರು

'ಕ್ಯೂಟ್‌ಕ್ಯೂಪಾ' ವರದಿಯ ವಿಡಿಯೊ ನೋಡಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ
ಪ್ರಜಾವಾಣಿ ನೋಡಿಯೊ

ಕ್ಯೂಪಾದ ಇತರೆ ಕೇಂದ್ರಗಳು

- ಹೆಬ್ಬಾಳ– ಅಪಘಾತಕ್ಕೊಳಗಾದ/ ಬೀದಿ ನಾಯಿಗಳ ರಕ್ಷಣಾ ಕೇಂದ್ರ
- ದೊಮ್ಮಸಂದ್ರ– ಸಾಕಲು ಆಗದೆ ತಂದು ಬಿಟ್ಟ ಶ್ವಾನಗಳ ರಕ್ಷಣಾ ಕೇಂದ್ರ
- ಕೆಂಗೇರಿ– ದೊಡ್ಡ ಪ್ರಾಣಿಗಳ ಪುನರ್ವಸತಿ ಕೇಂದ್ರ
- ಮೈಲಪ್ಪನಹಳ್ಳಿ– ವಯಸ್ಸಾದ ಪ್ರಾಣಿಗಳ ಕೇಂದ್ರ
- ಚಾಮರಾಜಪೇಟೆ– ಬೀದಿನಾಯಿಗಳ ಸಂತಾನಶಕ್ತಿ ಹರಣ ಕೇಂದ್ರ
- ಹಲಸೂರಿನಲ್ಲಿ ಆಡಳಿತ ಕೇಂದ್ರವಿದೆ.

ಆಸ್ಪತ್ರೆಯಲ್ಲಿ ಇರುವ ಸೌಲಭ್ಯ

- ಎಕ್ಸ್–ರೇ, ಅಲ್ಟ್ರಾಸೌಂಡ್ ಸ್ಕ್ಯಾನಿಂಗ್
- ಇಸಿಜಿ
- ಸಂತಾನಶಕ್ತಿ ಹರಣ ಶಸ್ತ್ರಚಿಕಿತ್ಸೆ
- ಲಸಿಕೆಗಳು
- ರಕ್ತ ಪರೀಕ್ಷೆ ವ್ಯವಸ್ಥೆ
- ಕೇಶವಿನ್ಯಾಸ ಸೌಲಭ್ಯ

ನಗರದ 29 ಆಸ್ಪತ್ರೆಗಳಲ್ಲಿ ಲಸಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಬಿಎಂಪಿ ವ್ಯಾಪ್ತಿಯಲ್ಲಿ 24 ಆಸ್ಪತ್ರೆಗಳು ಹಾಗೂ ಬೆಂಗಳೂರು ನಗರ ಜಿಲ್ಲೆ ವ್ಯಾಪ್ತಿಯ 5 ಆಸ್ಪತ್ರೆಗಳನ್ನು ಮೂರನೇ ಹಂತದ ಕೋವಿಡ್ ಲಸಿಕೆ ವಿತರಣೆ ಅಭಿಯಾನಕ್ಕೆ ಗುರುತಿಸಲಾಗಿದೆ.

ಮೂರನೇ ಹಂತದಲ್ಲಿ 60 ವರ್ಷ ಮೇಲ್ಪಟ್ಟವರು ಹಾಗೂ ಕೋವಿಡೇತರ ಕಾಯಿಲೆಗಳನ್ನು ಎದುರಿಸುತ್ತಿರುವ 45ರಿಂದ 59 ವರ್ಷದೊಳಗಿನವರಿಗೆ ಲಸಿಕೆ ನೀಡಲಾಗುತ್ತದೆ. ನಗರದಲ್ಲಿ ಮೊದಲ ಹಂತದಲ್ಲಿ ಗುರುತಿಸಲಾಗಿದ್ದ 2,36,157 ಆರೋಗ್ಯ ಕಾರ್ಯಕರ್ತರಲ್ಲಿ 1,05,431 ಮಂದಿ ಲಸಿಕೆ ಹಾಕಿಸಿಕೊಂಡಿದ್ದಾರೆ. 73,871 ಮಂದಿ ಮುಂಚೂಣಿ ಯೋಧರಲ್ಲಿ 27,309 ಮಂದಿ ಲಸಿಕೆ ಪಡೆದುಕೊಂಡಿದ್ದಾರೆ. ಮೂರನೇ ಹಂತದ ಅಭಿಯಾನಕ್ಕೆ 20ಕ್ಕೂ ಅಧಿಕ ಖಾಸಗಿ ಆಸ್ಪತ್ರೆಗಳನ್ನು ಗುರುತಿಸಲಾಗಿದೆ.

ಲಸಿಕೆ ಅಭಿಯಾನ ನಡೆಸುವ ಆಸ್ಪತ್ರೆಗಳು

- ರಾಜರಾಜೇಶ್ವರಿ ವೈದ್ಯಕೀಯ ಕಾಲೇಜು ಮತ್ತು ಆಸ್ಪತ್ರೆ
- ನಾರಾಯಣ ಹೃದಯಾಲಯ
- ಆನೇಕಲ್ ತಾಲ್ಲೂಕು ಆಸ್ಪತ್ರೆ
- ಕೃಷ್ಣರಾಜಪುರ ತಾಲ್ಲೂಕು ಆಸ್ಪತ್ರೆ
- ಯಲಹಂಕ ತಾಲ್ಲೂಕು ಆಸ್ಪತ್ರೆ
- ಕೆ.ಸಿ. ಜನರಲ್ ಆಸ್ಪತ್ರೆ
- ಜಯನಗರ ಸಾರ್ವಜನಿಕ ಆಸ್ಪತ್ರೆ
- ಬೆಂಗಳೂರು ವೈದ್ಯಕೀಯ ಕಾಲೇಜು ಮತ್ತು ಆಸ್ಪತ್ರೆ
- ಬೌರಿಂಗ್ ವೈದ್ಯಕೀಯ ಕಾಲೇಜು ಮತ್ತು ಆಸ್ಪತ್ರೆ
- ಸಿ.ವಿ. ರಾಮನ್ ಸಾರ್ವಜನಿಕ ಆಸ್ಪತ್ರೆ
- ವಿಕ್ರಮ್ ಆಸ್ಪತ್ರೆ
- ಮಣಿಪಾಲ್ ಆಸ್ಪತ್ರೆ, ಹಳೆ ವಿಮಾನ ನಿಲ್ದಾಣ ರಸ್ತೆ
- ರಾಘವೇಂದ್ರ ಪೀಪಲ್ ಟ್ರೀ ಆಸ್ಪತ್ರೆ
- ಸಪ್ತಗಿರಿ ವೈದ್ಯಕೀಯ ಕಾಲೇಜು
- ಕೊಲಂಬಿಯಾ ಏಷ್ಯಾ ಆಸ್ಪತ್ರೆ, ಯಶವಂತಪುರ
- ಅಪೋಲೊ ಆಸ್ಪತ್ರೆ, ಶೇಷಾದ್ರಿಪುರ
- ಕೊಲಂಬಿಯಾ ಏಷ್ಯಾ, ಸರ್ಜಾಪುರ
- ಕೊಲಂಬಿಯಾ ಏಷ್ಯಾ ವೈಟ್ ಫೀಲ್ಡ್
- ಫೋರ್ಟಿಸ್ ಆಸ್ಪತ್ರೆ, ಬನ್ನೇರುಘಟ್ಟ ರಸ್ತೆ
- ಅಪೋಲೊ ಆಸ್ಪತ್ರೆ, ಬನ್ನೇರುಘಟ್ಟ ರಸ್ತೆ
- ಸ್ಪರ್ಶ ಆಸ್ಪತ್ರೆ, ಆರ್.ಆರ್. ನಗರ
- ಬಿಜಿಎಸ್ ಜಿಐಎಂಎಸ್
- ಕೊಲಂಬಿಯಾ ಏಷ್ಯಾ ಆಸ್ಪತ್ರೆ, ಹೆಬ್ಬಾಳ
- ಆಸ್ಟರ್ ಸಿಎಂಐ ಆಸ್ಪತ್ರೆ, ಹೆಬ್ಬಾಳ
- ಅಪೋಲೊ ಆಸ್ಪತ್ರೆ, ಜಯನಗರ
- ದಯಾನಂದ ಸಾಗರ್ ಆಸ್ಪತ್ರೆ, ಕುಮಾರಸ್ವಾಮಿ ಬಡಾವಣೆ • ಮಲ್ಲಿಗೆ ಆಸ್ಪತ್ರೆ
- ಸುಶ್ರೂಷ ಆಸ್ಪತ್ರೆ, • ಎಂ.ಎಸ್. ರಾಮಯ್ಯ ಆಸ್ಪತ್ರೆ


ಕೋವಿಡ್: ಮತ್ತೆ 521 ಮಂದಿಗೆ ಸೋಂಕು

ಬೆಂಗಳೂರು: ರಾಜ್ಯದಲ್ಲಿ ಭಾನುವಾರ 521 ಕೋವಿಡ್ ಪ್ರಕರಣಗಳು ದೃಢಪಟ್ಟಿದ್ದು, ಇಲ್ಲಿಯವರೆಗೆ ಸೋಂಕಿಗೀಡಾದವರ ಒಟ್ಟು ಸಂಖ್ಯೆ 9.51 ಲಕ್ಷ ದಾಟಿದೆ.

ಕೋವಿಡ್ ಪ್ರಕರಣಗಳ ಸಂಖ್ಯೆ ಮತ್ತೆ ಏರುಗತಿ ಪಡೆದುಕೊಂಡಿದೆ. ಮೂರು ದಿನಗಳ ಅವಧಿಯಲ್ಲಿ 1,615 ಮಂದಿ ಸೋಂಕಿತರಾಗಿರುವುದು ಖಚಿತಪಟ್ಟಿದೆ. ಸೋಂಕಿತರಲ್ಲಿ ಬೆಂಗಳೂರಿನಲ್ಲಿ ಐವರು ಮೃತಪಟ್ಟಿದ್ದಾರೆ. ಈವರೆಗೆ 12,331 ಮಂದಿ ಸಾವಿಗೀಡಾಗಿದ್ದಾರೆ. ಸಕ್ರಿಯ ಪ್ರಕರಣಗಳ ಸಂಖ್ಯೆ ಏರಿಕೆಯಾಗಿದ್ದು, ಸದ್ಯ 5,804 ಮಂದಿ ಆಸ್ಪತ್ರೆ ಸೇರಿದಂತೆ ವಿವಿಧೆಡೆ ಚಿಕಿತ್ಸೆ ಪಡೆದುಕೊಳ್ಳುತ್ತಿದ್ದಾರೆ. ಅವರಲ್ಲಿ 121 ಮಂದಿ ತೀವ್ರ ನಿಗಾ ಘಟಕದಲ್ಲಿ ಇದ್ದಾರೆ.

ನಗರದ ಕೋವಿಡ್ ಪ್ರಕರಣಗಳ ಅಂಕಿ–ಅಂಶ

4,05,637 ಒಟ್ಟು ಸೋಂಕಿತರು



3,97,161 ಗುಣಮುಖರಾದವರು
3,996 ಸಕ್ರಿಯ ಪ್ರಕರಣ
4,479 ಸಾವು

ಭಾನುವಾರದ ಏರಿಕೆ
312 ದೃಢಪಟ್ಟ ಪ್ರಕರಣ
146 ಗುಣಮುಖ | **5** ಸಾವು

ಕೋವಿಡ್ ಎರಡನೇ ಅಲೆ ಕಾಣಿಸಿಕೊಳ್ಳುವ ಸಾಧ್ಯತೆ ಇರುವ ಕಾರಣ ಪರೀಕ್ಷೆಗಳ ಸಂಖ್ಯೆಯನ್ನು ಹೆಚ್ಚಳ ಮಾಡಲಾಗಿದೆ. ಬೆಂಗಳೂರಿನಲ್ಲಿ 312 ಮಂದಿ ಕೋವಿಡ್ ಪೀಡಿತರಾಗಿದ್ದು, ಸೋಂಕಿತರ ಸಂಖ್ಯೆ 4.05 ಲಕ್ಷ ದಾಟಿದೆ.

ಸಾಲಕ್ಕಾಗಿ ಚಪ್ಪಲಿಯೇಟು: ಮಹಿಳೆ ಹತ್ಯೆ

ಪ್ರಜಾವಾಣಿ ವಾರ್ತೆ

ಅಪರಾಧ ಸುದ್ದಿ

ಬೆಂಗಳೂರು: ಎಚ್‌ಎಎಲ್ ಠಾಣೆ ವ್ಯಾಪ್ತಿಯಲ್ಲಿ ಅಲೀಮಾ ಬೇಬಿ (35) ಅವರನ್ನು ಹತ್ಯೆ ಮಾಡಲಾಗಿದ್ದು, ಕೃತ್ಯದ ಬಳಿಕ ಆರೋಪಿ ರಫೀಕ್ ಪರಾರಿಯಾಗಿದ್ದಾನೆ.

‘ಕೋಲ್ಕತ್ತದ ಅಲೀಮಾ ಬೇಬಿ, ನಗರದಲ್ಲಿ ಮನೆ ಕೆಲಸ ಮಾಡುತ್ತಿದ್ದರು. ಅವರ ಸಂಬಂಧಿಯೇ ಆಗಿರುವ ರಫೀಕ್ ಈ ಕೊಲೆ ಮಾಡಿದ್ದು, ಸಿ.ಸಿ. ಟಿ.ವಿ ಕ್ಯಾಮೆರಾದಲ್ಲಿ ದೃಶ್ಯ ಸೆರೆಯಾಗಿದೆ. ಆತನ ಬಂಧನಕ್ಕೆ ವಿಶೇಷ ತಂಡ ರಚಿಸಲಾಗಿದೆ’ ಎಂದು ಪೊಲೀಸ್ ಮೂಲಗಳು ಹೇಳಿವೆ.

‘ಅಲೀಮಾ ಹಾಗೂ ರಫೀಕ್ ಒಂದೇ ಊರಿನವರು. ಅವರಿಬ್ಬರು ಆಗಾಗ ಭೇಟಿಯಾಗುತ್ತಿದ್ದರು. ಕಳೆದ ವರ್ಷ ಅಲೀಮಾ ಅವರಿಗೆ ರಫೀಕ್ ₹ 10,000 ಸಾಲ ನೀಡಿದ್ದ. ಅದನ್ನು ಮಹಿಳೆ ವಾಪಸು ನೀಡಿರಲಿಲ್ಲ. ಈ ಸಂಬಂಧ ಹಲವು ಬಾರಿ ಜಗಳವೂ ಆಗಿತ್ತು.’

‘ಇತ್ತೀಚೆಗೆ ಅಲೀಮಾ ಕೆಲಸ ಮಾಡುತ್ತಿದ್ದ ಸ್ಥಳಕ್ಕೆ ಹೋಗಿದ್ದ ರಫೀಕ್, ಹಣ ನೀಡುವಂತೆ ಪಟ್ಟು ಹಿಡಿದಿದ್ದ. ಹಣವಿಲ್ಲವೆಂದು ಹೇಳಿದ್ದ ಅಲೀಮಾ, ಆತನಿಗೆ ಚಪ್ಪಲಿಯಿಂದ ಹೊಡೆದಿದ್ದರು. ಕೋಪಗೊಂಡಿದ್ದ ರಫೀಕ್, ‘ಕೊಟ್ಟ ಸಾಲ ವಾಪಸು ಕೇಳಿದ್ದಕ್ಕೆ ಜನರ ಎದುರೇ ಚಪ್ಪಲಿಯಿಂದ ಹೊಡೆದು ಅವಮಾನ ಮಾಡುತ್ತಿಯಾ. ನಿನ್ನನ್ನು ಸುಮ್ಮನೇ ಬಿಡುವುದಿಲ್ಲ’ ಎಂದು ಬೆದರಿಕೆ ಹಾಕಿ ಸ್ಥಳದಿಂದ ಹೊರಟು ಹೋಗಿದ್ದ. ಈ ಸಂಗತಿ ತನಿಖೆಯಿಂದ ಗೊತ್ತಾಗಿದೆ’ ಎಂದೂ ಮೂಲಗಳು ತಿಳಿಸಿವೆ.

ಕಾದು ಕುಳಿತು ಹತ್ಯೆ: ‘ಅಲೀಮಾ ನಿತ್ಯವೂ ನಸುಕಿನಲ್ಲಿ ಬ್ರೂಕ್‌ ಫೀಲ್ಡ್ ಎರಡನೇ ಹಂತದ ರಸ್ತೆ ಮೂಲಕ ನಡೆದುಕೊಂಡು ಮನೆ ಕೆಲಸಕ್ಕೆ ಹೋಗುತ್ತಿದ್ದರು. ಅದನ್ನು ತಿಳಿದುಕೊಂಡಿದ್ದ ಆರೋಪಿ, ಅದೇ ರಸ್ತೆಯಲ್ಲಿ ಭಾನುವಾರ ನಸುಕಿನಲ್ಲಿ ಕಾಯುತ್ತ ಕುಳಿತಿದ್ದ’ ಎಂದು ಪೊಲೀಸ್ ಮೂಲಗಳು ಹೇಳಿವೆ.

‘ನಡುರಸ್ತೆಯಲ್ಲೇ ಅಲೀಮಾರನ್ನು ಅಡ್ಡಗಟ್ಟಿದ್ದ ಆರೋಪಿ, ಚಾಕುವಿನಿಂದ ಕತ್ತು ಕೊಯ್ದಿದ್ದ. ಮಹಿಳೆ ಕುಸಿದು ಬಿದ್ದಿದ್ದರು. ನಂತರವೂ ಹಲವು ಬಾರಿ ಚಾಕುವಿನಿಂದ ಇರಿದು ಪರಾರಿಯಾಗಿದ್ದಾನೆ. ತೀವ್ರ ರಕ್ತಸ್ರಾವದಿಂದಾಗಿ ಮಹಿಳೆ ಸ್ಥಳದಲ್ಲೇ ಮೃತಪಟ್ಟಿದ್ದಾರೆ. ಸ್ಥಳಕ್ಕೆ ಹೋಗಿ ಮೃತದೇಹವನ್ನು ಮರಣೋತ್ತರ ಪರೀಕ್ಷೆಗಾಗಿ ಆಸ್ಪತ್ರೆಗೆ ಸಾಗಿಸಲಾಗಿದೆ’ ಎಂದೂ ಮೂಲಗಳು ತಿಳಿಸಿವೆ.

ನಗರದಲ್ಲಿ ಇಂದು

ರಾಷ್ಟ್ರೀಯ ವಿಜ್ಞಾನ ದಿನ: ಆನ್‌ಲೈನ್ ಭಾಷಣ–ಪ್ರೊ.ಹರ್ಷವರ್ಧನ್ ವಾನರೆ, ಅತಿಥಿಗಳು–ನರಸಿಂಹ ರಾಜು, ಕೆ.ಎಸ್.ರಂಗಪ್ಪ, ಎಸ್.ರಾಮಕೃಷ್ಣ, ಆರ್.ಕಾವ್ಯಶ್ರೀ, ಪ್ರೊ.ಗಂಗಾಧರ್, ಆಯೋಜನೆ–ಆಕ್ಸ್‌ಫರ್ಡ್ ಕಾಲೇಜ್ ಆಫ್ ಸೈನ್ಸ್, ಇಂಡಿಯನ್ ಸೈನ್ಸ್ ಕಾಂಗ್ರೆಸ್ ಅಸೋಸಿಯೇಷನ್ (ಐಎಸ್‌ಸಿಎ) , ಸ್ಥಳ–ಸಂಸ್ಥೆಯ ಸಭಾಂಗಣ, ಎಚ್‌ಎಸ್‌ಆರ್ ಬಡಾವಣೆ, ಬೆಳಿಗ್ಗೆ 10

ರಾಜ್ಯಮಟ್ಟದ ವಿಜ್ಞಾನ ವಸ್ತು ಪ್ರದರ್ಶನ ಸ್ಪರ್ಧೆ: ಉದ್ಘಾಟನೆ–ಇಸ್ರೊ ಮಾಜಿ ಅಧ್ಯಕ್ಷ ಎ.ಎಸ್. ಕಿರಣ್ ಕುಮಾರ್, ವಸ್ತು ಪ್ರದರ್ಶನ ಉದ್ಘಾಟನೆ–ಎನ್. ನರಸಿಂಹಮೂರ್ತಿ, ಅಧ್ಯಕ್ಷತೆ–ಗಿರೀಶ್ ಕಡ್ಲೇವಾಡ, ಅತಿಥಿಗಳು–ಅ.ದೇವೇಗೌಡ, ಆರತಿ ಆನಂದ್, ಹುಲಿಕಲ್ ನಟರಾಜ್, ರಾಜೇಶ್ ಪದ್ಮಾರ್, ಬಿ.ಎನ್. ಶ್ರೀನಾಥ್, ಆಯೋಜನೆ–ರಾಜ್ಯ ವಿಜ್ಞಾನ ಪರಿಷತ್ತು, ಬೆಂಗಳೂರು ನಗರ ವಿ.ವಿ, ಸ್ಥಳ–ಜ್ಞಾನಜ್ಯೋತಿ ಸಭಾಂಗಣ, ಅರಮನೆ ರಸ್ತೆ, ಬೆಳಿಗ್ಗೆ 10.30



ಎ.ಎಸ್.ಕಿರಣ್ ಕುಮಾರ್

ಪರ್ಸನಲೈಸ್ಡ್ ಮೆಡಿಸಿನ್ ಡ್ರೈವನ್ ಐಕೇರ್ ಉದ್ಘಾಟನೆ: ಪ್ರೆಸ್ಟೀಜ್ ಗ್ರೂಪ್ ಅಧ್ಯಕ್ಷ ಇರ್ಫಾನ್ ರಜಾಕ್, ಡಾ.ಕೆ. ಭುಜಂಗಶೆಟ್ಟಿ, ರೋಹಿತ್ ಶೆಟ್ಟಿ, ಆಯೋಜನೆ–ನಾರಾಯಣ ನೇತ್ರಾಲಯ, ಸ್ಥಳ–ಡಿಫೆನ್ಸ್ ಕಾಲೊನಿ, 100 ಅಡಿ ರಸ್ತೆ, ಇಂದಿರಾನಗರ, ಬೆಳಿಗ್ಗೆ 11.45

ಸಾರ್ವಜನಿಕ ರಂಗ ಮತ್ತು ಅಭಿವೃದ್ಧಿ ಕುರಿತು ದುಂಡು ಮೇಜಿನ ಸಭೆ: ಭಾಗವಹಿಸುವವರು–ರಾಜ್ಯ ಸಭಾ ಸದಸ್ಯ ಎಲ್.ಹನುಮಂತಯ್ಯ, ಟಿ.ಆರ್. ಚಂದ್ರಶೇಖರ್, ಬಿ.ಟಿ.ಲಲಿತಾ ನಾಯಕ್, ಬಡಗಲಪುರ ನಾಗೇಂದ್ರ, ಕೋಡಿಹಳ್ಳಿ ಚಂದ್ರಶೇಖರ್, ಟಿ.ಎ.ನಾರಾಯಣಗೌಡ, ಮಾವಳ್ಳಿ ಶಂಕರ್, ಅಧ್ಯಕ್ಷತೆ–ಎಸ್. ವರಲಕ್ಷ್ಮೀ, ಆಯೋಜನೆ–ಖಾಸಗೀಕರಣ ವಿರೋಧಿ ವೇದಿಕೆ, ಸ್ಥಳ–ಶಾಸಕರ ಭವನ–2, ಮಧ್ಯಾಹ್ನ 3

ಮೀಸಲಾತಿಗೆ ಒತ್ತಾಯಿಸಿ ಒಕ್ಕಲಿಗ ಸಮುದಾಯದ ಸಭೆ: ಆಯೋಜನೆ–ರಾಜ್ಯ ಒಕ್ಕಲಿಗರ ಮೀಸಲಾತಿ ಹೋರಾಟ ಸಮಿತಿ, ಸ್ಥಳ–ಕುವೆಂಪು ಕಲಾಕ್ಷೇತ್ರ, ಒಕ್ಕಲಿಗರ ಸಂಘದ ಆವರಣ, ವಿ.ವಿ. ಪುರ, ಸಂಜೆ 4

ಹಣ ವಾಪಸು ನೀಡದ ಸ್ನೇಹಿತ • ನೇಣಿಗೆ ಶರಣು

ಫೇಸ್‌ಬುಕ್‌ನಲ್ಲಿ ವಿಡಿಯೊ ಹರಿಬಿಟ್ಟು ಆತ್ಮಹತ್ಯೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ತಮ್ಮಿಂದ ಪಡೆದಿದ್ದ ಲಕ್ಷಾಂತರ ರೂಪಾಯಿ ಹಣವನ್ನು ಸ್ನೇಹಿತ ವಾಪಸು ನೀಡದಿದ್ದರಿಂದ ನೊಂದಿದ್ದರು ಎನ್ನಲಾದ ಮಂಜುನಾಥ್ (28), ಫೇಸ್‌ಬುಕ್‌ನಲ್ಲಿ ವಿಡಿಯೊ ಹರಿಬಿಟ್ಟು ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ಬಾಗಲೂರು ಠಾಣೆ ವ್ಯಾಪ್ತಿಯಲ್ಲಿ ನಡೆದಿದೆ.

‘ಕೊತ್ತನೂರು ನಿವಾಸಿಯಾದ ಮಂಜುನಾಥ್, ಕೆಲದಿನಗಳಿಂದ ನಾಪತ್ತೆಯಾಗಿದ್ದರು. ಆ ಬಗ್ಗೆ ಕೊತ್ತನೂರು ಠಾಣೆಯಲ್ಲಿ ಶುಕ್ರವಾರ (ಫೆ. 26) ಪ್ರಕರಣ ದಾಖಲಾಗಿತ್ತು. ನಮ್ಮ ಠಾಣೆ ವ್ಯಾಪ್ತಿಯಲ್ಲಿ ನೇಣು ಬಿಗಿದ ಸ್ಥಿತಿಯಲ್ಲಿ ಅವರ ಮೃತದೇಹ ಶನಿವಾರ ಸಿಕ್ಕಿದೆ’ ಎಂದು ಬಾಗಲೂರು ಠಾಣೆ ಪೊಲೀಸ್ ಮೂಲಗಳು ಹೇಳಿವೆ.



ಮಂಜುನಾಥ್

‘ಲಕ್ಷಾಂತರ ರೂಪಾಯಿ ಪಡೆದಿದ್ದ ಸ್ನೇಹಿತ ಪವನ್, ಹಣವನ್ನು ಇದುವರೆಗೂ ವಾಪಸು ನೀಡಿಲ್ಲ. ಹಣ ಕೇಳಿದ್ದಕ್ಕೆ ಜೀವ ಬೆದರಿಕೆ ಹಾಕುತ್ತಿದ್ದಾನೆ. ಇದರಿಂದ ನೊಂದು ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದೇನೆ. ನನ್ನ ಸಾವಿಗೆ ಆ ಸ್ನೇಹಿತನೇ ಕಾರಣ’ ಎಂದು ಆರೋಪಿಸಿ ವಿಡಿಯೊ ಚಿತ್ರೀಕರಿಸಿದ್ದ ಮಂಜುನಾಥ್, ಅದನ್ನು ತಮ್ಮ ಫೇಸ್‌ಬುಕ್ ಖಾತೆಗೆ ಅಪ್‌ಲೋಡ್ ಮಾಡಿದ್ದಾರೆ’ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

‘ವಿಡಿಯೊ ನೋಡಿದ್ದ ಕುಟುಂಬದವರು ಹಾಗೂ ಸ್ನೇಹಿತರು, ಮಂಜುನಾಥ್ ಮೊಬೈಲ್‌ಗೆ ಕರೆ ಮಾಡಿದ್ದರು. ಆದರೆ, ಮೊಬೈಲ್ ಸ್ವಿಚ್ಡ್ ಆಫ್ ಆಗಿತ್ತು. ಠಾಣೆಗೂ ಮಾಹಿತಿ ನೀಡಿದ್ದರು. ಠಾಣೆ ವ್ಯಾಪ್ತಿಯಲ್ಲಿ ಹುಡುಕಾಟ ನಡೆಸಿದಾಗ ಕಾಲೇಜೊಂದರ ಬಳಿಯ ಖುಲ್ಲಾ ಜಾಗದಲ್ಲಿ ನೇಣು ಬಿಗಿದ ಸ್ಥಿತಿಯಲ್ಲಿ ಮಂಜುನಾಥ್ ಮೃತದೇಹ ಪತ್ತೆಯಾಯಿತು. ಅದರ ಮರಣೋತ್ತರ ಪರೀಕ್ಷೆ ನಡೆಸಿ, ಮೃತದೇಹವನ್ನು ಸಂಬಂಧಿಕರಿಗೆ ಹಸ್ತಾಂತರಿಸಲಾಗಿದೆ’ ಎಂದೂ ಹೇಳಿವೆ.

ಪಾಲುದಾರಿಕೆಯಲ್ಲಿ ಮೊಬೈಲ್ ಮಳಿಗೆ ?: ‘ಮಂಜುನಾಥ್, ಪವನ್ ಸೇರಿ ನಾಲ್ವರು ಸ್ನೇಹಿತರು, ಮೊಬೈಲ್ ಮಳಿಗೆಯಲ್ಲಿ ಕೆಲಸ ಮಾಡುತ್ತಿದ್ದರು. ಮೊಬೈಲ್ ಮಾರಾಟ ಹಾಗೂ ದುರಸ್ತಿಯಲ್ಲಿ ಪರಿಣಿತರಾಗಿದ್ದರು. ಅದೇ ಕಾರಣಕ್ಕೆ ನಾಲ್ವರು ಸೇರಿಕೊಂಡು ಪಾಲುದಾರಿಕೆಯಲ್ಲಿ ಮೊಬೈಲ್ ಮಳಿಗೆಯೊಂದನ್ನು ಪ್ರಾರಂಭಿಸಿದ್ದರು. ಆದರೆ, ಮಳಿಗೆ ಪವನ್ ಹೆಸರಿನಲ್ಲಿತ್ತು’ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

‘ಲಾಕ್‌ಡೌನ್‌ನಿಂದಾಗಿ ಮಳಿಗೆಯಲ್ಲಿ ವ್ಯಾಪಾರ ಇರಲಿಲ್ಲ. ಲಕ್ಷಾಂತರ ರೂಪಾಯಿ ನಷ್ಟ ಉಂಟಾಗಿತ್ತು. ಹೀಗಾಗಿ, ಮಳಿಗೆ ಬಂದ್ ಮಾಡಲಾಗಿತ್ತು. ತಮ್ಮ ಪಾಲಿನ ಹಣ ನೀಡುವಂತೆ ಮಂಜುನಾಥ್ ಒತ್ತಾಯಿಸಿದ್ದರು. ಕಾಲಾವಕಾಶ ಪಡೆದಿದ್ದ ಪವನ್, ಹಣ ವಾಪಸು ನೀಡಿರಲಿಲ್ಲ. ಅದರಿಂದ ಮಂಜುನಾಥ್ ನೊಂದಿದ್ದರು ಎಂಬ ಮಾಹಿತಿ ಸದ್ಯದ ತನಿಖೆಯಿಂದ ಗೊತ್ತಾಗಿದೆ’ ಎಂದೂ ಮೂಲಗಳು ಹೇಳಿವೆ.

ಇಸ್ರೊ ವಾಣಿಜ್ಯ ಘಟಕದ ಮೊದಲ ಕಾರ್ಯಾಚರಣೆ

19 ಉಪಗ್ರಹಗಳು ಕಕ್ಷೆಗೆ

ಶ್ರೀಹರಿಕೋಟಾ (ಪಿಟಿಐ): ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆ (ಇಸ್ರೊ)ಯ ಪಿಎಸ್‌ಎಲ್‌ವಿ-ಸಿ51 ನೌಕೆಯು ಬ್ರೆಜಿಲ್‌ನ ಅಮೇಜಾನಿಯಾ-1 ಸೇರಿ 19 ಖಾಸಗಿ ಉಪಗ್ರಹಗಳನ್ನು ಭಾನುವಾರ ಯಶಸ್ವಿಯಾಗಿ ಕಕ್ಷೆಗೆ ಸೇರಿಸಿದೆ. ಇಸ್ರೊ ವಾಣಿಜ್ಯ ಘಟಕ ನ್ಯೂಸ್ಪೇಸ್ ಇಂಡಿಯಾ ಲಿಮಿಟೆಡ್‌ನ (ಎನ್‌ಎಸ್‌ಐಎಲ್) ಮೊದಲ ಕಾರ್ಯಾಚರಣೆ ಇದಾಗಿದೆ.

ಬ್ರೆಜಿಲ್‌ನ ಭೂಪರಿವೀಕ್ಷಣಾ ಉಪಗ್ರಹ ಅಮೇಜಾನಿಯಾ-1 ಉಪಗ್ರಹವು ಪಿಎಸ್‌ಎಲ್‌ವಿ-ಸಿ51ನಲ್ಲಿದ್ದ ಪ್ರಮುಖ ಉಪಗ್ರಹವಾಗಿತ್ತು. ಉಳಿದ 18 ಚಿಕ್ಕ ಉಪಗ್ರಹಗಳಾಗಿದ್ದವು. ಈ 18 ಉಪಗ್ರಹಗಳಲ್ಲಿ ಐದು ಉಪಗ್ರಹಗಳನ್ನು ವಿದ್ಯಾರ್ಥಿಗಳೇ ಸಂಪೂರ್ಣವಾಗಿ ಅಭಿವೃದ್ಧಿಪಡಿಸಿದ್ದಾರೆ ಎಂಬುದು ವಿಶೇಷ.

18 ಉಪಗ್ರಹಗಳಲ್ಲಿ ಇಸ್ರೊನ ಇನ್‌ಸ್ಪೇಸ್‌ಇ ಕಾರ್ಯಕ್ರಮದ 4 ಉಪಗ್ರಹಗಳು ಇದ್ದವು. ಉಳಿದ 14 ಉಪಗ್ರಹಗಳನ್ನು ಎನ್‌ಎಸ್‌ಐಎಲ್ ಉಡ್ಡಯನ ಮಾಡಿತು. ಇನ್‌ಸ್ಪೇಸ್‌ಇ ಉಡ್ಡಯನ ಮಾಡಿದ 4 ಉಪಗ್ರಹಗಳನ್ನು ದೇಶದ ವಿವಿಧ ಕಾಲೇಜು ಮತ್ತು ವಿಶ್ವವಿದ್ಯಾಲಯಗಳು ಅಭಿವೃದ್ಧಿಪಡಿಸಿದ್ದವು. ಇವುಗಳಲ್ಲಿ ಒಂದು ಉಪಗ್ರಹವನ್ನು ಸ್ಪೇಸ್ ಕಿಡ್ಸ್ ಇಂಡಿಯಾ ಎಂಬ ಸಂಸ್ಥೆಯು ಅಭಿವೃದ್ಧಿಪಡಿಸಿದೆ. ಈ ಉಪಗ್ರಹವು ಭಗವದ್ಗೀತೆಯ ಇ-ಕಾಪಿಯನ್ನು ಹೊಂದಿತ್ತು. ಮೆಮೊರಿ ಕಾರ್ಡ್‌ನಲ್ಲಿ ಈ ಇ-ಕಾಪಿಯನ್ನು ಇರಿಸಿ, ಕಕ್ಷೆಗೆ ಕಳುಹಿಸಲಾಗಿದೆ. ಇದೇ ಉಪಗ್ರಹವು ಪ್ರಧಾನಿ ನರೇಂದ್ರ ಮೋದಿ ಅವರ ಚಿತ್ರವನ್ನು ಬಾಹ್ಯಾಕಾಶಕ್ಕೆ ಒಯ್ದಿದೆ.

‘ಪ್ರಧಾನಿ ನರೇಂದ್ರ ಮೋದಿ ಅವರು ಆತ್ಮನಿರ್ಭರ ಭಾರತ ಕಾರ್ಯಕ್ರಮವನ್ನು ಆರಂಭಿಸಿದ್ದಾರೆ. ಅವರಿಗೆ ಅಭಿನಂದನೆ ಸಲ್ಲಿಸಲು ಅವರ ಚಿತ್ರವನ್ನು ಬಾಹ್ಯಾಕಾಶಕ್ಕೆ ಕಳುಹಿಸಲಾಗಿದೆ’ ಎಂದು ಸ್ಪೇಸ್ ಕಿಡ್ಸ್ ಇಂಡಿಯಾ ಹೇಳಿದೆ.

342 ವಿದೇಶಿ ಉಪಗ್ರಹಗಳು ಕಕ್ಷೆಗೆ: ಇಸ್ರೊ ಇದುವರೆಗೆ ವಿದೇಶಗಳ 342 ಉಪಗ್ರಹಗಳನ್ನು ಬಾಹ್ಯಾಕಾಶದ ಕಕ್ಷೆಗೆ ಯಶಸ್ವಿಯಾಗಿ ಸೇರಿಸಿದೆ. ಇವುಗಳಲ್ಲಿ ಖಾಸಗಿ ಕಂಪನಿಗಳ ಉಪಗ್ರಹಗಳು ಮತ್ತು ಸರ್ಕಾರಿ ಪ್ರಾಯೋಜಿತ ಉಪಗ್ರಹಗಳು ಸೇರಿವೆ. ಇಸ್ರೊ ಇದುವರೆಗೆ 34 ದೇಶಗಳ ಉಪಗ್ರಹಗಳನ್ನು ಕಕ್ಷೆಗೆ ಯಶಸ್ವಿಯಾಗಿ ಸೇರಿಸಿದೆ.

53ನೇ ಪಿಎಸ್‌ಎಲ್‌ವಿ: ಪಿಎಸ್‌ಎಲ್‌ವಿ (ಧ್ರುವೀಯ ಉಪಗ್ರಹ ಉಡ್ಡಯನ ವಾಹನ) ನೌಕೆಯ 53ನೇ ಕಾರ್ಯಾಚರಣೆ ಇದಾಗಿದೆ. ಪಿಎಸ್‌ಎಲ್‌ವಿ-ಸಿ51 ಸ್ಟ್ರಾಪ್‌ಆನ್ ಮೋಟರ್ ಇದ್ದ ಮೂರನೇ ಕಾರ್ಯಾಚರಣೆಯಾಗಿದೆ.



ನಭದತ್ತ ಜಿಗಿದ ಪಿಎಸ್‌ಎಲ್‌ವಿಸಿ51 ನೌಕೆ –ಪಿಟಿಐ ಚಿತ್ರ

- ಶ್ರೀಹರಿಕೋಟಾದ ಸತೀಶ್ ಧವನ್ ಬಾಹ್ಯಾಕಾಶ ಕೇಂದ್ರದಿಂದ ಉಡ್ಡಯನ
- ಬೆಳಿಗ್ಗೆ 10.24ಕ್ಕೆ ನಭದತ್ತ ಜಿಗಿದ ಪಿಎಸ್‌ಎಲ್‌ವಿ-ಸಿ51
- ಬೆಳಿಗ್ಗೆ 10.41ಕ್ಕೆ ಅಮೇಜಾನಿಯಾ-1 ಅನ್ನು ಕ್ಷಕೆಗೆ ಸೇರಿಸಿದ ಪಿಎಸ್ ಎಲ್‌ವಿ-ಸಿ51
- ನಂತರದ ಒಂದೂವರೆ ತಾಸಿನಲ್ಲಿ ಉಳಿದ 18 ಉಪಗ್ರಹಗಳನ್ನು ಯಶಸ್ವಿಯಾಗಿ ಕಕ್ಷೆಗೆ ಸೇರಿಸಲಾಯಿತು. ಇಡೀ ಕಾರ್ಯಾಚರಣೆ ಪೂರ್ವನಿಗದಿಯಂತೆ ನಡೆಯಿತು

ಇದು ಇಸ್ರೊ ಪಾಲಿಗೆ ಅತ್ಯಂತ ವಿಶೇಷ ದಿನ. ಅಮೇಜಾನಿಯ-1 ಉಪಗ್ರಹವನ್ನು ಯಶಸ್ವಿಯಾಗಿ ಕಕ್ಷೆಗೆ ಸೇರಿಸಿದ ಇಸ್ರೊ ತಂಡವನ್ನು ನಾನು ಅಭಿನಂದಿಸುತ್ತೇನೆ
ನರೇಂದ್ರ ಮೋದಿ, ಪ್ರಧಾನಿ

2021ರಲ್ಲಿ ಇಸ್ರೊ 14 ವಿವಿಧ ಕಾರ್ಯಾಚರಣೆಗಳನ್ನು ನಡೆಸಲಿದೆ. ಮಾನವಸಹಿತ ಗಗನಯಾನ 2022ರ ಪೂರ್ವಭಾವಿ ಮಾನವರಹಿತ ಕಾರ್ಯಾಚರಣೆ ಈ ವರ್ಷ ನಡೆಯಲಿದೆ
ಕೆ.ಶಿವನ್, ಇಸ್ರೊ ಅಧ್ಯಕ್ಷ

ಪಿಇಎಸ್ ವಿಶ್ವವಿದ್ಯಾಲಯ ವಿದ್ಯಾರ್ಥಿಗಳ ಸಾಧನೆ

ವಿದ್ಯಾರ್ಥಿಗಳ ಉಪಗ್ರಹ ‘ಸಿಂಧುನೇತ್ರ’ ನಭಕ್ಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಪಿಇಎಸ್ ವಿಶ್ವವಿದ್ಯಾಲಯದ ವಿದ್ಯಾರ್ಥಿಗಳು ಅಭಿವೃದ್ಧಿ ಪಡಿಸಿದ್ದ ಕಿರು ಉಪಗ್ರಹವನ್ನು (ಆರ್‌ಎಸ್‌ಎಟಿ) ಆಂಧ್ರಪ್ರದೇಶದಲ್ಲಿನ ಶ್ರೀಹರಿಕೋಟದ ಸತೀಶ್ ಧವನ್ ಬಾಹ್ಯಾಕಾಶ ಕೇಂದ್ರದಿಂದ (ಎಸ್‌ಎಚ್‌ಎಆರ್) ಭಾನುವಾರ ಮಧ್ಯಾಹ್ನ 1ಕ್ಕೆ ಯಶಸ್ವಿಯಾಗಿ ಉಡಾಯಿಸಲಾಯಿತು.

ಈ ಉಪಗ್ರಹಕ್ಕೆ ‘ಸಿಂಧುನೇತ್ರ’ ಎಂದು ಹೆಸರಿಡಲಾಗಿದ್ದು, ಪ್ರಾಥಮಿಕ ಹಂತದ ಕಾರ್ಯಾಚರಣೆಯನ್ನು ಯಶಸ್ವಿಯಾಗಿ ಪೂರೈಸಿದೆ ಎಂದು ಪಿಇಎಸ್ ತಂಡದಲ್ಲಿನ ವಿಜ್ಞಾನಿಯೊಬ್ಬರು ‘ಪ್ರಜಾವಾಣಿ’ಗೆ ತಿಳಿಸಿದರು.

‘ಹೈದರಾಬಾದ್‌ನಲ್ಲಿರುವ ಇಸ್ರೊದ ನಿಯಂತ್ರಣ ಕೇಂದ್ರವು ಈ ಉಪಗ್ರಹ ಕಾರ್ಯಾಚರಣೆಯ ಮೇಲೆ ನಿಗಾ ಇಟ್ಟಿದ್ದು, ಮಧ್ಯಾಹ್ನ 2 ಗಂಟೆಯ ವೇಳೆಗೆ ಆರ್‌ಎಸ್‌ಎಟಿಯಿಂದ ಸಂದೇಶಗಳು ಬಂದಿವೆ. ಉಪಗ್ರಹವು ಉತ್ತಮವಾಗಿ ಕಾರ್ಯನಿರ್ವಹಿಸುತ್ತಿದೆ. ಬ್ಯಾಟರಿ ಸಾಮರ್ಥ್ಯ ಉತ್ತಮವಾಗಿದೆ’ ಎಂದು ಅವರು ಹೇಳಿದರು.

‘ಉಪಗ್ರಹವು ನಿಗದಿತ ಕಕ್ಷೆ ಸೇರಿದ್ದರ ಬಗ್ಗೆ ಮಂಗಳವಾರ (ಮಾ.1) ಮಾಹಿತಿ ಗೊತ್ತಾಗುತ್ತದೆ. ಸಂಪೂರ್ಣ ಕಾರ್ಯಾಚರಣೆಯನ್ನೂ ಮಂಗಳವಾರದಿಂದಲೇ ಪ್ರಾರಂಭಿಸಲಿದೆ’ ಎಂದರು.

ಪಿಇಎಸ್‌ನ ಡಾ. ಸಾಂಬಶಿವ ರಾವ್ ಮತ್ತು ಡಾ. ನಾಗೇಂದ್ರ ಅವರ ಮಾರ್ಗದರ್ಶನದಲ್ಲಿ ವಿದ್ಯಾರ್ಥಿಗಳು ರಕ್ಷಣಾ ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆ (ಡಿಆರ್‌ಡಿಒ) ನೆರವಿನಿಂದ ಈ ಉಪಗ್ರಹವನ್ನು ಅಭಿವೃದ್ಧಿ ಪಡಿಸಿದ್ದಾರೆ. ಡಿಆರ್‌ಡಿಒ ಈ ಕಾರ್ಯಕ್ಕೆ ₹2.2 ಕೋಟಿ ಧನಸಹಾಯ ನೀಡಿದೆ.

ವಿದ್ಯಾರ್ಥಿಗಳಾದ ಎಂ. ಯೋಗೇಶ್, ಪರ್ವೇಜ್ ಮಹಮ್ಮದ್, ಕಾವ್ಯಶ್ರೀ, ಅಜಿತ್ ಕುಮಾರ್, ಮಹಾಂತೇಶ್, ಅಬ್ದುಲ್, ಅಭಿರಾಮಿ ಉಪಗ್ರಹ ಅಭಿವೃದ್ಧಿಗೆ ಕೈಜೋಡಿಸಿದ್ದಾರೆ.

‘ಸಿಂಧುನೇತ್ರ’ ಉಡಾವಣೆಯು ಯಶಸ್ವಿಯಾಗಿದ್ದು, ಪಿಇಎಸ್ ವಿಶ್ವವಿದ್ಯಾಲಯದ ಕುಲಪತಿ ಪ್ರೊ. ಎಂ.ಆರ್. ದೊರೆಸ್ವಾಮಿ ವಿದ್ಯಾರ್ಥಿಗಳನ್ನು ಅಭಿನಂದಿಸಿದ್ದಾರೆ. ವಿಜ್ಞಾನ ದಿನದಂದೇ ಕಾಲೇಜಿನ ಈ ತಂಡ ಇಂತಹ ವಿಶಿಷ್ಟ ಸಾಧನೆ ಮಾಡಿರುವುದು ಅಭಿನಂದನಾರ್ಹ ಎಂದು ಅವರು ಸಂತಸ ವ್ಯಕ್ತಪಡಿಸಿದ್ದಾರೆ.

‘ಸಿಂಧುನೇತ್ರ’ ವಿಶೇಷ

- 15 ಕೆಜಿ ತೂಕದ ಉಪಗ್ರಹ
- 45 ವಾಟ್ ಸೌರಶಕ್ತಿ ಉತ್ಪಾದನೆ ಸಾಮರ್ಥ್ಯ
- ಸೋಲಾರ್ ಫಲಕ, ಬ್ಯಾಟರಿ, ಆಂಟೇನಾ ಅಳವಡಿಕೆ
- ಉಪಗ್ರಹದ ಕಾರ್ಯಸಾಮರ್ಥ್ಯ ಅವಧಿ 2 ವರ್ಷ
- ಹಡಗುಗಳ ಚಲನೆಯ ಮೇಲೆ ನಿಗಾ ಇಡುವ ಸಾಮರ್ಥ್ಯ
- ನೌಕೆಗಳಲ್ಲಿರುವ ‘ಸ್ವಯಂ ಪತ್ತೆ ಸಾಧನ’ದ ತರಂಗ ಗ್ರಹಿಸಿ ಕೇಂದ್ರಕ್ಕೆ ಮಾಹಿತಿ ರವಾನೆ

ಗೊರವನಹಳ್ಳಿ ಲಕ್ಷ್ಮಿ ದೇಗುಲ ಮತ್ತೆ ಟ್ರಸ್ಟ್ ವಶಕ್ಕೆ

ಪ್ರಜಾವಾಣಿ ವಾರ್ತೆ

ಕೊರಟಗೆರೆ: ಟ್ರಸ್ಟ್‌ನಲ್ಲಿನ ವಿವಾದದಿಂದಾಗಿ ಆರು ವರ್ಷಗಳಿಂದ ಮಧುಗಿರಿ ಉಪವಿಭಾಗಾಧಿಕಾರಿ ಆಡಳಿತಕ್ಕೆ ಒಳಪಟ್ಟಿದ್ದ ತಾಲ್ಲೂಕಿನ ಪ್ರಸಿದ್ಧ ಗೊರವನಹಳ್ಳಿ ಮಹಾಲಕ್ಷ್ಮಿ ದೇವಾಲಯದ ಆಡಳಿತವನ್ನು ಹೈಕೋರ್ಟ್ ಆದೇಶದ ಮೇರೆಗೆ ಮತ್ತೆ ಮಹಾಲಕ್ಷ್ಮಿ ಚಾರಿಟಬಲ್ ಟ್ರಸ್ಟ್‌ಗೆ ಹಸ್ತಾಂತರಿಸಲಾಯಿತು.

2015ರ ಮಾರ್ಚ್‌ನಲ್ಲಿ ಮಹಾಲಕ್ಷ್ಮಿ ಚಾರಿಟಬಲ್ ಟ್ರಸ್ಟ್‌ನಲ್ಲಿ ಉಂಟಾದ ವಿವಾದದಿಂದಾಗಿ ತಹಶೀಲ್ದಾರ್ ವರದಿ ಆಧಾರದಲ್ಲಿ ದೇವಾಲಯದ ಆಡಳಿತವನ್ನು ಧಾರ್ಮಿಕ ದತ್ತಿ ಇಲಾಖೆಗೆ ವಹಿಸಲಾಗಿತ್ತು. ಮಧುಗಿರಿ ಉಪವಿಭಾಗಾಧಿಕಾರಿಯನ್ನು ಆಡಳಿತಾಧಿಕಾರಿಯನ್ನಾಗಿ ನೇಮಕ ಮಾಡಲಾಗಿತ್ತು.

ಈ ನಿರ್ಧಾರದ ವಿರುದ್ಧ ಟ್ರಸ್ಟ್ ಸದಸ್ಯರು ಹೈಕೋರ್ಟ್ ಮೊರೆ ಹೋಗಿದ್ದರು. ಸರ್ಕಾರದ ಧಾರ್ಮಿಕ ದತ್ತಿ ಇಲಾಖೆ ನಿಯಮಾನುಸಾರ ದೇವಾಲಯದ ಆಡಳಿತವನ್ನು ಕಳೆದ ಆರು ವರ್ಷಗಳಿಂದ ಮಧುಗಿರಿ ಉಪವಿಭಾಗಾಧಿಕಾರಿಗಳ ಆಡಳಿತದಲ್ಲೆ ನಡೆಸಲಾಗುತ್ತಿತ್ತು.

ಕಾಯ್ದೆಯ ಅನುಸಾರ ದೇವಸ್ಥಾನವನ್ನು ಘೋಷಿತ ಸಂಸ್ಥೆಯೆಂದು ಅಂತಿಮ ತೀರ್ಪು ನೀಡುವವರೆಗೆ ದೇವಾಲಯದ ಆಡಳಿತವನ್ನು ಟ್ರಸ್ಟ್ ವಹಿಸಿಕೊಳ್ಳಬಹುದು. ಆದರೆ, ಸಾರ್ವಜನಿಕರ ವಂತಿಗೆ ಸೇರಿದಂತೆ ಇತರ ಮಹತ್ವದ ತೀರ್ಮಾನ ತೆಗೆದುಕೊಳ್ಳದಂತೆ ಷರತ್ತು ವಿಧಿಸಿದೆ. ದೇವಾಲಯದ ದಾಖಲೆ ಪತ್ರಗಳನ್ನು ಪ್ರತಿ ತಿಂಗಳು ಜಿಲ್ಲಾಧಿಕಾರಿ ಗಮನಕ್ಕೆ ತರುವಂತೆ ಆದೇಶಿಸಿದೆ.

ಮಧುಗಿರಿ ಉಪವಿಭಾಗಾಧಿಕಾರಿ ಸೋಮಪ್ಪ ಕಡಕೊಳ ಅವರು ದೇವಾಲಯದ ಸಂಪೂರ್ಣ ಆಡಳಿತವನ್ನು ಟ್ರಸ್ಟ್ ಅಧ್ಯಕ್ಷ ಟಿ.ಆರ್. ಶ್ರೀರಂಗಯ್ಯ ಅವರಿಗೆ ಅಧಿಕೃತವಾಗಿ ಶನಿವಾರ ಸಂಜೆ ಹಸ್ತಾಂತರಿಸಿದರು.

ಈ ಸಂದರ್ಭದಲ್ಲಿ ತಹಶೀಲ್ದಾರ್ ಬಿ.ಎಂ.ಗೋವಿಂದರಾಜು, ಟ್ರಸ್ಟ್ ಕಾರ್ಯದರ್ಶಿ ಚಿಕ್ಕನರಸಪ್ಪ, ಧರ್ಮದರ್ಶಿಗಳಾದ ಟಿ.ಆರ್.ರಂಗಶಾಮಯ್ಯ, ರಾಮಕೃಷ್ಣಯ್ಯ, ನರಸರಾಜು, ರಂಗಸ್ವಾಮಯ್ಯ, ಉಪತಹಶೀಲ್ದಾರ್ ಮಧುಚಂದ್ರ ಇದ್ದರು.

ಭಕ್ತರಲ್ಲಿ ಸಂತಸ

ಮಹಾಲಕ್ಷ್ಮಿ ದೇವಾಲಯದ ಆಡಳಿತ ಸರ್ಕಾರಕ್ಕೆ ಒಳಪಟ್ಟ ನಂತರ ದೇವಾಲಯದಲ್ಲಿ ನಡೆಯುತ್ತಿದ್ದ ಎಲ್ಲ ಸಾರ್ವಜನಿಕ ಸೇವೆಗಳು ಸ್ಥಗಿತಗೊಂಡಿದ್ದವು. ದೇವಾಲಯದ ಆಡಳಿತ ಮತ್ತೆ ಟ್ರಸ್ಟ್‌ಗೆ ಬಂದಿದ್ದರಿಂದ ಎಲ್ಲ ಸಾರ್ವಜನಿಕ ಕಾರ್ಯಕ್ರಮಗಳು ಪುನಾರಂಭಗೊಳ್ಳುತ್ತವೆ ಎಂಬ ಭರವಸೆಯಿಂದಾಗಿ ಭಕ್ತರು ಸಂತಸಗೊಂಡಿದ್ದಾರೆ.

ತ್ಯಾಜ್ಯ ನೀರು ಸಂಸ್ಕರಣೆಯಲ್ಲಿ ಕರ್ನಾಟಕ ಹಿಂದೆ

ಶೇ 45ರಷ್ಟು ನೀರಷ್ಟೇ ಸಂಸ್ಕರಣೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಕರ್ನಾಟಕದ ವಿವಿಧ ಭಾಗಗಳಲ್ಲಿ ವ್ಯಾಪಕವಾಗಿ ನಗರೀಕರಣ ಪ್ರಕ್ರಿಯೆ ನಡೆಯುತ್ತಿರುವುರಿಂದ ಪ್ರತಿನಿತ್ಯ 335.65 ಕೋಟಿ ಲೀಟರ್‌ನಷ್ಟು ಕೊಳಚೆ ನೀರು ಉತ್ಪಾದನೆಯಾಗುತ್ತಿದ್ದು, ಅದರಲ್ಲಿ 151.35 ಕೋಟಿ ಲೀಟರ್‌ನಷ್ಟು (ಶೇ 45) ಮಾತ್ರ ಸಂಸ್ಕರಣೆಯಾಗುತ್ತಿದೆ.

‘224.2 ಕೋಟಿ ಲೀಟರ್ ಕೊಳಚೆ ನೀರನ್ನು ಸಂಸ್ಕರಿಸುವ ಉದ್ದೇಶದಿಂದ ರಾಜ್ಯದಲ್ಲಿ 125 ಸಂಸ್ಕರಣಾ ಘಟಕಗಳನ್ನು ಸ್ಥಾಪಿಸಲಾಗಿದ್ದರೂ, ಪ್ರತಿದಿನ 151.35 ಕೋಟಿ ಲೀಟರ್‌ನಷ್ಟು ನೀರು ಮಾತ್ರ ಸಂಸ್ಕರಣೆಯಾಗುತ್ತಿದೆ. ಉಳಿದ 184.3 ಕೋಟಿ ಲೀಟರ್ ನೀರು ಸಂಸ್ಕರಣೆಯಾಗುತ್ತಿಲ್ಲ’ ಎಂದು ‘ಕೇಂದ್ರ ಮೇಲ್ವಿಚಾರಣಾ ಸಮಿತಿ’ಯು ವರದಿ ನೀಡಿದೆ. ನದಿಗಳ ಮಾಲಿನ್ಯದ ಕುರಿತು ಅಧ್ಯಯನ ನಡೆಸಿ ಪರಿಹಾರ ಸೂಚಿಸಲು ರಾಷ್ಟ್ರೀಯ ಹಸಿರು ಪೀಠವು ಈ ಸಮಿತಿಯನ್ನು ಸ್ಥಾಪಿಸಿದೆ.

ಬೆಂಗಳೂರಿನಲ್ಲಿ ಪ್ರತಿನಿತ್ಯ ಒಳಚರಂಡಿಯ 42.75 ಕೋಟಿ ಲೀಟರ್ ನೀರನ್ನು ಸಂಸ್ಕರಿಸಿ ಮರುಬಳಕೆ ಮಾಡಲಾಗುತ್ತಿದೆ. ಉಳಿದ ನಗರಗಳಲ್ಲಿ 10.65 ಕೋಟಿ ಲೀಟರ್ ನೀರು ಮರುಬಳಕೆಯಾಗುತ್ತಿದೆ. ಸಂಸ್ಕರಿತ ನೀರನ್ನು ಕೆರೆ ತುಂಬಿಸಲು, ಕೈಗಾರಿಕಾ ಅಗತ್ಯಗಳು, ತೋಟಗಾರಿಕೆ ವಿಭಾಗ ಹಾಗೂ ಉದ್ಯಾನಗಳಲ್ಲಿ ಬಳಸಲಾಗುತ್ತಿದೆ ಎಂದು ವರದಿಯಲ್ಲಿ ತಿಳಿಸಲಾಗಿದೆ.

ರಾಜ್ಯದಲ್ಲಿ 3,503 ಕೈಗಾರಿಕೆಗಳಿಂದ 133.9 ಕೋಟಿ ಲೀಟರ್‌ನಷ್ಟು ನೀರು ಕಲುಷಿತವಾಗುತ್ತಿದೆ. ಇವುಗಳಲ್ಲಿ 3,289 ಕೈಗಾರಿಕೆಗಳು ಮಲಿನ ನೀರು ಸಂಸ್ಕರಣಾ ಘಟಕಗಳನ್ನು ಸ್ಥಾಪಿಸಿವೆ. ಇವುಗಳ ಸಂಸ್ಕರಣಾ ಸಾಮರ್ಥ್ಯ 453.2 ಕೋಟಿ ಲೀಟರ್‌ನಷ್ಟಿದೆ.

ರಾಜ್ಯದ 17 ನದಿ ಪ್ರದೇಶಗಳನ್ನು ‘ಕಲುಷಿತ’ ಎಂದು ಪರಿಗಣಿಸಲಾಗಿದೆ. ಇವುಗಳಲ್ಲಿ ತುಂಗಭದ್ರಾ ನದಿಯನ್ನು ಪುನರುಜ್ಜೀವನಕ್ಕೆ ಮಾದರಿಯಾಗಿ ಆಯ್ಕೆ ಮಾಡಿಕೊಳ್ಳಲಾಗಿದೆ.

ಕಲುಷಿತ ನೀರು ಸಂಸ್ಕರಣಾ ಘಟಕಗಳ ಗರಿಷ್ಠ ಸಾಮರ್ಥ್ಯ ಬಳಕೆಯಲ್ಲಿ ಆಂಧ್ರಪ್ರದೇಶ ಹಾಗೂ ದೆಹಲಿ (ಶೇ 90) ಮೊದಲ ಸ್ಥಾನದಲ್ಲಿವೆ. ನಂತರದ ಸ್ಥಾನದಲ್ಲಿ ಕ್ರಮವಾಗಿ ತೆಲಂಗಾಣ (ಶೇ 82) ಹಾಗೂ ಪಂಜಾಬ್ (ಶೇ 80) ಇವೆ.

ಈಗ ಇರುವ ತ್ಯಾಜ್ಯ ನೀರು ಸಂಸ್ಕರಣಾ ಘಟಕಗಳು ಪರಿಸರ ನಿಯಮಗಳಿಗೆ ಅನುಗುಣವಾಗಿ ಕಾರ್ಯನಿರ್ವಹಿಸುತ್ತಿವೆ ಎಂಬುದನ್ನು ಖಾತರಿಪಡಿಸುವುದರ ಜತೆಗೆ, ಅವುಗಳ ಗರಿಷ್ಠ ಸಾಮರ್ಥ್ಯವನ್ನು ಬಳಸುವ ಕಡೆಗೆ ಗಮನ ಹರಿಸಬೇಕು. ಘಟಕಗಳ ಗರಿಷ್ಠ ಸಾಮರ್ಥ್ಯದ ಬಳಕೆ ಏಕೆ ಆಗುತ್ತಿಲ್ಲ ಅಥವಾ ಏಕೆ ನಿಷ್ಕ್ರಿಯವಾಗಿವೆ ಎಂಬುದನ್ನು ಸುಮಾರು ಮೂರು ತಿಂಗಳ ಕಾಲಮಿತಿಯೊಳಗೆ ತಿಳಿದುಕೊಳ್ಳಬೇಕು. ಇದರಿಂದ ಘಟಕಗಳನ್ನು ಮೇಲ್ದರ್ಜೆಗೆ ಏರಿಸುವ ಯೋಜನೆ ರೂಪಿಸಲು ಸಹಾಯಕವಾಗುತ್ತದೆ’ ಎಂದು ವರದಿಯಲ್ಲಿ ಸೂಚಿಸಲಾಗಿದೆ.

ಮುಖ್ಯಾಂಶಗಳು

- ಎನ್‌ಜಿಟಿ ಸ್ಥಾಪಿಸಿದ ಕೇಂದ್ರ ಮೇಲ್ವಿಚಾರಣಾ ಸಮಿತಿಯ ವರದಿ
- ಸಾಮರ್ಥ್ಯ ಬಳಕೆಯಲ್ಲಿ ಆಂಧ್ರ, ದೆಹಲಿ ಮುಂದೆ
- ರಾಜ್ಯದಲ್ಲಿ 184.3 ಕೋಟಿ ಲೀಟರ್ ನೀರು ಸಂಸ್ಕರಣೆಯಾಗುತ್ತಿಲ್ಲ

‘ವಿಷ್ಣು ಹರಿಯ ಫಲಕ, ಸ್ತಂಭ ರಾಮಮಂದಿರಕ್ಕೆ ಪ್ರಮುಖ ಸಾಕ್ಷ್ಯ’

ಪ್ರಜಾವಾಣಿ ವಾರ್ತೆ

ಉಡುಪಿ: ಅಯೋಧ್ಯೆಯಲ್ಲಿ ಉತ್ಖನನ ವೇಳೆ ದೊರೆತ ವಿಷ್ಣು ಹರಿ ಶಿಲಾಫಲಕ ಹಾಗೂ ಮಸೀದಿಯ ಪಶ್ಚಿಮ ಭಾಗದಲ್ಲಿ ಸಿಕ್ಕ 12 ಸ್ತಂಭಗಳು ಅಲ್ಲಿ ರಾಮಮಂದಿರ ಇತ್ತು ಎಂಬುದಕ್ಕೆ ಪ್ರಮುಖ ಸಾಕ್ಷ್ಯಗಳಾಗಿದ್ದವು ಎಂದು ಪುರಾತತ್ವ ಇಲಾಖೆ ನಿವೃತ್ತ ಪ್ರಾದೇಶಿಕ ನಿರ್ದೇಶಕ ಕೆ.ಕೆ. ಮೊಹಮ್ಮದ್ ಹೇಳಿದರು.

ಇಲ್ಲಿ ಭಾನುವಾರ ಪಾದೂರು ಗುರುರಾಜ ಭಟ್ ಸ್ಮಾರಕ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಉಪನ್ಯಾಸ ನೀಡಿದ ಅವರು, ಪುರಾತತ್ವ ಇಲಾಖೆ ನಿರ್ದೇಶಕ ಡಾ.ಬಿ.ಬಿ.ಲಾಲ್ ನೇತೃತ್ವದಲ್ಲಿ ಉತ್ಖನನ ನಡೆದಾಗ ಅಷ್ಟಮಂಗಲ ಚಿಹ್ನೆ, ಮಕರ, ಕೂರ್ಮ ಚಿಹ್ನೆಗಳು ಸಿಕ್ಕಿದ್ದವು ಎಂದರು.

50 ಸ್ತಂಭ, 7 ಪಕ್ಕಾಸು, 263 ಪ್ರತಿಮೆಗಳ ಅವಶೇಷಗಳೂ ಉತ್ಖನನದಲ್ಲಿ ಸಿಕ್ಕಿದ್ದವು. ಈ ಪುರಾವೆಗಳ ಆಧಾರದಲ್ಲಿ ವಿಷ್ಣು ದೇವಾಲಯವನ್ನು ಕೆಡವಿ ಬಾಬ್ರಿ ಮಸೀದಿಯನ್ನು ನಿರ್ಮಿಸಲಾಗಿತ್ತು ಎಂಬ ನಿರ್ಣಯಕ್ಕೆ ಬರಲಾಗಿತ್ತು ಎಂದರು.

ಉತ್ತರ ಭಾರತದಲ್ಲಿ 27 ಮಂದಿರಗಳನ್ನು ಕೆಡವಿ ಅವುಗಳ ಅವಶೇಷಗಳಿಂದ ಕುತುಬ್ ಮಿನಾರ್ ಬಳಿಯ ಕ್ವಾಯತುಲ್ ಮಸೀದಿಯನ್ನು ನಿರ್ಮಿಸಲಾಗಿದೆ ಎಂಬ ವಿವರವೂ ಈಚೆಗೆ ಬಯಲಾಗಿದೆ ಎಂದು ತಿಳಿಸಿದರು.

ಕಾಂಗ್ರೆಸ್ ಅವಧಿಯೇ ಪರವಾಗಿಲ್ಲ: ಬಿಜೆಪಿ ಸರ್ಕಾರ ಅಧಿಕಾರಕ್ಕೆ ಬಂದ ಬಳಿಕ ಭಾರತೀಯ ಪುರಾತತ್ವ ಇಲಾಖೆಯ ಕಾರ್ಯವೈಖರಿ ಬದಲಾಗಬಹುದು ಎಂಬ ನಿರೀಕ್ಷೆಗಳಿದ್ದವು. ಆದರೆ, ನಿರೀಕ್ಷೆಗಳು ಹುಸಿಯಾಗಿವೆ. ಕಾಂಗ್ರೆಸ್ ಆಡಳಿತಾವಧಿಗೆ ಹೋಲಿಸಿದರೆ ಬಿಜೆಪಿ ಅವಧಿಯಲ್ಲಿ ಪುರಾತತ್ವ ಇಲಾಖೆ ಬಹಳ ನಿಧಾನಗತಿಯಲ್ಲಿ ಕೆಲಸ ಮಾಡುತ್ತಿದೆ. ಬಿಜೆಪಿ ಸಂಸ್ಕೃತಿ ಬಗ್ಗೆ ಮಾತನಾಡುತ್ತದೆ. ಅದಕ್ಕೆ ಬದ್ಧವಾಗಿ ಪುರಾತತ್ವ ಇಲಾಖೆಗೆ ಕಾಯಕಲ್ಪ ನೀಡುತ್ತಿಲ್ಲ ಎಂದು ಕೆ.ಕೆ.ಮೊಹಮ್ಮದ್ ಬೇಸರ ವ್ಯಕ್ತಪಡಿಸಿದರು.



ಉಡುಪಿಯಲ್ಲಿ ಭಾನುವಾರ ಪುರಾತತ್ವ ಇಲಾಖೆ ನಿವೃತ್ತ ಪ್ರಾದೇಶಿಕ ನಿರ್ದೇಶಕ ಕೆ.ಕೆ.ಮೊಹಮ್ಮದ್ ಅವರಿಗೆ ‘ಪಾದೂರು ಗುರುರಾಜ ಭಟ್ ಸ್ಮಾರಕ ಪ್ರಶಸ್ತಿ’ ಪ್ರದಾನ ಮಾಡಲಾಯಿತು.

‘ವಿವಾದಿತ ರಾಮಮಂದಿರ’ ಪದ ಬಳಸಬೇಡಿ

ಉಡುಪಿ: ಅಯೋಧ್ಯೆಯ ರಾಮಮಂದಿರ ಪ್ರಕರಣದಲ್ಲಿ ಸುಪ್ರೀಂ ಕೋರ್ಟ್ ಅಂತಿಮ ತೀರ್ಪು ನೀಡಿದ್ದರೂ, ‘ವಿವಾದಿತ ರಾಮಮಂದಿರ ನಿರ್ಮಾಣಕ್ಕೆ ದೇಣಿಗೆ ನೀಡುವುದಿಲ್ಲ’ ಎಂದು ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಅವರು ಹೇಳಿಕೆ ನೀಡಿರುವುದು ನಾಚಿಕೆಗೇಡು ಎಂದು ಪಲಿಮಾರು ಮಠದ ವಿದ್ಯಾಧೀಶ ತೀರ್ಥ ಸ್ವಾಮೀಜಿ ಅಸಮಾಧಾನ ವ್ಯಕ್ತಪಡಿಸಿದರು.

ನಿವೃತ್ತ ಡಿಜಿ–ಐಜಿಪಿ ಇ–ಮೇಲ್ ಹ್ಯಾಕ್

ಬೆಂಗಳೂರು: ರಾಜ್ಯ ಪೊಲೀಸ್ ಮಹಾನಿರ್ದೇಶಕರಾಗಿ (ಡಿಜಿ–ಐಜಿಪಿ) ಸೇವೆ ಸಲ್ಲಿಸಿ ನಿವೃತ್ತರಾದ ಶಂಕರ್ ಬಿದರಿ ಅವರ ಇ–ಮೇಲ್ ಹ್ಯಾಕ್ ಮಾಡಲಾಗಿದ್ದು, ಈ ಸಂಬಂಧ ಆಗ್ನೇಯ ವಿಭಾಗದ ಸೈಬರ್ ಕ್ರೈಂ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

‘ಹ್ಯಾಕ್ ಬಗ್ಗೆ ಶಂಕರ್ ಬಿದರಿ ಅವರೇ ದೂರು ನೀಡಿದ್ದಾರೆ. ಅಪರಿಚಿತರ ವಿರುದ್ಧ ಎಫ್‌ಐಆರ್ ದಾಖಲಿಸಿಕೊಳ್ಳಲಾಗಿದೆ’ ಎಂದು ಮೂಲಗಳು ಹೇಳಿವೆ.

‘ಇ–ಮೇಲ್ ಹ್ಯಾಕ್ ಮಾಡಿರುವ ವಂಚಕರು, ತುರ್ತಾಗಿ ಹಣ ನೀಡುವಂತೆ ಸ್ನೇಹಿತರನ್ನು ಕೋರಿ ಐಎಫ್‌ಎಸ್‌ಸಿ ಹಾಗೂ ಪಂಜಾಬ್ ನ್ಯಾಷನಲ್ ಬ್ಯಾಂಕ್‌ಗಳ ಖಾತೆ ಸಂಖ್ಯೆಗಳನ್ನು ನೀಡಿದ್ದಾರೆ’ ಎಂದು ಶಂಕರ್ ಬಿದರಿ ದೂರಿನಲ್ಲಿ ಹೇಳಿದ್ದಾರೆ.

‘ಸಂದೇಶ ನಂಬಿದ್ದ ಸ್ನೇಹಿತರೊಬ್ಬರು, ಆರೋಪಿಗಳು ನೀಡಿದ್ದ ಖಾತೆಗೆ ₹ 25 ಸಾವಿರ ಜಮೆ ಮಾಡಿ ವಂಚನೆಗೀಡಾಗಿದ್ದಾರೆ. ಇ–ಮೇಲ್ ಹ್ಯಾಕ್ ಮಾಡಿರುವ ಆರೋಪಿಗಳನ್ನು ಪತ್ತೆ ಮಾಡಿ, ಕಾನೂನು ಕ್ರಮ ಕೈಗೊಳ್ಳಿ’ ಎಂದೂ ಅವರು ತಿಳಿಸಿದ್ದಾರೆ.

ಮಂಗಳೂರು ವಿಮಾನ ನಿಲ್ದಾಣದ ಮೂಲಕ ಕಳ್ಳ ಸಾಗಾಣಿಕೆ

4 ವರ್ಷಗಳಲ್ಲಿ 95.12 ಕೆ.ಜಿ ಚಿನ್ನ ಜಪ್ತಿ

ಪ್ರಜಾವಾಣಿ ವಾರ್ತೆ

ಮಂಗಳೂರು: ಮಂಗಳೂರು ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ 2017ರಿಂದ ಈ ತನಕ ಕಳ್ಳ ಸಾಗಾಣಿಕೆಗೆ ಯತ್ನ ಪ್ರಕರಣಗಳಲ್ಲಿ ಒಟ್ಟು 95.12 ಕೆ.ಜಿ ಚಿನ್ನ ಜಪ್ತಿ ಮಾಡಲಾಗಿದೆ.

ಗಲ್ಫ್ ರಾಷ್ಟ್ರಗಳಿಂದ ಬಂದ ಪ್ರಯಾಣಿಕರಲ್ಲಿ ಈ ಚಿನ್ನವು ದೊರೆತಿದೆ ಎಂದು ಮಾಹಿತಿ ಹಕ್ಕು ಅರ್ಜಿ ಅಡಿಯಲ್ಲಿ ವಿಮಾನ ನಿಲ್ದಾಣದಲ್ಲಿನ ಕಸ್ಟಮ್ಸ್ ಸಹಾಯಕ ಆಯುಕ್ತರು ಮಾಹಿತಿ ನೀಡಿದ್ದಾರೆ.

ಕಸ್ಟಮ್ಸ್ ಕಾಯ್ದೆ 1962ರ ಅನ್ವಯ ಸೂಕ್ತ ಕ್ರಮಗಳನ್ನು ಕೈಗೊಂಡ ಬಳಿಕ ಈ ಚಿನ್ನವನ್ನು ಕಾಲಕಾಲಕ್ಕೆ ವಿಲೇವಾರಿ ಮಾಡಲಾಗುತ್ತಿದೆ.

ಚಾಕೊಲೇಟ್, ಚೂಯಿಂಗ್ ಗಮ್, ಬುರ್ಕಾ ಕಸೂತಿ, ಫೇಸ್ ಕ್ರೀಂ, ಮೇಕಪ್ ಕಿಟ್ಸ್, ಎಲೆಕ್ಟ್ರಾನಿಕ್ಸ್ ಸಾಧನಗಳು, ಪೆನ್, ನ್ಯಾಪ್‌ಕಿನ್, ಟ್ರಾಲಿ ಚಕ್ರಗಳ ಒಳಗೆ ಇರಿಸಿರುವುದಲ್ಲದೇ ಕೆಲವೊಂದು ಪ್ರಕರಣದಲ್ಲಿ ಗುದದ್ವಾರದ ಬಳಿ ಮಾತ್ರೆರೂಪದಲ್ಲಿ ಚಿನ್ನವನ್ನು ಇರಿಸಿದ ಪ್ರಕರಣವನ್ನೂ ವಿಮಾನ ನಿಲ್ದಾಣದ ಸಿಬ್ಬಂದಿ ಪತ್ತೆ ಮಾಡಿದ್ದರು.

ವಶಪಡಿಸಿಕೊಂಡ ಚಿನ್ನ

ವರ್ಷ	ಚಿನ್ನದ ತೂಕ(ಕೆ.ಜಿಗಳಲ್ಲಿ)	ಮೌಲ್ಯ(₹ಕೋಟಿಗಳಲ್ಲಿ)
2017-18	19.45	5.84
2018-19	41.58	13.02
2019-20	22.37	8.16
2020-21 (ಜನವರಿ ತನಕ)	11.72	5.96

ಹುಡುಗನ ಸಂಬಂಧಿಕರ ಮನೆ ಮೇಲೆ ದಾಳಿ

ಹರಪನಹಳ್ಳಿ: ಅನ್ಯಜಾತಿಯ ಪ್ರೇಮಿಗಳು ಗ್ರಾಮದಿಂದ ಓಡಿಹೋಗಿದ್ದಕ್ಕೆ ಆಕ್ರೋಶಗೊಂಡ ಹುಡುಗಿ ಕಡೆಯವರು ಹುಡುಗನ ಸಂಬಂಧಿಕರ ಮನೆಗಳಿಗೆ ನುಗ್ಗಿ ಹಲ್ಲೆ ಮಾಡಿ, ಮನೆಯಲ್ಲಿದ್ದ ನಗದು, ಚಿನ್ನಾಭರಣ ದೋಚಿದ್ದಾರೆ. ಇದರಿಂದ ಭಯಗೊಂಡ ಹುಡುಗನ ಪೋಷಕರು ಹಾಗೂ ಸಂಬಂಧಿಕರು ಗ್ರಾಮ ತೊರೆದಿದ್ದಾರೆ.

ತಾಲ್ಲೂಕಿನ ಕನ್ನನಾಯಕನಹಳ್ಳಿಯ ದುರುಗೇಶ್ ಮತ್ತು ಕವಿತಾ ಪರಸ್ಪರ ಪ್ರೀತಿಸಿದ್ದು, ಫೆ.26ರಂದು ಪರಾರಿಯಾಗಿದ್ದರು. ಇದರಿಂದ ಸಿಟ್ಟಿಗೆದ್ದ ಕವಿತಾ ಮನೆಯವರು ಹುಡುಗನ ಜಾತಿಗೆ ಸೇರಿದ ಐದು ಕುಟುಂಬದವರ ಮೇಲೆ ಹಲ್ಲೆ ನಡೆಸಿದ್ದಾರೆ. ಹುಡುಗನ ಕಡೆಯ ನಾಲ್ವರು ಗಾಯಗೊಂಡಿದ್ದಾರೆ. ಜೀವ ರಕ್ಷಣೆ ಕೋರಿ ದುರುಗೇಶ್ ಕಡೆಯವರು ಪೊಲೀಸರ ಮೊರೆ ಹೋಗಿದ್ದಾರೆ. 13 ಜನರ ವಿರುದ್ಧ ಶನಿವಾರ ಪ್ರಕರಣ ದಾಖಲಾಗಿದೆ.

‘ಹುಡುಗಿ ಕಡೆಯವರು 5 ಮನೆಗಳಿಗೆ ನುಗ್ಗಿ ಮನೆ ಬಾಗಿಲು, ಕಿಟಕಿ ಮುರಿದ್ದಾರೆ. ಮೆಕ್ಕೆಜೋಳ ಮಾರಿ ಮನೆಯಲ್ಲಿ ತಂದಿಟ್ಟಿದ್ದ ₹ 2.50 ಲಕ್ಷ ನಗದು, 6 ಗ್ರಾಂ ಬಂಗಾರದ ಆಭರಣ, 16 ಕ್ವಿಂಟಲ್ ಜೋಳ, ಕುರಿ, ಎಮ್ಮೆಗಳನ್ನು ದೋಚಿ ಪರಾರಿಯಾಗಿದ್ದಾರೆ’ ಎಂದು ದುರುಗೇಶ್ ಕುಟುಂಬ ದೂರು ನೀಡಿದೆ.

‘15ಕ್ಕೂ ಅಧಿಕ ಜನರು ನುಗ್ಗಿ, ಮನೆಯಲ್ಲಿದ್ದ ವಸ್ತುಗಳನ್ನು ಧ್ವಂಸ ಮಾಡಿದೆ. ಮನೆಯವರು ಜೀವ ರಕ್ಷಣೆಗೆ ಗ್ರಾಮವನ್ನು ತೊರೆದಿದ್ದಾರೆ’ ಎಂದು ಗ್ರಾಮದ ಮುಖಂಡರಾದ ನೀಲಗುಂದ ಮಹಾಂತೇಶ್, ಬೆಂಡಿಗೇರೆ ಗುರುಸಿದ್ದಪ್ಪ, ದುರುಗೇಶ್ ಮಜ್ಜಿಗೇರಿ, ಅಲಮರಸೀಕೆರೆ ಹನುಮಂತಪ್ಪ ಹಾಲೇಶ್ ತಿಳಿಸಿದರು.



ಜಯದೇವಶ್ರೀ ಪ್ರಶಸ್ತಿ ಪ್ರದಾನ

ದಾವಣಗೆರೆಯ ಶಿವಯೋಗಾಶ್ರಮದಲ್ಲಿ ಭಾನುವಾರ ನಡೆದ ಜಯದೇವ ಮುರುಘರಾಜೇಂದ್ರ ಸ್ವಾಮೀಜಿ ಅವರ 64ನೇ ಸ್ಮರಣೋತ್ಸವದಲ್ಲಿ (ಕುಳಿತವರು ಎಡದಿಂದ) ಕರ್ನಾಟಕ ರಾಜ್ಯ ಕರಕುಶಲ ನಿಗಮದ ವ್ಯವಸ್ಥಾಪಕ ನಿರ್ದೇಶಕಿ ರೂಪಾ ಡಿ. ಮೌದ್ಗಿಲ್ (ಶೂನ್ಯಪೀಠ ಅಕ್ಕನಾಗಮ್ಮ ಪ್ರಶಸ್ತಿ), ಚಿತ್ರದುರ್ಗದ ಸಾಹಿತಿ ಪ್ರೊ.ಎಚ್.ಲಿಂಗಪ್ಪ (ಶೂನ್ಯಪೀಠ ಚನ್ನಬಸವ ಪ್ರಶಸ್ತಿ), ಬೆಂಗಳೂರಿನ ಸಾಹಿತಿ ಕೆ.ಮರುಳಸಿದ್ದಪ್ಪ (ಶೂನ್ಯಪೀಠ ಜಯದೇವಶ್ರೀ ಪ್ರಶಸ್ತಿ) ಮತ್ತು ರಾಯಚೂರಿನ ಪತ್ರಕರ್ತ ಬಸವರಾಜಸ್ವಾಮಿ (ಶೂನ್ಯಪೀಠ ಅಲ್ಲಮ ಪ್ರಶಸ್ತಿ) ಅವರಿಗೆ ಚಿತ್ರದುರ್ಗದ ಶಿವಮೂರ್ತಿ ಮುರುಘಾ ಶರಣರು ಪ್ರಶಸ್ತಿ ನೀಡಿ ಗೌರವಿಸಿದರು. ವಿರಕ್ತಮಠದ ಬಸವಪ್ರಭು ಸ್ವಾಮೀಜಿ, ಕರ್ನಾಟಕ ಜಾನಪದ ಅಕಾಡೆಮಿ ಸದಸ್ಯೆ ರುದ್ರಾಕ್ಷಿಬಾಯಿ ಅವರೂ ಇದ್ದಾರೆ

ಪ್ರಜಾವಾಣಿ ಚಿತ್ರ: ಸತೀಶ ಬಡಿಗೇರ್

ರಾಜ್ಯಮಟ್ಟದ ಕುಂಚಿಟಿಗರ ಸಮಾವೇಶದಲ್ಲಿ ಶಾಂತವೀರ ಸ್ವಾಮೀಜಿ ಪ್ರತಿಪಾದನೆ

ಜಾತಿಗಿಂತ ಆರ್ಥಿಕ ಆಧಾರದಲ್ಲಿ ಮೀಸಲಾತಿ

ಪ್ರಜಾವಾಣಿ ವಾರ್ತೆ



ಹೊಸದುರ್ಗದಲ್ಲಿ ಭಾನುವಾರ ನಡೆದ 31ನೇ ವಿಜಯರಾಯ ಸಂಗಮೇಶ್ವರ ಜಯಂತಿ ಹಾಗೂ ಕುಂಚಿಟಿಗರ ಸಮಾವೇಶದಲ್ಲಿ ಕುಂಚಿಟಿಗರ ಕುಲತಿಲಕ ಡಿ.ಬನುಮನಯ್ಯ ಪುತ್ಥಳಿಯನ್ನು ಶಾಂತವೀರ ಸ್ವಾಮೀಜಿ ಲೋಕಾರ್ಪಣೆ ಮಾಡಿದರು.

ಹೊಸದುರ್ಗ: 'ಬಡವರಿಗೆ, ನಿರ್ಗತಿಕರಿಗೆ, ಶೋಷಿತರಿಗೆ ಸಿಗಬೇಕಿದ್ದ ಮೀಸಲಾತಿ ಉಳ್ಳವರಿಗೆ ಸಿಗುವಂತಹ ಪ್ರಯತ್ನಗಳಾದರೆ ಇಲ್ಲದವರು ಯಾರನ್ನು ಮೀಸಲಾತಿ ಕೇಳಬೇಕು? ಶೋಷಿತರು, ನಿರ್ಲಕ್ಷ್ಯಕ್ಕೆ ಒಳಗಾದ-ವರನ್ನು ಮೇಲಕ್ಕೆತ್ತಲು ಸಂವಿಧಾನ ಮೀಸಲಾತಿ ಕಲ್ಪಿಸಿತ್ತು. ಪ್ರಸ್ತುತ ಆರ್ಥಿಕ ಸ್ಥಿತಿ ಆಧಾರದಲ್ಲಿ ಮೀಸಲಾತಿ ಒದಗಿಸಬೇಕೇ ಹೊರತು, ಜಾತಿ ಆಧಾರದಲ್ಲಿ ಅಲ್ಲ. ಒಕ್ಕಲಿಗರು, ಬ್ರಾಹ್ಮಣರು, ಲಿಂಗಾಯತರಲ್ಲಿ ಯಾರು ಬಡವರಿದ್ದಾರೆ ಅವರಿಗೆ ಮೀಸಲಾತಿ ಕೊಡುವುದು ಸಂವಿಧಾನದ ಆಶಯ' ಎಂದು ಹೊಸದುರ್ಗ ಕುಂಚಿಟಿಗ ಮಹಾಸಂಸ್ಥಾನದ ಶಾಂತವೀರ ಸ್ವಾಮೀಜಿ ಪ್ರತಿಪಾದಿಸಿದರು.

ಪಟ್ಟಣದ ಕುಂಚಗಿರಿ ಕುಂಚಿಟಿಗ ಮಹಾಸಂಸ್ಥಾನ ಮಠದಲ್ಲಿ ಭಾನುವಾರ ನಡೆದ 31ನೇ ವಿಜಯರಾಯ ಸಂಗಮೇಶ್ವರ ಜಯಂತಿ ಹಾಗೂ ರಾಜ್ಯ ಮಟ್ಟದ ಕುಂಚಿಟಿಗರ ಸಮಾವೇಶದ ಸಾನ್ನಿಧ್ಯ ವಹಿಸಿ ಮಾತನಾಡಿದರು.

'ಹಲವು ಜಾತಿಯವರು ಮೀಸಲಾತಿ ಕೇಳುವಂತಹ ಸಂದರ್ಭದಲ್ಲಿ ನಾವು ಮೀಸಲಾತಿ ಕೇಳಲು ಹೋದರೆ 10ರಲ್ಲಿ 11 ಆಗುತ್ತೇವೆ ಅಷ್ಟೆ. ಕುಂಚಿಟಿಗ ಸಮುದಾಯದ ಕುಲಶಾಸ್ತ್ರೀಯ ಅಧ್ಯಯನ ಮುಗಿದಿದ್ದು, ಸರ್ಕಾರದ ಬಳಿ ವರದಿ ಇದೆ. ವರದಿಯಲ್ಲಿ ಬುಡಕಟ್ಟು ಸಂಸ್ಕೃತಿ ಹೊಂದಿರುವ ಕುಂಚಿಟಿಗರನ್ನು ಪ್ರವರ್ಗ-1ಕ್ಕೆ ಸೇರಿಸಬೇಕು ಎಂದು ಶಿಫಾರಸು ಮಾಡಲಾಗಿದೆ. ಇದನ್ನು ಅನುಷ್ಠಾನಗೊಳಿಸುವ ಕೆಲಸವನ್ನು ನಮ್ಮ ಮುಖಂಡರು ಅತ್ಯಂತ ಸೂಕ್ಷ್ಮ ಹಾಗೂ ಸಂವೇದನಾಶೀಲ-ತೆಯಿಂದ ಮಾಡಬೇಕು. ಅದನ್ನು ಬಿಟ್ಟು ಬೀದಿಯಲ್ಲಿ ಧರಣಿ, ಸತ್ಯಾಗ್ರಹ ಮಾಡಲು ಹೋದರೆ ನ್ಯಾಯ ಸಿಗಲು ಸಾಧ್ಯವಿಲ್ಲ' ಎಂದು ಅಭಿಪ್ರಾಯ-ಪಟ್ಟರು.

'ಮೀಸಲಾತಿ ಹೆಚ್ಚಳಕ್ಕೆ ಆಗ್ರಹಿಸಿ ಎರಡು ವರ್ಷಗಳಿಂದ ನಾಯಕ ಸಮಾಜ ಹೋರಾಟ ನಡೆಸುತ್ತಿದೆ. ಕುರುಬ ಸಮಾಜದವರು ಕಾಗಿನೆಲೆ ಸ್ವಾಮೀಜಿ ನೇತೃತ್ವದಲ್ಲಿ 300 ಕಿ.ಮೀ ಪಾದಯಾತ್ರೆ ನಡೆಸಿದರು. ಈಗ ಪಂಚಮಸಾಲಿ ಸಮುದಾಯ ಕೂಡ ಹೋರಾಟ ನಡೆಸುತ್ತಿದೆ. ಜಯಂತಿಗಳು, ನಿಗಮ-ಮಂಡಳಿಗಳು ಜಾತಿಯ ಆಧಾರದಲ್ಲಿ ಆಗಿವೆಯೇ ಹೊರತು, ನೀತಿಯ ಮೇಲೆ ಆಗಿಲ್ಲ. ಸಂದಿಗ್ಧ ಸ್ಥಿತಿಯಲ್ಲಿ ನಾವಿದ್ದೇವೆ. ಪ್ರಜಾಪ್ರಭು-ತ್ವವು ಜಾತಿಯ ಸಂಕೋಲೆ, ಪ್ರಭಾವಿ ರಾಜಕೀಯ ಮುಖಂಡರ ಕಪಿ-ಮುಷ್ಟಿಯಲ್ಲಿ ಸಿಲುಕಿದೆ. ಹಾವೇರಿ ಜಿಲ್ಲೆಯಲ್ಲಿ ಕುಂಚಿಟಿಗರು ಪ್ರವ-ರ್ಗ-1ರಲ್ಲಿ ಇರುವಂತೆ, ರಾಜ್ಯದ ಇನ್ನಿತರ ಭಾಗದಲ್ಲಿ ನೆಲೆಸಿರುವ ನಮ್ಮ ಜನರನ್ನು ಸಹ ತುರ್ತಾಗಿ ಪ್ರವರ್ಗ-1ಕ್ಕೆ ಸೇರಿಸಬೇಕು' ಎಂದು ಸರ್ಕಾರವನ್ನು ಒತ್ತಾಯಿಸಿದರು.

ಸುದ್ದಿ 2 ನಿಮಿಷ

ಸವನಿಧಿ ಆಯಿತಲೇ... ಪರಾಕ್



ಗುತ್ತಲ (ಹಾವೇರಿ): ಇಲ್ಲಿಗೆ ಸಮಿಪದ ಹಾವನೂರ ಗ್ರಾಮದಲ್ಲಿ ಭಾನುವಾರ ನಡೆದ ಮೈಲಾರಲಿಂಗೇಶ್ವರ ಕಾರ್ಣಿಕೋತ್ಸವದಲ್ಲಿ 'ಸವನಿಧಿ ಆಯಿತಲೇ...ಪರಾಕ್' ಎಂದು ಗೋರವಯ್ಯ ನುಡಿದರು.

ಸವನಿಧಿ ಆಯಿತಲೇ.. ಎಂದರೆ ಸುಖ-ದು:ಖ, ಮಳೆ, ಬೆಳೆ ಎಲ್ಲವೂ ಸಮನಾಗಿ ಸಾಗುತ್ತವೆ ಎಂಬ ಅರ್ಥ ಕಲ್ಪಿಸುತ್ತದೆ ಎಂದು ಗ್ರಾಮದ ಹಿರಿಯರು ತಿಳಿಸಿದರು.

ವಿಜಯನಗರ ಜಿಲ್ಲೆಯ ಹೂವಿನಹಡಗಲಿ ತಾಲ್ಲೂಕಿನ ಮೈಲಾರ ಗ್ರಾಮದಲ್ಲಿ ಕೊರೊನಾ ಹಿನ್ನಲೆಯಲ್ಲಿ ಕಾರ್ಣಿಕ ಕೇಳಲಿಕ್ಕೆ ಭಕ್ತರಿಗೆ ಅವಕಾಶ ಇಲ್ಲದ ಕಾರಣ ಹಾವನೂರ ಗ್ರಾಮದ ಕಾರ್ಣಿಕ ಕೇಳಲಿಕ್ಕೆ ಹಾವನೂರ ಸೇರಿದಂತೆ ಸುತ್ತಮುತ್ತಲಿನ ಗ್ರಾಮಗಳ ಭಕ್ತರು ಬಾರಿ ಸಂಖ್ಯೆಯಲ್ಲಿ ಸೇರಿದ್ದರು.

ಹಿರಿಯೂರು ಆದಿಜಾಂಬವ ಮಠದ ಷಡಕ್ಷರಿ ಮುನಿಸ್ವಾಮಿ ದೇಶಿಕೇಂದ್ರ ಶ್ರೀಗಳ ಹೇಳಿಕೆ

'ಅಧಿಕಾರ ಕೊಟ್ಟವರ ಜೊತೆಗೆ ಮಾದಿಗ ಸಮಾಜ'

ಪ್ರಜಾವಾಣಿ ವಾರ್ತೆ



ಷಡಕ್ಷರಿ ಮುನಿಸ್ವಾಮಿಶ್ರೀ

ಕಲಬುರ್ಗಿ: 'ಯಾರು ನಮ್ಮನ್ನು ಅಪ್ಪಿಕೊಂಡು ಅಧಿಕಾರ ನೀಡುತ್ತಾರೋ, ನಾವು ಅವರ ಪರ ನಿಲ್ಲುತ್ತೇವೆ. ಯಾರು ನಮ್ಮನ್ನು ದೂರ ಸರಿಸುತ್ತಾರೋ, ನಾವೂ ಅವರನ್ನು ದೂರ ಸರಿಸುತ್ತೇವೆ' ಎಂದು ಹಿರಿಯೂರು ಆದಿಜಾಂಬವ ಮಠದ ಷಡಕ್ಷರಿ ಮುನಿಸ್ವಾಮಿ ದೇಶಿಕೇಂದ್ರ ಶ್ರೀಗಳು ತಿಳಿಸಿದರು.

ದಲಿತ ಮಾದಿಗ ಸಮನ್ವಯ ಸಮಿತಿಯು ಭಾನುವಾರ ಆಯೋಜಿಸಿದ್ದ ಪರಿಶಿಷ್ಟ ಸಮುದಾಯದ ನೂತನ ಗ್ರಾ.ಪಂ. ಅಧ್ಯಕ್ಷರು, ಉಪಾಧ್ಯಕ್ಷರು ಹಾಗೂ ಸದಸ್ಯರ ಸನ್ಮಾನ ಸಮಾರಂಭದಲ್ಲಿ ಮಾತನಾಡಿದ ಅವರು, 'ಅಪಮಾನ, ಹಸಿವು ಎಲ್ಲವನ್ನೂ ಮಾದಿಗ ಸಮಾಜ ಶತಮಾನಗಳಿಂದ ಅನುಭವಿಸುತ್ತಿ-ದೆ. ಈಗಲಾದರೂ ಅಧಿಕಾರ ನಮ್ಮ ಸಮುದಾಯಕ್ಕೆ ಸಿಗಬೇಕು. ಆ ಅಧಿಕಾರ ಕೊಡುವ ಮುಖಂಡರ ಬೆನ್ನಿಗೆ ಸಮುದಾಯ ನಿಲ್ಲಲಿದೆ' ಎಂದರು.

'ಎ.ಜೆ. ಸದಾಶಿವ ಆಯೋಗದ ವರದಿ ಸಲ್ಲಿಕೆಯಾಗಿ 8 ವರ್ಷಗಳಾದರೂ ಅದನ್ನು ಅಂಗೀಕರಿಸುವ ಬಗ್ಗೆ ಯಾವ ಸರ್ಕಾರವೂ ಮಾತನಾಡುತ್ತಿಲ್ಲ. ಬಹುಶಃ ಈ ವರದಿ ಕಸದ ಬುಟ್ಟಿ ಸೇರಬಹುದು' ಎಂದು ಆತಂಕ ವ್ಯಕ್ತಪಡಿಸಿದರು.

ಮಾಜಿ ಸಚಿವ ಕೆ.ಬಿ. ಶಾಣಪ್ಪ ಮಾತನಾಡಿ, 'ಶತಮಾನಗಳಿಂದ ಊರನ್ನು ಸ್ವಚ್ಛಗೊಳಿಸಿರುವ ಮಾದಿಗರು ಗೌಡರಿಗೆ ಚಪ್ಪಲಿ, ರೈತರಿಗೆ ಬಾರುಕೋಲು ಮಾಡಿ-ಕೊಟ್ಟಿದ್ದಾರೆ. ಆದರೂ ರಾಜಕೀಯವಾಗಿ ನಮ್ಮ ಸಮುದಾಯಗಳನ್ನು ತುಳಿಯ-ಲಾಗುತ್ತದೆ. ಗೌಡರ ಮನೆಯ ಚಾಕರಿ ಮಾಡಿಕೊಂಡವರನ್ನು ಬಿಟ್ಟು ಬಂಜಾರ ಸಮುದಾಯದವರನ್ನು ಗೆಲ್ಲಿಸಿಕೊಂಡು ಬರಲಾಗುತ್ತಿದೆ' ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಕಪ್ಪತ್ತಗುಡ್ಡಕ್ಕೆ ಬೆಂಕಿ

ಡಂಬಳ: ಹೋಬಳಿಯ ಡೋಣಿ ಗ್ರಾಮದ ಬಳಿಯ ಕಪ್ಪತಗುಡ್ಡದಲ್ಲಿ ಭಾನುವಾರ ಬೆಂಕಿ ಕಾಣಿಸಿಕೊಂಡು, ಸುಮಾರು 50 ಹೆಕ್ಟೇರ್ ಅರಣ್ಯ ನಾಶವಾಗಿರುವ ಸಾಧ್ಯತೆ ಇದೆ.

ಬೆಂಕಿಯು ಮಧ್ಯಾಹ್ನ 1 ಗಂಟೆ ಸುಮಾರಿಗೆ ಕಾಣಿಸಿಕೊಂಡಿತು. ಇದನ್ನು ನಂದಿಸಲು ಸ್ಥಳೀಯರ ಜೊತೆ ಅರಣ್ಯ ಇಲಾಖೆಯ 80ಕ್ಕೂ ಹೆಚ್ಚು ಸಿಬ್ಬಂದಿ ಹರಸಾಹಸ ಪಟ್ಟರು. ಸುಮಾರು 7-8 ತಾಸು ಕಾರ್ಯಾಚರಣೆ ನಡೆಸಿ, ಬೆಂಕಿ ನಂದಿಸುವಲ್ಲಿ ಯಶಸ್ವಿಯಾದರು.

'ಅರ್ಚಕ ವೃತ್ತಿಯನ್ನೂ ಕಿತ್ತುಕೊಳ್ಳುತ್ತಿದ್ದಾರೆ'

ಮೈಸೂರು: 'ಅರ್ಚಕ ವೃತ್ತಿಯನ್ನೂ ಬ್ರಾಹ್ಮಣರಿಂದ ಕಿತ್ತುಕೊಳ್ಳುವ ಪ್ರಯತ್ನ ನಡೆಯುತ್ತಿದೆ' ಎಂದು ಪೇಜಾವರ ಮಠದ ವಿಶ್ವಪ್ರಸನ್ನ ತೀರ್ಥ ಸ್ವಾಮೀಜಿ ಬೇಸರ ವ್ಯಕ್ತಪಡಿಸಿದರು.

ಜಿಲ್ಲಾ ಮತ್ತು ನಗರ ಬ್ರಾಹ್ಮಣ ಸಂಘದ ವತಿಯಿಂದ ಇಲ್ಲಿ ಭಾನುವಾರ ಏರ್ಪಡಿಸಲಾಗಿದ್ದ 'ವಿಪ್ರ ಸಮ್ಮಿಲನ' ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

'ರೈಲ್ವೆ ಪ್ಲಾಟ್‌ಫಾರಂನಲ್ಲಿರುವ ಹಮಾಲಿಗಳಿಗೆ ಇರುವ ಕಾನೂನು ರಕ್ಷಣೆಯೂ ನಮಗೆ ಇಲ್ಲವಾಗಿದೆ. ಅರ್ಚಕ ವೃತ್ತಿಯನ್ನೂ ಸರ್ಕಾರ ಕಿತ್ತುಕೊಳ್ಳುತ್ತದೆ ಎಂದರೆ ಹೇಗೆ? ಈ ಸಮಸ್ಯೆಗೆ ಪರಿಹಾರ ಕಂಡುಕೊಳ್ಳಲು ಸಂಘಟನೆಯನ್ನು ಕಟ್ಟಿಕೊಳ್ಳಬೇಕು' ಎಂದರು.

ರಾಮಮಂದಿರ ನಿರ್ಮಾಣಕ್ಕೆ ₹ 1,500 ಕೋಟಿ ವೆಚ್ಚವಾಗುತ್ತದೆ ಎಂದು ಅಂದಾಜು ಮಾಡಲಾಗಿತ್ತು. ₹ 2,100 ಕೋಟಿ ಸಂಗ್ರಹವಾಗಿದೆ. ರಾಮಮಂದಿರ ಕಟ್ಟುವುದು ದೊಡ್ಡದಲ್ಲ. ಆದರೆ, ಅದನ್ನು ಉಳಿಸಿಕೊಳ್ಳುವುದು ದೊಡ್ಡದು'ಎಂದರು.

ಅವಧೂತ ದತ್ತಪೀಠದ ಗಣಪತಿ ಸಚ್ಚಿದಾನಂದ ಆಶ್ರಮದ ಕಿರಿಯ ಸ್ವಾಮೀಜಿ ದತ್ತ ವಿಜಯಾನಂದ ಮಾತನಾಡಿದರು.

'ಸ್ವಾಮೀಜಿಗಳೆಂದರೆ ಹೇಸಿಗೆಯಾಗುವ ಸ್ಥಿತಿಗೆ ಬಂದಿದ್ದೇವೆ'

ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿ: 'ರಾಜ್ಯದ ಇತ್ತೀಚಿನ ಕೆಲವು ಘಟನೆಗಳಿಂದಾಗಿ ಸ್ವಾಮೀಜಿಗಳೆಂದರೆ ಹೇಸಿಗೆ ಅನ್ನಿಸುವ ಸ್ಥಿತಿಗೆ ಬಂದಿದ್ದೇವೆ' ಎಂದು ಕನೇರಿ ಮಠದ ಅದೃಶ್ಯ ಕಾಡಸಿ-ದ್ಧೇಶ್ವರ ಸ್ವಾಮೀಜಿ ಹೇಳಿದರು.

ಇಲ್ಲಿನ ಬೈರಿದೇವರಕೊಪ್ಪದ ಶಿವಾ-ನಂದಮಠದಲ್ಲಿ ಭಾನುವಾರ ಗದುಗಿನ ಶಿವಾನಂದ ಮಠದ ಆಶ್ರಯದಲ್ಲಿ ನಡೆದ ಸಹೃದಯಿ ಮಠಾಧಿಪತಿಗಳ ಒಕ್ಕೂಟದ ಭಕ್ತ ಸಮಾವೇಶದ ಸಮಾರೋಪ ಭಾಷಣ ಮಾಡಿದ ಅವರು, 'ಯಾವ ಜಾತಿ ಗೋಡೆಯನ್ನು ಕೆಡವಿ ಹಾಕಬೇಕೆಂದು ಬಸವಣ್ಣನವರು ಪ್ರಯತ್ನ ಪಟ್ಟಿದ್ದರೋ ಅದೆಲ್ಲವನ್ನೂ ಉಪೇಕ್ಷಿಸಿ ನಮ್ಮ ನಮ್ಮದೇ ಜಾತಿ, ಸಂಘಟನೆ ಕಟ್ಟಿಕೊಂಡು, ಹೋರಾಟಕ್ಕಿಳಿದು ಸಂಕುಚಿತರಾಗುತ್ತಿದ್ದೇವೆ' ಎಂದು ವಿಷಾದಿಸಿದರು.

'ಸ್ವಾಮೀಜಿಗಳಿಗೆ ಮಠದಲ್ಲಿಯೇ ಮಾಡಲು ಸಾಕಷ್ಟು ಕೆಲಸಗಳಿವೆ. ಮತ್ಯಾಕೆ ಬೀದಿಗೆ ಬರುತ್ತಾರೋ?' ಎಂದು ಲೇವಡಿ ಮಾಡಿದ ಅವರು, 'ಸಮಾಜ ಒಗ್ಗೂಡಿಸುವ ಮಠಾಧಿಪತಿಗಳು ಅದನ್ನು ವಿಭಜಿಸಬಾರದು. ಈ ನಿಟ್ಟಿನಲ್ಲಿ ಆತ್ಮಾವಲೋಕನ ಮಾಡಿಕೊಳ್ಳಬೇಕು' ಎಂದರು.

'ರಾಜ್ಯದಲ್ಲಿ ಒಂದು ಕಾಲದಲ್ಲಿ ಸುಮಾರು 18 ಸಾವಿರ ಮಠಗಳಿದ್ದವು, ಈಗ ಅವುಗಳ ಸಂಖ್ಯೆ 1,800 ಕ್ಕಿಳಿದಿವೆ. ಮಠಗಳಿಗೆಲ್ಲ ನೂರಾರು ಎಕರೆ ಭೂಮಿ ಇತ್ತು, ಅದನ್ನೆಲ್ಲ ಮಠಾಧೀಶರೇ ನುಂಗಿದರು. ಅದಕ್ಕೆ ಕಾರಣ ಭಕ್ತರು ಅವರನ್ನು ಪ್ರಶ್ನೆ ಮಾಡದೇ ಇರುವುದು' ಎಂದು ಎಚ್ಚರಿಸಿದರು.

'ಹಲವೆಡೆ ಮಠಾಧೀಶರು ಮಠದ ಆಸ್ತಿ ತಮ್ಮದೇ, ತಾವೇ ಮಾಲೀಕರು ಎಂದುಕೊಂಡಿದ್ದಾರೆ. ಆದರೆ ಅದು ಭಕ್ತರದ್ದು, ಸಮಾಜದ್ದು. ಕೆಲವು ಮಠಾಧೀಶರು ಪ್ರತಿ ವರ್ಷ ₹ 2ರಿಂದ 3 ಕೋಟಿ ಸಾಲ ಮಾಡುತ್ತಾರೆ; ಅದನ್ನು ಭಕ್ತರು ತೀರಿಸಬೇಕು. ಇದೆಂಥ ಹುಚ್ಚು? ಹಲವಾರು ಮಠಗಳಲ್ಲಿ ಮಠಾಧೀಶರು ತಮ್ಮದೇ ಬಂಧು, ಬಾಂಧವರ ಆಶ್ರಯ ತಾಣ ಮಾಡಿಕೊಂಡಿದ್ದಾರೆ. ಹೀಗಾಗಿ ಮಠಗಳ ಆಸ್ತಿ, ಹಣ ಉಳಿಸಲು ಭಕ್ತರು ಎಚ್ಚರದಿಂದ ಇರಬೇಕು' ಎಂದರು.

'ಯಾವುದೇ ಮಠಗಳಿಗೆ ಉತ್ತರಾಧಿಕಾರಿ ನೇಮಿಸುವಾಗ ವಿದ್ಯೆ, ಯೋಗ್ಯತೆಯೇ ಮಾನದಂಡವಾಗ-ಬೇಕು; ಜಾತಿಯಲ್ಲ. ಬಸವಣ್ಣನವರ ಆಶಯದಂತೆ ಮಹಿಳೆಯರಿಗೂ ಅವಕಾಶ ಮಾಡಿಕೊಡಬೇಕು. ಆ ನಿಟ್ಟಿನಲ್ಲಿ ರಾಜ್ಯದ ಐದು ಜಿಲ್ಲೆಗಳಲ್ಲಿ ಮಹಿಳಾ ಜಗದ್ಗುರು ಪೀಠ ಸ್ಥಾಪನೆ ಮಾಡಲು ಮಠಾಧಿಪತಿಗಳ ಒಕ್ಕೂಟ ತೀರ್ಮಾನಿಸಿದೆ' ಎಂದು ಸ್ವಾಮೀಜಿ ತಿಳಿಸಿದರು.

'ಶರಣರ ನಾಡಿನಲ್ಲಿ ಮೀಸಲಾತಿ ಹೋರಾಟ; ದುರ್ದೈವ ಸಂಗತಿ'

ಹುನಗುಂದ (ಬಾಗಲಕೋಟೆ): 'ಕಾಯಕ ಮತ್ತು ದಾಸೋಹ ತತ್ವವನ್ನು ಬೋಧಿಸಿದ ಶರಣರ ನಾಡಿನಲ್ಲಿ ಮೀಸಲಾತಿ ಹೋರಾಟ ನಡೆಯುತ್ತಿರುವುದು ದುರ್ದೈವದ ಸಂಗತಿ' ಎಂದು ವಿಜಯಪುರದ ವನಶ್ರೀ ಗುರುಪೀಠದ ಡಾ.ಜಯ ಬಸವಕುಮಾರ ಸ್ವಾಮೀಜಿ ಹೇಳಿದರು.

ಪಟ್ಟಣದ ಅಮರಾವತಿ ರಸ್ತೆಯಲ್ಲಿ ಗಾಣಿಗ ಸಮುದಾಯ ಭವನದಲ್ಲಿ ತಾಲ್ಲೂಕು ಗಾಣಿಗ ಸಮಾಜದಿಂದ ನಡೆದ ಪ್ರತಿಭಾ ಪುರಸ್ಕಾರ ಮತ್ತು ಸನ್ಮಾನ ಸಮಾರಂಭದಲ್ಲಿ ಮಾತನಾಡಿದರು. 'ಶರಣರ ನಾಡಿನಲ್ಲಿ ಅನುಭವ ಮಂಟಪ ನಿರ್ಮಿಸಿ, ಜಾತಿ ಭೇದ ಹೋಗಲಾಡಿಸಿ ಸಮಾನತೆಯ ತತ್ವ ಪ್ರತಿಪಾದಿಸಿದ ನೆಲದಲ್ಲಿ ಜಾತಿ ಹೆಸರಿನಲ್ಲಿ ಹೋರಾಟ, ಸಮಾವೇಶ, ಧರಣಿಗಳು ನಡೆಯುತ್ತಿವೆ. ಇದರಿಂದ ಸಮಾಜದಲ್ಲಿ ಗೊಂದಲ ಉಂಟಾಗಿದೆ' ಎಂದರು.

'ಸಂವಿಧಾನದ ಆಶಯದಂತೆ ತುಳಿತಕ್ಕೊಳಗಾದ ಸಮುದಾಯಗಳ ಸಾಮಾಜಿಕ ಸ್ಥಿತಿಗತಿಗೆ ಅನುಗುಣವಾಗಿ ಆಯೋಗಗಳು ಮೀಸಲಾತಿಗೆ ಶಿಫಾರಸು ಮಾಡಬೇಕು' ಎಂದರು.

430 ಶಿಕ್ಷಕರ ನೇಮಕ: ಒಪ್ಪಿಗೆ

ಬೆಂಗಳೂರು: 2015ರ ಡಿಸೆಂಬರ್ 31ಕ್ಕೆ ನಿವೃತ್ತಿ, ಮರಣ, ರಾಜೀನಾಮೆ ಮತ್ತಿತರ ಕಾರಣಗಳಿಂದ ಖಾಲಿಯಾಗಿದ್ದ ಅನುದಾನಿತ ಪದವಿಪೂರ್ವ ಕಾಲೇಜುಗಳ 173 ಉಪನ್ಯಾಸಕರು ಮತ್ತು ಅನುದಾನಿತ ಪ್ರಾಥಮಿಕ ಹಾಗೂ ಪ್ರೌಢ ಶಾಲೆಗಳ 257 ಶಿಕ್ಷಕರ ಹುದ್ದೆಗಳ ಭರ್ತಿಗೆ ಆರ್ಥಿಕ ಇಲಾಖೆ ಒಪ್ಪಿಗೆ ನೀಡಿದೆ.

ಅನುದಾನಿತ ಪದವಿಪೂರ್ವ ಕಾಲೇಜುಗಳ 173 ಉಪನ್ಯಾಸಕರ ಹುದ್ದೆ ಭರ್ತಿಯ ಪ್ರಸ್ತಾವವನ್ನು ಹಿಂದೆಯೇ ಅನುಮೋದಿಸಲಾ-ಗಿತ್ತು. ನೇಮಕಾತಿ ಪ್ರಕ್ರಿಯೆಯೂ ಆರಂಭವಾಗಿತ್ತು. ಆದರೆ, ಇಲಾಖೆಯ ಹಂತದಲ್ಲೇ ಪ್ರಕ್ರಿಯೆ ಸ್ಥಗಿತಗೊಂಡಿತ್ತು.

ಅನುದಾನಿತ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳಲ್ಲಿ ಖಾಲಿಯಾಗಿದ್ದ 257 ಶಿಕ್ಷಕರ ಹುದ್ದೆಗಳ ಭರ್ತಿಗೂ ಹಿಂದೆಯೇ ಪ್ರಸ್ತಾವ ಸಲ್ಲಿಸಲಾಗಿತ್ತು. ಆದರೆ, ಹಣಕಾಸು ಇಲಾಖೆ ಒಪ್ಪಿಗೆ ನೀಡಿರಲಿಲ್ಲ. ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವ ಎಸ್. ಸುರೇಶ್ ಕುಮಾರ್ ಅವರು ಪುನಃ ಈ ಎರಡೂ ಪ್ರಕರಣ-ಗಳಲ್ಲಿ ನೇಮಕಾತಿಗೆ ಅನುಮತಿ ಕೋರಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರಿಗೆ ಪ್ರಸ್ತಾವ ಸಲ್ಲಿಸಿದ್ದರು. ಮುಖ್ಯ-ಮಂತ್ರಿಯವರು ಅದನ್ನು ಅನುಮೋ-ದಿಸಿದ್ದರು. 173 ಉಪನ್ಯಾಸಕರು ಮತ್ತು 257 ಶಿಕ್ಷಕರ ಹುದ್ದೆಗಳ ಭರ್ತಿಗೆ ಫೆಬ್ರುವರಿ 23ರಂದು ಒಪ್ಪಿಗೆ ನೀಡಿರುವ ಆರ್ಥಿಕ ಇಲಾಖೆ, 2021-22ನೇ ಶೈಕ್ಷಣಿಕ ವರ್ಷ ಆರಂಭವಾದ ಬಳಿಕ (ಜೂನ್ ಅಥವಾ ಜುಲೈ) ನೇಮಕಾತಿ ಆದೇಶ ನೀಡುವಂತೆ ಷರತ್ತು ವಿಧಿಸಿದೆ.

ಗೌಡ ಲಿಂಗಾಯತರನ್ನೂ 2ಎಗೆ ಸೇರಿಸಲು ಹೋರಾಟ

ಚಾಮರಾಜನಗರ: ಹಳೆಯ ಮೈಸೂರು ಪ್ರಾಂತ್ಯದಲ್ಲಿರುವ ಗೌಡ ಲಿಂಗಾಯತ, ಒಕ್ಕಲಿಗ ಲಿಂಗಾಯತ ಸಮುದಾಯ-ಗಳನ್ನು ಪ್ರವರ್ಗ 2ಎ ಸೇರಿಸಬೇಕು ಎಂದು ಒತ್ತಾಯಿಸಿ ಬೆಂಗಳೂರು ಚಲೊ ಆಯೋಜಿಸಲು ಮುಖಂಡರು ನಿರ್ಧರಿಸಿದ್ದಾರೆ.

ಬಿಜೆಪಿ ಮುಖಂಡ ಮಲ್ಲೇಶ್ ಅವರ ನೇತೃತ್ವದಲ್ಲಿ ಸಂತೇಮರಹಳ್ಳಿ-ಯಲ್ಲಿ ಭಾನುವಾರ ಸಭೆ ನಡೆಸಿರುವ ಮುಖಂಡರು, ಪಂಚಮಸಾಲಿ ಸಮು-ದಾಯವದವರು ನಡೆಸುತ್ತಿರುವ ಹೋರಾಟಕ್ಕೆ ಸಂಪೂರ್ಣ ಬೆಂಬಲ ಘೋಷಿಸಿದ್ದಾರೆ.

ಹಳೆ ಮೈಸೂರು ಪ್ರಾಂತ್ಯದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಗೌಡ ಲಿಂಗಾಯತ, ಒಕ್ಕಲಿಗ ಲಿಂಗಾಯತ ಸಮುದಾಯದವರು ಇದ್ದಾರೆ. ಬೆಂಗಳೂರು ಚಲೊದ ನೇತೃತ್ವ ವಹಿಸಲು ಸುತ್ತೂರು ಶ್ರೀಗಳು ಹಾಗೂ ಸಿದ್ಧಗಂಗಾ-ಮಠದ ಶ್ರೀಗಳಿಗೆ ಮನವಿ ಮಾಡಲೂ ಮುಖಂಡರು ತೀರ್ಮಾನಿಸಿದ್ದಾರೆ.

ನಾಳೆ ಸಾರಿಗೆ ನೌಕರರ ಸಮಾವೇಶ

ಬೆಂಗಳೂರು: 'ಸಾರಿಗೆ ನೌಕರರ ಬೇಡಿಕೆಗಳ ಈಡೇರಿಕೆಗೆ ಮುಂದಿನ ನಿರ್ಧಾರಗ-ಳನ್ನು ಕೈಗೊಳ್ಳಲು ಮಾ.2ರಂದು ಬೆಳಿಗ್ಗೆ 11 ಗಂಟೆಗೆ ಸ್ವಾತಂತ್ರ್ಯ ಉದ್ಯಾನದಲ್ಲಿ ಸಮಾವೇಶ ಹಮ್ಮಿಕೊಳ್ಳಲಾಗಿದೆ' ಎಂದು ರಾಜ್ಯ ರಸ್ತೆ ಸಾರಿಗೆ ನೌಕರರ ಕೂಟದ ರಾಜ್ಯ ಘಟಕದ ಅಧ್ಯಕ್ಷ ಆರ್. ಚಂದ್ರಶೇಖರ್ ತಿಳಿಸಿದರು.

'ಕರ್ತವ್ಯ ಸ್ಥಗಿತಗೊಳಿಸಿ, ಸಾರಿಗೆ ನೌಕರರೆಲ್ಲ ಕಳೆದ ಡಿಸೆಂಬರ್‌ನಲ್ಲಿ ಬೃಹತ್ ಮುಷ್ಕರ ಹಾಗೂ ಪ್ರತಿಭಟನೆ ನಡೆಸಿದೆವು. ಇದಕ್ಕೆ ಮಣಿದ ಸರ್ಕಾರ, ಸಾರಿಗೆ ನೌಕರರ ಒಂಬತ್ತು ಬೇಡಿಕೆಗಳನ್ನು ಈಡೇರಿಸುವುದಾಗಿ ಆಶ್ವಾಸನೆ ನೀಡಿತ್ತು. ಸಾರಿಗೆ ಸಚಿವ ಲಕ್ಷ್ಮಣ ಸವದಿ ಅವರು ಕೆಲವು ಬೇಡಿಕೆಗಳನ್ನು ಈಡೇರಿಸಿರುವುದಾಗಿ ಹೇಳಿದ್ದಾರೆ. ಆದರೆ, ಅವು ಪತ್ರಗಳಲ್ಲೇ ಉಳಿದಿದ್ದು ಸಾರಿಗೆ ನೌಕರರ ಬಳಿಗೆ ತಲುಪಿಲ್ಲ' ಎಂದು ದೂರಿದರು.

'ಸರ್ಕಾರಕ್ಕೆ ನೀಡಿದ್ದ ಗಡುವು ಮುಗಿಯುತ್ತಾ ಬಂದಿದೆ. ಸಾರಿಗೆ ನೌಕರರ ಬೇಡಿಕೆ ಈಡೇರಿಸುವಲ್ಲಿ ಸರ್ಕಾರ ಮತ್ತೆ ನಿರ್ಲಕ್ಷ್ಯ ತೋರುತ್ತಿದೆ. ಇದಕ್ಕಾಗಿ ಸಾರಿಗೆ ನೌಕರರೆಲ್ಲ ಒಗ್ಗೂಡಿ ಮುಂದಿನ ತೀರ್ಮಾನಗಳನ್ನು ಕೈಗೊಳ್ಳುವ ಸಲುವಾಗಿ ಸಮಾವೇಶ ಹಮ್ಮಿಕೊಂಡಿದ್ದೇವೆ' ಎಂದರು.

ಶಿಕ್ಷಣವು ಆತ್ಮವಿಶ್ವಾಸವನ್ನು ಬೆಳೆಸುತ್ತದೆ. ಆತ್ಮವಿಶ್ವಾಸವು ಭರವಸೆಯನ್ನು ಹುಟ್ಟಿಸುತ್ತದೆ.

ಜೆಇಇ ಮೇನ್ಸ್ ಪರೀಕ್ಷೆ

ಬಹು ಆಯ್ಕೆ ಪ್ರಶ್ನೆಗೆ ಇರಲಿ ಆದ್ಯತೆ

ಪ್ರೊ. ಎಸ್.ಕೆ. ಜಾರ್ಜ್




ದೇಶದ ಗುಣಮಟ್ಟದ ಎಂಜಿನಿಯರಿಂಗ್ ಕಾಲೇಜುಗಳು ಹಾಗೂ ಐಐಟಿಗಳಿಗೆ ಪ್ರವೇಶ ಪಡೆಯುವ ಜೆಇಇ ಪರೀಕ್ಷೆಯನ್ನು ಈ ಬಾರಿ ನಾಲ್ಕು ಸೆಷನ್‌ಗಳಲ್ಲಿ ನಡೆಸಲಾಗುತ್ತಿದೆ. ಹೀಗಾಗಿ ವಿದ್ಯಾರ್ಥಿಗಳಿಗೆ ಅರ್ಹತೆ ಪಡೆಯಲು ಸಾಕಷ್ಟು ಅವಕಾಶಗಳಿದ್ದು, ಸರಿಯಾದ ಸಿದ್ಧತೆ ನಡೆಸಿದರೆ ಯಶಸ್ಸು ಸಾಧಿಸಬಹುದು.

ಈ ಬಾರಿ ಜೆಇಇ (ಜಾಯಿಂಟ್ ಎಂಟ್ರನ್ಸ್ ಎಕ್ಸಾಮ್) ಮೇನ್ಸ್ ಪರೀಕ್ಷೆಯನ್ನು ನಾಲ್ಕು ಸಲ (ಸೆಷನ್ಸ್) ಬರೆಯಲು ಅವಕಾಶ ನೀಡಲಾಗಿದೆ. ಹೀಗಾಗಿ ದೇಶದ ಪ್ರಮುಖ ಎಂಜಿನಿಯರಿಂಗ್ ಕಾಲೇಜುಗಳು, ಐಐಟಿಗಳಿಗೆ ಪ್ರವೇಶ ಪಡೆಯಲು ವಿದ್ಯಾರ್ಥಿಗಳಿಗೆ ಸಾಕಷ್ಟು ಅವಕಾಶಗಳು ಸಿಗುತ್ತವೆ. ಈಗಾಗಲೇ ಒಂದು ಸೆಷನ್ ಮುಗಿದಿದ್ದು, ಉಳಿದ ಅವಕಾಶಗಳನ್ನು ಸದ್ಬಳಕೆ ಮಾಡಿಕೊಳ್ಳಲು ಇಚ್ಛಿಸುವ ವಿದ್ಯಾರ್ಥಿಗಳಿಗೆ ತಯಾರಿಗಾಗಿ ಸಮಯವಿದೆ.

ವಿದ್ಯಾರ್ಥಿಗಳಿಗೆ ನಾಲ್ಕೂ ಸೆಷನ್‌ಗಳಿಗೆ ಹಾಜರಾಗುವ ಅವಕಾಶ ಇದ್ದರೂ ಕೂಡ ಏಪ್ರಿಲ್ ಅಥವಾ ಮೇನಲ್ಲಿ ನಡೆಯುವ ಪರೀಕ್ಷೆಗಳಿಗೆ ಹಾಜರಾಗಬಹುದು. ಸಿದ್ಧತೆಗೆ ಸಾಕಷ್ಟು ಸಮಯ ಸಿಗುತ್ತದೆ ಎಂಬುದು ಇದಕ್ಕೆ ಕಾರಣ.

ಮೊದಲನೆಯದಾಗಿ ನಿಗದಿತ ವೇಳಾಪಟ್ಟಿ ಹಾಕಿಕೊಂಡು ಓದಬೇಕಾಗುತ್ತದೆ. ನಿತ್ಯ 5–6 ತಾಸು ಓದುವ ಅಭ್ಯಾಸ ಇಟ್ಟುಕೊಂಡರೆ ಸರಿಯಾದ ಸಿದ್ಧತೆ ನಡೆಸಬಹುದು. ಮುಕ್ಕಾಲು ತಾಸು ಓದಿ, ಮಧ್ಯೆ 5–10 ನಿಮಿಷಗಳ ಬಿಡುವು ತೆಗೆದುಕೊಳ್ಳಿ. ಹಾಗೆಯೇ ಎನ್‌ಸಿಇಆರ್‌ಟಿ ಪುಸ್ತಕಗಳನ್ನು ಓದುವುದರ ಜೊತೆಗೆ ಪ್ರಥಮ ಪಿಯುಸಿ ಪುಸ್ತಕಗಳ ಕಡೆಗೂ ಗಮನಹರಿಸಿ. ಗಣಿತ, ರಸಾಯನವಿಜ್ಞಾನ ಹಾಗೂ ಭೌತವಿಜ್ಞಾನದ ಎಲ್ಲಾ ಪಾಠಗಳು ಮುಖ್ಯವಾಗಿದ್ದರೂ ಕೂಡ ಕೆಲವು ವಿಷಯಗಳಿಗೆ ಹೆಚ್ಚು ಒತ್ತು ಕೊಡಬೇಕಾಗುತ್ತದೆ. ಇದರಿಂದ ಉಳಿದ ವಿಷಯಗಳನ್ನು ಸುಲಭವಾಗಿ ಅರ್ಥ ಮಾಡಿಕೊಳ್ಳಲು ಸಾಧ್ಯ.

ಕೇವಲ ಪುಸ್ತಕ ಓದುವುದು ಮಾತ್ರವಲ್ಲ, ಸಮಸ್ಯೆಗಳನ್ನು ಬಿಡಿಸುವುದರತ್ತ ಕೂಡ ಗಮನಹರಿಸಬೇಕಾಗುತ್ತದೆ. ಗಣಿತದಲ್ಲಿ ಹಾಗೂ ಭೌತವಿಜ್ಞಾನದಲ್ಲಿ ಕೆಲವು ಸಮಸ್ಯೆಗಳನ್ನು ಪರಿಹರಿಸುವುದರಿಂದ ಮಾತ್ರ ಅವುಗಳನ್ನು ನೆನಪಿನಲ್ಲಿ ಇಟ್ಟುಕೊಳ್ಳಬಹುದು. ಹೆಚ್ಚಾಗಿ ಬಹು ಆಯ್ಕೆ ಪ್ರಶ್ನೆ (ಎಂಸಿಕ್ಯೂ) ಗಳ ಬಗ್ಗೆ ಲಕ್ಷ್ಯ ಕೊಡಿ. ಇದರಿಂದ ಪರೀಕ್ಷೆಯಲ್ಲಿ ಸಮಯದ ನಿರ್ವಹಣೆಯೂ ರೂಢಿಯಾಗುತ್ತದೆ. ಹಾಗೆಯೇ ಜೆಇಇಯ ಹಳೆಯ ಪ್ರಶ್ನೆಪತ್ರಿಕೆಗಳನ್ನು ಬಿಡಿಸುತ್ತ ಹೋಗಿ. ಈ ಕುರಿತು ಇರುವ ಆನ್‌ಲೈನ್ ಅಥವಾ ಆಫ್‌ಲೈನ್ ಅಣಕು ಪರೀಕ್ಷೆಗೆ ಹಾಜರಾಗುವುದು ಸೂಕ್ತ. ತಜ್ಞರು ಮಾಡಿರುವ ವಿಡಿಯೊಗಳನ್ನು ವೀಕ್ಷಿಸಿದರೆ ಈ ಬಗ್ಗೆ ನಿಮಗೆ ಉಪಯುಕ್ತ ಸಲಹೆಗಳು ಸಿಗುತ್ತವೆ.



ಒಂದು ತಿಂಗಳಿನಲ್ಲಿ ಅಭ್ಯಾಸ ಮಾಡಬೇಕಾದರೆ ಈ ರೀತಿ ವೇಳಾಪಟ್ಟಿ ಹಾಕಿಕೊಳ್ಳಬಹುದು. ಇವುಗಳ ಜೊತೆ ಉಳಿದ ಪಾಠಗಳನ್ನೂ ಓದಿಕೊಂಡರೆ ಎಲ್ಲಾ ಪ್ರಶ್ನೆಗಳ ಬಗ್ಗೆ ನಿಮಗೆ ಸರಿಯಾದ ಉತ್ತರವನ್ನು ನೀಡಲು ಸಾಧ್ಯವಾಗುತ್ತದೆ.

ಗಣಿತ: ಲಾಗರ್ಥಮ್ಸ್, ಕ್ವಾಡ್ರ್ಯಾಟಿಕ್ ಇಕ್ವೇಷನ್ಸ್, ಅಪ್ಲಿಕೇಶನ್ ಅಂಡ್ ಡಿರೈವೇಶನ್, ಕಂಟಿನ್ಯುಟಿ, ಲಿಮಿಟ್ಸ್, ಸರ್ಕಲ್ಸ್, ಲೈನ್ಸ್ ಅಂಡ್ ಪೇರ್ ಆಫ್ ಸ್ಟ್ರೇಟ್ ಲೈನ್ಸ್, 3ಡಿ ಜಾಮೆಟ್ರಿ, ಲೋಕಸ್, ಸೆಟ್ಸ್, ರಿಲೇಷನ್ಸ್ ಅಂಡ್ ಫಂಕ್ಷನ್ಸ್, ಪ್ರಾಬೆಬಿಲಿಟಿ ಅಂಡ್ ಸ್ಟಾಟಿಸ್ಟಿಕ್ಸ್, ವೆಕ್ಟರ್ ಆಲ್‌ಜಿಬ್ರಾ, ಇಂಟಿಗ್ರೇಶನ್, ಡಿಫರೆನ್ಶಿಯೇಶನ್, ಕಾಂಪ್ಲೆಕ್ಸ್ ನಂಬರ್, ಥಿಯರಿ ಆಫ್ ಇಕ್ವೇಶನ್ಸ್, ಸೀಕ್ವೆನ್ಸ್ ಅಂಡ್ ಸೀರೀಸ್, ಟ್ರಿಗ್ನಾಮೆಟ್ರಿಕ್ ರೇಷಿಯೊ.

ಭೌತವಿಜ್ಞಾನ: ಪವರ್ ಎಲೆಕ್ಟ್ರೋಸ್ಟ್ಯಾಟಿಕ್, ಎನರ್ಜಿ, ಗ್ರೆವಿಟೇಶನ್, ವೇವ್ಸ್, ಥರ್ಮಲ್ ಎಲೆಕ್ಟ್ರಿಸಿಟಿ, ಥರ್ಮಲ್ ಎಕ್ಸ್‌ಪಾನ್ಶನ್, ಎಲೆಕ್ಟ್ರಿಸಿಟಿ ಮತ್ತು ಹೀಟ್ ಟ್ರಾನ್ಸ್‌ಫರ್, ನ್ಯೂಟನ್ಸ್ ಲಾ ಆಫ್ ಮೋಷನ್ ಅಂಡ್ ಫ್ರಿಕ್ಷನ್, ಮಾಡರ್ನ್ ಫಿಸಿಕ್ಸ್, ಪ್ರಾಪರ್ಟೀಸ್ ಆಫ್ ಮ್ಯಾಟರ್, ಫ್ಲ್ಯೂಡ್ ಮೆಕ್ಯಾನಿಕ್ಸ್, ವೆಕ್ಟರ್ ಕಮ್ಯೂನಿಕೇಶನ್ ಸಿಸ್ಟಂ, ಹೀಟ್ ಅಂಡ್ ಥರ್ಮೊಡೈನಮಿಕ್ಸ್, ಮೋಷನ್ ಅಂಡ್ ಸರ್ಕುಲರ್ ಮೋಷನ್.

ರಸಾಯನವಿಜ್ಞಾನ: ಅಲ್ಕೈಲ್ ಹ್ಯಾಲೈಡ್ಸ್ ಅಂಡ್ ಮೋಲ್ ಕನ್ಸೆಪ್ಟ್ ಅಂಡ್ ಕಾರ್ಬೋನಿಲ್ ಕಂಪೌಂಡ್, ಪೀರಿಯಾಡಿಕ್ ಟೇಬಲ್, ಕೆಮಿಕಲ್ ಬಾಂಡ್, ಆಟಮಿಕ್ ಸ್ಟ್ರಕ್ಚರ್ ಮತ್ತು ಎಲೆಕ್ಟ್ರೊಕೆಮಿಸ್ಟ್ರಿ, ಫಿನಾಲ್, ಆಲ್ಕೊಹಾಲ್, ಈಥರ್, ಸಾಲಿಡ್ ಸ್ಟೇಟ್, ಗ್ಯಾಸಿಯಸ್ ಸ್ಟೇಟ್, ಬಯೊಮಾಲಿಕ್ಯೂಲ್ಸ್, ಜನರಲ್ ಆರ್ಗ್ಯಾನಿಕ್ ಕೆಮಿಸ್ಟ್ರಿ, ಕೊ- ಆರ್ಡಿನೇಶನ್ ಕೆಮಿಸ್ಟ್ರಿ, ಹೈಡ್ರೋಕಾರ್ಬನ್ಸ್, ಕೆಮಿಕಲ್ ಕೈನೆಟಿಕ್ಸ್, ಹೈಡ್ರೋಜನ್ ಅಂಡ್ ಇಟ್ಸ್ ಕಂಪೌಂಡ್.

ಇವಿಷ್ಟನ್ನು ಒಮ್ಮೆ ಓದಿದರೆ ಸಾಲದು, ಪುನರಾವರ್ತನೆ ಮಾಡುತ್ತ ಹೋಗಬೇಕು.

ವಿದ್ಯಾರ್ಥಿ ವೇತನ ಕೈಪಿಡಿ

ಐಐಎಂ ಅಹಮದಾಬಾದ್ ರಿಸರ್ಚ್ ಅಸಿಸ್ಟೆಂಟ್‌ಶಿಪ್ 2021

ವಿವರ: ಎಂ.ಎ ಪದವಿ ಪೂರೈಸಿದ ವಿದ್ಯಾರ್ಥಿಗಳಿಗೆ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್ ಅಹಮದಾಬಾದ್ ಅಸಿಸ್ಟೆಂಟ್‌ಶಿಪ್‌ಗೆ ಅರ್ಜಿ ಆಹ್ವಾನಿಸಿದೆ.

ಅರ್ಹತೆ: ಎಂ.ಎ ಯಲ್ಲಿ ಪ್ರಥಮ ದರ್ಜೆಯಲ್ಲಿ ತೇರ್ಗಡೆ ಹೊಂದಿರಬೇಕು. ಜೊತೆಗೆ ಎಂಬಿಎ ಪದವಿಯಲ್ಲಿ ಪ್ರಥಮ ದರ್ಜೆಯಲ್ಲಿ ಪಾಸ್ ಮಾಡಿರಬೇಕು.

ಆರ್ಥಿಕ ಸಹಾಯ: ತಿಂಗಳಿಗೆ ₹ 40 ಸಾವಿರದವರೆಗೆ ಭತ್ಯೆ ಸಿಗಲಿದೆ.

ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: ಮಾರ್ಚ್ 8, 2021

ಅರ್ಜಿ ಸಲ್ಲಿಕೆ ವಿಧಾನ: ಇ–ಮೇಲ್

ಹೆಚ್ಚಿನ ಮಾಹಿತಿಗೆ: www.b4s.in/praja/MRA7

ಎಸ್‌ಇಆರ್‌ಬಿ ಕೋರ್ ರಿಸರ್ಚ್ ಗ್ರಾಂಟ್ 2021

ವಿವರ: ಯುವ ವಿಜ್ಞಾನಿಗಳಿಂದ ದಿ ಸೈನ್ಸ್ ಅಂಡ್ ಎಂಜಿನಿಯರಿಂಗ್ ರಿಸರ್ಚ್ ಬೋರ್ಡ್ ಅರ್ಜಿಗಳನ್ನು ಆಹ್ವಾನಿಸಿದೆ.

ಅರ್ಹತೆ: ಗುರುತಿಸಲ್ಪಟ್ಟ ಅಕಾಡೆಮಿಯಿಂದ ಅಥವಾ ಭಾರತದ ಯಾವುದೇ ರಾಷ್ಟ್ರೀಯ ಪ್ರಯೋಗಾಲಯದಿಂದ ಸಂಶೋಧಕ/ಸಂಶೋಧಕಿ ಸ್ಥಾನವನ್ನು ಹೊಂದಿರಬೇಕು. ವಿಜ್ಞಾನ, ಗಣಿತ, ಎಂಜಿನಿಯರಿಂಗ್‌ನಲ್ಲಿ ಪಿಎಚ್‌ಡಿ ಪಡೆದಿರಬೇಕು.

ಆರ್ಥಿಕ ಸಹಾಯ: ಕೋರ್ ರಿಸರ್ಚ್ ನೆರವು

ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: ಮಾರ್ಚ್ 8, 2021

ಅರ್ಜಿ ಸಲ್ಲಿಕೆ ವಿಧಾನ: ಅರ್ಜಿ ಮೂಲಕ ಮಾತ್ರ

ಹೆಚ್ಚಿನ ವಿವರ: www.b4s.in/praja/RBC7



ಎಥಿಕಲ್ ಹ್ಯಾಕಿಂಗ್

ತಂತ್ರಜ್ಞಾನದ ಜೊತೆ ಕೌಶಲವೂ ಬೇಕು

ಕಾನೂನುಬದ್ಧವಾಗಿ ಕಂಪ್ಯೂಟರ್ ಅಥವಾ ನೆಟ್‌ವರ್ಕಿಂಗ್ ವ್ಯವಸ್ಥೆಯಲ್ಲಿನ ಲೋಪದೋಷಗಳನ್ನು ಕಂಡುಹಿಡಿದು ಆ ಮೂಲಕ ವ್ಯವಸ್ಥೆಯನ್ನು ಸರಿಪಡಿಸುವ ಎಥಿಕಲ್ ಹ್ಯಾಕರ್‌ಗಳಿಗೆ ಈಗ ಸಾಕಷ್ಟು ಅವಕಾಶಗಳಿವೆ. ಕಂಪ್ಯೂಟರ್ ಜ್ಞಾನದ ಜೊತೆ ಇತರ ಕೌಶಲಗಳು ಇದಕ್ಕೆ ಅಗತ್ಯ.

ಮನಸ್ವಿ

ತಂತ್ರಜ್ಞಾನ ಹಾಗೂ ಅಂತರ್ಜಾಲದ ಬಳಕೆ ಹೆಚ್ಚಿದಂತೆ ಅದರಿಂದ ಅಪಾಯಗಳೂ ಹೆಚ್ಚುತ್ತಿವೆ. ಇತ್ತೀಚೆಗೆ ಮೊಬೈಲ್‌ಗಳು ಹಾಗೂ ಕಂಪ್ಯೂಟರ್‌ನಿಂದ ವೈಯಕ್ತಿಕ ಮಾಹಿತಿಗಳನ್ನು ಸೋರಿಕೆ ಮಾಡುವ ಹ್ಯಾಕರ್‌ಗಳ ಕಾಟ ಹೆಚ್ಚಾಗಿದೆ. ದೊಡ್ಡ ದೊಡ್ಡ ಖಾಸಗಿ ಹಾಗೂ ಸರ್ಕಾರಿ ಸಂಸ್ಥೆಗಳ ಗೌಪ್ಯ ಮಾಹಿತಿಯನ್ನು ಸೋರಿಕೆ ಮಾಡುವ ಕೆಲಸವನ್ನೂ ಮಾಡುತ್ತಿದ್ದಾರೆ ಹ್ಯಾಕರ್‌ಗಳು. 1960ರಲ್ಲಿ ಮೊದಲ ಬಾರಿಗೆ ‘ಹ್ಯಾಕರ್’ ಪದವನ್ನು ಹುಟ್ಟುಹಾಕಲಾಯಿತು. ಈಗಂತೂ ಹ್ಯಾಕಿಂಗ್ ಎನ್ನುವುದು ಕಂಪ್ಯೂಟಿಂಗ್‌ನ ಭಾಗವಾಗಿದೆ. ಎಥಿಕಲ್ ಹ್ಯಾಕಿಂಗ್ ಎನ್ನುವುದು ಹ್ಯಾಕಿಂಗ್‌ನ ಒಂದು ಭಾಗವಾಗಿದ್ದು ಇದು ಸದುದ್ದೇಶಗಳಿಂದ ಕೂಡಿದೆ.

ಎಥಿಕಲ್ ಹ್ಯಾಕರ್

ಎಥಿಕಲ್ ಹ್ಯಾಕರ್‌ಗಳ ಗುರಿ ವ್ಯವಸ್ಥೆಯಲ್ಲಿನ ಲೋಪದೋಷಗಳನ್ನು ಕಂಡು ಹಿಡಿಯುವುದು ಹಾಗೂ ದೇಶಕ್ಕೆ ಮಾರಕವಾಗಿರುವ ಸಂಗತಿಗಳನ್ನು ಕಾನೂನುಬದ್ಧವಾಗಿ ಹ್ಯಾಕ್ ಮಾಡಿ ಆ ಮೂಲಕ ದೇಶದ ಗೌಪ್ಯತೆಯನ್ನು ಸುರಕ್ಷಿತವಾಗಿರಿಸುವುದು.

ಹ್ಯಾಕಿಂಗ್‌ನ ವಿಧಗಳು

ವೆಬ್‌ಸೈಟ್ ಹ್ಯಾಕಿಂಗ್: ವೆಬ್‌ಸರ್ವರ್ ಹಾಗೂ ಡೇಟಾಬೇಸ್‌ಗಳ ಮೂಲಕ ಅನಧಿಕೃತವಾಗಿ ಪ್ರವೇಶಿಸುವುದು, ಮಾಹಿತಿಗಳನ್ನು ಬದಲಿಸುವುದು ಹಾಗೂ ಸೋರಿಕೆ ಮಾಡುವುದಕ್ಕೆ ವೆಬ್‌ಸೈಟ್ ಹ್ಯಾಕಿಂಗ್ ಎನ್ನುತ್ತಾರೆ.

ನೆಟ್‌ವರ್ಕ್ ಹ್ಯಾಕಿಂಗ್: ಎನ್‌ಎಸ್ ಲುಕ್‌ಅಪ್, ಟ್ರೇಸರ್ಟ್ ಮುಂತಾದ ಟೂಲ್‌ಗಳ ಮೂಲಕ ನೆಟ್‌ವರ್ಕ್ ವ್ಯವಸ್ಥೆಯನ್ನು ಹ್ಯಾಕ್ ಮಾಡುವುದು ಹಾಗೂ ನೆಟ್‌ವರ್ಕ್ ವ್ಯವಸ್ಥೆಯನ್ನು ಕೆಡಿಸುವುದಕ್ಕೆ ನೆಟ್‌ವರ್ಕ್ ಹ್ಯಾಕಿಂಗ್ ಎನ್ನಲಾಗುತ್ತದೆ.

ಇಮೇಲ್ ಹ್ಯಾಕಿಂಗ್: ಇಮೇಲ್‌ನ ಬಳಕೆದಾರರ ಅನುಮತಿಯಿಲ್ಲದೆ ಅನಧಿಕೃತವಾಗಿ ಇಮೇಲ್ ಅಕೌಂಟ್‌ಗೆ ಪ್ರವೇಶಿಸುವುದು.

ಪಾಸ್‌ವರ್ಡ್ ಹ್ಯಾಕಿಂಗ್: ಕಂಪ್ಯೂಟರ್‌ನಲ್ಲಿ ಈಗಾಗಲೇ ಸಂಗ್ರಹವಾಗಿರುವ ಡೇಟಾದಿಂದ ರಹಸ್ಯ ಪಾಸ್‌ವರ್ಡ್‌ಗಳನ್ನು ಮರುಪಡೆಯುವುದು, ಆ ಮೂಲಕ ಮಾಹಿತಿ ಕದಿಯುವುದು.

ಕಂಪ್ಯೂಟರ್ ಹ್ಯಾಕಿಂಗ್: ಅನಧಿಕೃತವಾಗಿ ಕಂಪ್ಯೂಟರ್ ವ್ಯವಸ್ಥೆಯೊಳಗೆ ಪ್ರವೇಶ ಪಡೆಯುವುದು, ಪಾಸ್‌ವರ್ಡ್ ಮುಂತಾದ ಮಾಹಿತಿಗಳನ್ನು ಕದಿಯುವುದು.

ಹ್ಯಾಕರ್‌ಗಳ ವಿಧಗಳು

ವೈಟ್ ಹ್ಯಾಟ್ ಹ್ಯಾಕರ್ಸ್: ಸಾಮಾನ್ಯವಾಗಿ ವೈಟ್ ಹ್ಯಾಟ್ ಹ್ಯಾಕರ್‌ಗಳು ಒಳ್ಳೆಯ ಉದ್ದೇಶಗಳಿಂದ ಹ್ಯಾಕ್ ಮಾಡುವ ಸಾಫ್ಟ್‌ವೇರ್ ಎಂಜಿನಿಯರ್‌ಗಳು. ಅಂದರೆ ಅವರು ಕಂಪ್ಯೂಟರ್ ಅಥವಾ ನೆಟ್‌ವರ್ಕ್ ವ್ಯವಸ್ಥೆಯಲ್ಲಿನ ದೌರ್ಬಲ್ಯಗಳನ್ನು ಕಂಡುಹಿಡಿದು ವ್ಯವಸ್ಥೆಗೆ ಹಾನಿ ಮಾಡುವ ಅಂಶಗಳನ್ನು ಸರಿಪಡಿಸುತ್ತಾರೆ. ಜೊತೆಗೆ ವ್ಯವಸ್ಥೆಯಲ್ಲಿನ ಲೋಪದೋಷಗಳನ್ನು ಮೌಲ್ಯಮಾಪನ ಮಾಡಲು ಪ್ರಯತ್ನಿಸುತ್ತಾರೆ.

ಬ್ಲ್ಯಾಕ್ ಹ್ಯಾಟ್ ಹ್ಯಾಕರ್‌ಗಳು: ಯಾವುದೇ ಕಂಪ್ಯೂಟರ್ ಅಥವಾ ನೆಟ್‌ವರ್ಕ್ ವ್ಯವಸ್ಥೆಯೊಳಗೆ ಅನಧಿಕೃತವಾಗಿ ಪ್ರವೇಶ ಮಾಡುವವರನ್ನು ಬ್ಲ್ಯಾಕ್ ಹ್ಯಾಟ್ ಹ್ಯಾಕರ್‌ಗಳು ಎನ್ನುತ್ತಾರೆ. ಅವರು ಕಾರ್ಪೊರೇಟ್ ಡೇಟಾ ಕದಿಯುವುದು, ಗೌಪ್ಯತೆಯ ಉಲ್ಲಂಘನೆ, ವ್ಯವಸ್ಥೆಯನ್ನು ಹಾಳುಗೆಡವುವುದು, ನೆಟ್‌ವರ್ಕ್ ಸಂವಹನವನ್ನು ನಿರ್ಬಂಧಿಸುವುದು ಮುಂತಾದವನ್ನು ಮಾಡುತ್ತಾರೆ.

ಗ್ರೇ ಹ್ಯಾಟ್ ಹ್ಯಾಕರ್, ರೆಡ್ ಹ್ಯಾಟ್ ಹ್ಯಾಕರ್ಸ್, ಬ್ಲೂ ಹ್ಯಾಟ್ ಹ್ಯಾಕರ್ಸ್, ಎಲೈಟ್ ಹ್ಯಾಕರ್ಸ್, ಸ್ಕ್ರಿಪ್ಟ್ ಕಿಡ್ಡಿ, ನಿಯೋಫೈಟ್, ಹ್ಯಾಕ್ಟಿವಿಸ್ಟ್ ಇವರನ್ನು ಮಿಸಲೇನಿಯಸ್ ಹ್ಯಾಕರ್‌ಗಳು ಎನ್ನುತ್ತಾರೆ.

ಎಥಿಕಲ್ ಹ್ಯಾಕಿಂಗ್‌ಗೆ ಬಳಸುವ ಟೂಲ್‌ಗಳು

ಎನ್‌ಮ್ಯಾಪ್: ನೆಟ್‌ವರ್ಕ್ ಮ್ಯಾಪರ್ ಅನ್ನು ಎನ್‌ಮ್ಯಾಪರ್ ಎಂದು ಕರೆಯುತ್ತಾರೆ. ಎನ್‌ಮ್ಯಾಪ್ ಎನ್ನುವುದು ಓಪನ್ ಸೋರ್ಸ್ ಟೂಲ್ ಆಗಿದ್ದು ದೊಡ್ಡ ದೊಡ್ಡ ನೆಟ್‌ವರ್ಕ್ ಜಾಲವನ್ನು ಸ್ಕ್ಯಾನ್ ಮಾಡಲು ಇದನ್ನು ವಿನ್ಯಾಸಗೊಳಿಸಿರುತ್ತಾರೆ.

ನೆಟ್ಸ್‌ಪಾರ್ಕರ್: ಇದು ವೆಬ್ ಸೆಕ್ಯೂರಿಟಿ ಸ್ಕ್ಯಾನಿಂಗ್ ಪರಿಕರಗಳನ್ನು ಸ್ವಯಂಚಾಲಿತಗೊಳಿಸುವ ಏಕೈಕ ಭದ್ರತಾ ಸ್ಕ್ಯಾನರ್ ಆಗಿದೆ. ಈ ಟೂಲ್ ಎಥಿಕಲ್ ಹ್ಯಾಕರ್‌ಗಳಿಗೆ ವೆಬ್‌ಸೈಟ್ ಸ್ಕ್ಯಾನ್ ಮಾಡುವುದು, ವೆಬ್ ಸರ್ವೀಸ್ ಹಾಗೂ ವೆಬ್ ಅಪ್ಲಿಕೇಷನ್‌ಗಳನ್ನು ಸ್ಕ್ಯಾನ್ ಮಾಡಲು ಅನುಮತಿ ನೀಡುತ್ತದೆ. ಸುರಕ್ಷತಾ ನ್ಯೂನತೆಗಳು ಹಾಗೂ ದೋಷಗಳನ್ನು ಕಂಡುಹಿಡಿಯಲು ಸಹಾಯ ಮಾಡುತ್ತದೆ.

ಬರ್ಪ್ ಸೂಟ್: ಬರ್ಪ್ ಸೂಟ್ ಸುಲಭವಾಗಿ ಬಳಸಲಾಗುವ ಹಾಗೂ ಜನಪ್ರಿಯ ವೇದಿಕೆಯಾಗಿದೆ. ವೆಬ್ ಅಪ್ಲಿಕೇಶನ್‌ಗಳ ಸುರಕ್ಷತಾ ಪರೀಕ್ಷೆಗಳನ್ನು ನಿರ್ವಹಿಸಲು ಇದನ್ನು ವ್ಯಾಪಕವಾಗಿ ಬಳಸಲಾಗುತ್ತದೆ.

ಕೌಶಲಗಳು

ಹ್ಯಾಕಿಂಗ್ ಎನ್ನುವುದು ಕೇವಲ ವಿಜ್ಞಾನವಲ್ಲ, ಇದು ಒಂದು ಕಲೆ. ಇದಕ್ಕೆ ನೂತನ ತಂತ್ರಜ್ಞಾನದೊಂದಿಗೆ ಅಪ್‌ಡೇಟ್ ಆಗುತ್ತಲೇ ಇರಬೇಕು, ಅದಕ್ಕಾಗಿ ಸಾಕಷ್ಟು ಶ್ರಮ ವಹಿಸಬೇಕು. ಹೊಸ ಹೊಸ ದೋಷಗಳ ಕುರಿತು ಅರಿವು ಮೂಡಿಸಿಕೊಂಡಿರಬೇಕು.

ಪ್ರೋಗ್ರಾಮಿಂಗ್ ಲ್ಯಾಗ್ವೇಂಜ್: ನೈತಿಕ ಹ್ಯಾಕರ್ ಆಗ ಬಯಸುವವರು ಕಂಪ್ಯೂಟರ್ ವ್ಯವಸ್ಥೆಗಳ ಕುರಿತು ಆಳವಾಗಿ ತಿಳಿವಳಿಕೆ ಮೂಡಿಸಿಕೊಂಡಿರಬೇಕು. ಪ್ರೋಗ್ರಾಮಿಂಗ್ ಹಾಗೂ ಕಂಪ್ಯೂಟರ್ ನೆಟ್‌ವರ್ಕ್ ಕುರಿತು ಕೌಶಲವಿರಬೇಕು.

ಕಂಪ್ಯೂಟರ್ ಲ್ಯಾಗ್ವೇಂಜ್: ಎಚ್‌ಟಿಎಂಎಲ್, ಜಾವಾಸ್ಕ್ರಿಪ್ಟ್, ಎಸ್‌ಕ್ಯೂಎಲ್, ಪಿಎಚ್‌ಪಿ/ರುಬಿ

ಸೆಕ್ಯೂರಿಟಿ: ಫೈರ್‌ವಾಲ್ಸ್, ಕ್ರಿಪ್ಟೋಗ್ರಫಿ, ಎನ್‌ಕ್ರಿಪ್ಷನ್, ಡಿಕ್ರಿಪ್ಷನ್, ಎಸ್‌ಎಸ್‌ಎಲ್, ಎಚ್‌ಎಚ್‌ಟಿಪಿ, ಎಚ್‌ಟಿಟಿಪಿಎಸ್, ಐಟಿಸೆಕ್ ಇತ್ಯಾದಿ.

(ಪೂರಕ ಮಾಹಿತಿ: ಎಸ್.ಜಿ. ಕೃಷ್ಣ, ನಿರ್ದೇಶಕರು ಲೋಕಸ್ ಸ್ಟಾರ್ಟ್‌ಅಪ್)

ಎಸ್ಸೆಸ್ಸೆಲ್ಸಿ- ಪಿಯುಸಿ ಪರೀಕ್ಷೆ ದಿಕ್ಸೂಚಿ

ಎರಡು ಚರಾಕ್ಷಗಳಿರುವ ರೇಖಾತ್ಮಕ ಸಮೀಕರಣಗಳ ಜೋಡಿಗಳು

ಎಸ್ಸೆಸ್ಸೆಲ್ಸಿ

ಗಣಿತ

ಪೀಠಿಕೆ

ಗಣಿತದ ಸಮಸ್ಯೆಗಳನ್ನು ಸಮೀಕರಣವಾಗಿ ಮತ್ತು ಆ ಸಮೀಕರಣಗಳನ್ನು ಸಾಧ್ಯವಾದಷ್ಟೂ ಅತ್ಯಂತ ಸರಳ ಪದಗಳಲ್ಲಿ ಪ್ರಸ್ತುತಪಡಿಸುವುದು ಒಂದು ವಿಶ್ಲೇಷಣಾ ಕಲೆಯ ಪ್ರಮುಖ ಉಪಯೋಗ. ಒಂದು ರೇಖಾತ್ಮಕ ಸಮೀಕರಣವನ್ನು ಚರಾಕ್ಷವಿರುವ ರೇಖಾತ್ಮಕ ಸಮೀಕರಣ ಸಂಯೋಗ ಅನೇಕ ಸಮಸ್ಯೆಗಳನ್ನು ಬಗೆಹರಿಸುವುದಾಗಿದೆ.

ಒಂದು ಸಮೀಕರಣವನ್ನು ಉಪಯೋಗಿಸಿ ನಾವು ತಿಳಿದಿಲ್ಲದ ಅಂಶಗಳನ್ನು ಚರಾಕ್ಷರಗಳ ಉಪಯೋಗದಿಂದ ಪಡೆಯಬಹುದು. ಇಲ್ಲಿ ಯಾರೊಬ್ಬರ ಸ್ಕೋರ್‌ಗಳೂ ತಿಳಿದಿಲ್ಲವೆಂಬುದನ್ನು ನೀವು ನೋಡಬಹುದು. ಅಂದರೆ ಎರಡು ಅವ್ಯಕ್ತ ಪರಿಮಾಣಗಳನ್ನು x ಮತ್ತು y ಗಳಿಂದ ಸೂಚಿಸೋಣ. ಆಗ ಒಬ್ಬ ದಾಂಡಿಗನು ಗಳಿಸಿದ ರನ್‌ಗಳು x ಮತ್ತು ಇನ್ನೊಬ್ಬ ಗಳಿಸಿದ ರನ್‌ಗಳು y ಎಂದಾಗುತ್ತದೆ. ನಮಗೆ ತಿಳಿದಿರುವುದೇನೆಂದರೆ $x + y = 176$

ಎರಡು ಚರಾಕ್ಷರಗಳಿರುವ ಸಮೀಕರಣಗಳಲ್ಲಿ ಚರಾಕ್ಷರಗಳನ್ನು x ಮತ್ತು y ಗಳಲ್ಲಿ ಸೂಚಿಸುವುದು ಒಂದು ಪದ್ಧತಿ. ಆದರೆ ಇತರೆ ಅಕ್ಷರಗಳನ್ನು ಕೂಡ ಬಳಸಬಹುದು.

ಉದಾಹರಣೆಗೆ $1.2s + 3t = 15$, $p + 4q = y$

a, b ಮತ್ತು c ವಾಸ್ತವ ಸಂಖ್ಯೆಗಳಾಗಿರುವ a ಮತ್ತು b ಈ ಎರಡೂ ಸೊನ್ನೆ ಅಲ್ಲದಿರುವ $ax + by + c = 0$ ರೂಪದಲ್ಲಿ ಬರೆಯಬಹುದಾದ ಯಾವುದೇ ಸಮೀಕರಣವನ್ನು ಎರಡು ಚರಾಕ್ಷರಗಳಿರುವ ರೇಖಾತ್ಮಕ ಸಮೀಕರಣ ಎನ್ನುತ್ತೇವೆ.

$4 = 5x - 3y$ ಎಂಬ ಸಮೀಕರಣವನ್ನು $5x - 3y - 4 = 0$ ಎಂದು ಬರೆಯಬಹುದು. ಇಲ್ಲಿ $a = 5$, $b = 3$, $c = 4$ ಇದನ್ನು $-5x + 3y + 4 = 0$ ಎಂದು ಕೂಡ ಬರೆಯಬಹುದು. ಆಗ $a = 5$, $b = 3$, $c = 4$ ಆಗುತ್ತದೆ.

ಒಂದು ರೇಖಾತ್ಮಕ ಸಮೀಕರಣದ ಪರಿಹಾರ:

ಎರಡು ಚರಾಕ್ಷರಗಳನ್ನು ಹೊಂದಿರುವ ಒಂದು ರೇಖಾತ್ಮಕ ಸಮೀಕರಣದಲ್ಲಿ ಎರಡು ಚರಾಕ್ಷರಗಳಿರುವುದರಿಂದ ಒಂದು ಪರಿಹಾರವೆಂದರೆ ಒಂದು ಜೊತೆ ಬೆಲೆಗಳು ಈ ಪರಿಹಾರದಲ್ಲಿ ಕೊಟ್ಟಿರುವ ಸಮೀಕರಣಕ್ಕೆ ಸರಿಹೊಂದಿರುವಂತೆ x ಗೆ ಒಂದು ಬೆಲೆ y ಗೆ ಒಂದು ಬೆಲೆ ಇರುತ್ತದೆ. $2x + 3y = 12$ ಎಂಬ ಸಮೀಕರಣವನ್ನು ಪರಿಗಣಿಸೋಣ.

ಇಲ್ಲಿ $x = 3$, $y = 2$ ಎಂದು ಆದೇಶಿಸಿದಾಗ ನೀವು ಕಾಣುವುದೆಂದರೆ

$2x + 3y = (2x3) + (3x2) = 12$


ಈ ಪರಿಹಾರವನ್ನು ಮೊದಲು x ನ ಬೆಲೆ ಬಳಿಕ y ಯ ಬೆಲೆ ಇರುವಂತೆ ಅಣಿತಯುಗ್ಮ (3,2) ಎಂಬುದಾಗಿ ಬರೆಯಬಹುದು. ಅದೇ ರೀತಿ(0.4) ಕೂಡ .2 $x + 3y = 12$ ಒಂದು ಪರಿಹಾರವಾಗಿದೆ. ಇದೇ ರೀತಿಯಲ್ಲಿ ಅನೇಕಾನೇಕ ಪರಿಹಾರಗಳನ್ನು ಪಡೆಯಲು ನಮಗೆ ಸಾಧ್ಯವಿದೆ. ಚರಾಕ್ಷರಗಳಿರುವ ರೇಖಾತ್ಮಕ ಸಮೀಕರಣಗಳ ವಿವಿಧ ಕೊನೆ ಎಂಬುದಿಲ್ಲ. ಅಂದರೆ ಎರಡು ಚರಾಕ್ಷರಗಳ ರೇಖಾತ್ಮಕ ಸಮೀಕರಣಕ್ಕೆ ಅಪರಿಮಿತ ಪರಿಹಾರಗಳಿವೆ.

ಎರಡು ಚರಾಕ್ಷರಗಳಿರುವ ರೇಖಾತ್ಮಕ ಸಮೀಕರಣದ ನಕ್ಷೆ: ಎರಡು ಚರಾಕ್ಷರಗಳಿರುವ ಒಂದು ರೇಖಾತ್ಮಕ ಸಮೀಕರಣಕ್ಕೆ ಈಗ ನಾವು ಅವುಗಳ ರೇಖಾಗಣಿತೀಯ ಅಭಿವ್ಯಕ್ತಿಯನ್ನು ತಿಳಿಯೋಣ. ಪ್ರತಿಯೊಂದು ರೇಖಾತ್ಮಕ ಸಮೀಕರಣವು ಅಪರಿಮಿತ ಪರಿಹಾರಗಳಿವೆ. ಈ ಬೆಲೆಗಳ ಜೋಡಿಗಳಂತೆ ಬರೆದು ಒಂದು ಗ್ರಾಫ್ ಹಾಳೆಯಲ್ಲಿ ಬಿಂದುಗಳಂತೆ ಗುರುತಿಸಬಹುದು.

ಇಲ್ಲಿ $x + 2y = 6$ ಎಂಬ ಸಮೀಕರಣದ ಪರಿಹಾರಗಳನ್ನು ಕೆಳಗಿನ ಕೋಷ್ಟಕದಲ್ಲಿರುವಂತೆ x ನ ಬೆಲೆಗಳ ಕೆಳಗೆ ಅನುರೂಪವಾದ y ಯ ಬೆಲೆಗಳನ್ನು ಬರೆದು ವ್ಯಕ್ತಪಡಿಸಬಹುದು.

x	0	2	4	0
y	3	2	1	6

ನಾವು (0,3), (2,2), (4,1) ಮತ್ತು (6.0) ಎಂಬ ಬಿಂದುಗಳನ್ನು ಗ್ರಾಫ್ ಹಾಳೆಯಲ್ಲಿ ಗುರುತಿಸಿ. ಈಗ ಇವುಗಳಲ್ಲಿ ಯಾವುದಾದರೂ 2 ಬಿಂದುಗಳನ್ನು ಸೇರಿಸಿ ಒಂದು ಸರಳರೇಖೆಯನ್ನು ಪಡೆಯಬಹುದು.



ಸಮೀಕರಣಕ್ಕೆ ಸರಿಹೊಂದುವ ನಿರ್ದೇಶಾಂಕಗಳಿರುವ ಪ್ರತಿಯೊಂದು ಬಿಂದುವು AB ಸರಳರೇಖೆಯ ಮೇಲಿದೆ. AB ಸರಳ ರೇಖೆಯ ಮೇಲಿರುವ ಪ್ರತಿಯೊಂದು ಬಿಂದು(a,b) ಯು $x = a$, $y = b$ ಆಗುವಂತೆ ಸಮೀಕರಣಕ್ಕೆ ಒಂದು ಪರಿಹಾರವಾಗುತ್ತದೆ. AB ಸರಳರೇಖೆಯ ಮೇಲಿಲ್ಲದ ಯಾವುದೇ ಸಮೀಕರಣಕ್ಕೆ ಪರಿಹಾರವಲ್ಲ.

ಮುಂದುವರಿಯುವುದು..

ಮಾತೃಕೆಗಳು

ದ್ವಿತೀಯ ಪಿಯುಸಿ

ಗಣಿತ

ಮಾತೃಕೆಗಳ ಸಮೂನೆಗಳು

ಮಾತೃಕೆಗಳು ಎಂದರೆ ಅಂಶಗಳನ್ನು ಅಡ್ಡಸಾಲು ಮತ್ತು ಕಂಬಸಾಲುಗಳಲ್ಲಿ ಜೋಡಿಸುವುದು ಎಂದು ತಿಳಿದಿದೆ. ಈ ಭಾಗದಲ್ಲಿ ನಾವು ಮಾತೃಕೆಗಳ ವಿವಿಧ ನಮೂನೆಗಳನ್ನು ವಿಮರ್ಶಿಸೋಣ.

ಕಂಬಸಾಲು ಮಾತೃಕೆ: ಒಂದೇ ಒಂದು ಕಂಬ ಸಾಲು ಇರುವ ಮಾತೃಕೆಯನ್ನು ಕಂಬಸಾಲು ಮಾತೃಕೆ ಎನ್ನುವರು.

$$A = \begin{bmatrix} 0 \\ \sqrt{3} \\ -1/2 \end{bmatrix}$$ ಇದು 4×1 ದರ್ಜೆಯ ಕಂಬಸಾಲು ಮಾತೃಕೆ.

ಅಡ್ಡ ಸಾಲು ಮಾತೃಕೆ: ಒಂದೇ ಒಂದು ಅಡ್ಡ ಸಾಲಿರುವ ಮಾತೃಕೆಯನ್ನು ಅಡ್ಡಸಾಲು ಮಾತೃಕೆ ಎನ್ನುವರು.

$$B = \begin{bmatrix} -1/2, & \sqrt{5}, & 3 \end{bmatrix}$$ ಇದು 1×3 ಅಡ್ಡಸಾಲು ಮಾತೃಕೆಯಾಗಿದೆ.

ವರ್ಗ ಮಾತೃಕೆ: ಮಾತೃಕೆಯೊಂದರಲ್ಲಿ ಅಡ್ಡ ಸಾಲುಗಳ ಸಂಖ್ಯೆ ಮತ್ತು ಕಂಬಸಾಲುಗಳ ಸಂಖ್ಯೆ ಸಮನಾಗಿದ್ದರೆ ಅಂತಹ ಮಾತೃಕೆಯನ್ನು ವರ್ಗ ಮಾತೃಕೆ ಎನ್ನುವರು.

$$A = \begin{bmatrix} 1 & 2 & 3 \\ 4 & 5 & 6 \\ 7 & 8 & 9 \end{bmatrix}$$ ಇದು 3ನೇ ದರ್ಜೆಯ ವರ್ಗ ಮಾತೃಕೆಯಾಗಿದೆ.

$A = [a_{ij}]$ ಒಂದು n ವರ್ಗದ ಮಾತೃಕೆಯಾಗಿದ್ದರೆ a_{11}, a_{22}, a_{33}.... a_{mn} ಮಾತೃಕೆಯ ಕರ್ಣವನ್ನು ರೂಪಿಸುತ್ತವೆ.

ಆದ್ದರಿಂದ $$A = \begin{bmatrix} 1 & -3 & 1 \\ 2 & 4 & -1 \\ -3 & 5 & 6 \end{bmatrix}$$

ಆದರೆ 1,4,6 ಗಳು A ಮಾತೃಕೆಯ ಕರ್ಣದ ಅಂಶಗಳು.

ಕರ್ಣ ಮಾತೃಕೆ: $B = [b_{ij}]$ ವರ್ಗ ಮಾತೃಕೆಯಲ್ಲಿ ಕರ್ಣದ ಮೇಲಿನ ಅಂಶಗಳನ್ನು ಹೊರತುಪಡಿಸಿ ಉಳಿದೆಲ್ಲ ಅಂಶಗಳು ಶೂನ್ಯ (0) ಆಗಿದ್ದರೆ ಆ ಮಾತೃಕೆಯನ್ನು ಕರ್ಣ ಮಾತೃಕೆ ಎನ್ನುವರು.

ಅಂದರೆ $B = [b_{ij}]_{m \times n}$ ಮಾತೃಕೆಯಲ್ಲಿ $i \neq j$, $b_{ij} = o$ ಆದಾಗ ಈ ಮಾತೃಕೆಯನ್ನು ಕರ್ಣ ಮಾತೃಕೆ ಎನ್ನುವರು.

ಉದಾಹರಣೆ: $$A = \begin{bmatrix} -1 & 0 & 0 \\ 0 & 2 & 0 \\ 0 & 0 & 3 \end{bmatrix}$$

ಅದಿಶ ಮಾತೃಕೆ: ಒಂದು ಕರ್ಣ ಮಾತೃಕೆಯಲ್ಲಿ ಕರ್ಣದ ಎಲ್ಲ ಅಂಶಗಳು ಸಮವಾಗಿದ್ದರೆ ಆ ಮಾತೃಕೆಯನ್ನು ಅದಿಶ ಮಾತೃಕೆ ಎನ್ನುವರು.

ಉದಾಹರಣೆಗಾಗಿ: $$C = \begin{bmatrix} \sqrt{3} & 0 & 0 \\ 0 & \sqrt{3} & 0 \\ 0 & 0 & \sqrt{3} \end{bmatrix}$$

ಅನನ್ಯತಾ ಮಾತೃಕೆ: ಒಂದು ವರ್ಗ ಮಾತೃಕೆಯಲ್ಲಿ ಕರ್ಣದಲ್ಲಿನ ಅಂಶಗಳೆಲ್ಲವು 1 ಇದ್ದು ಉಳಿದೆಲ್ಲ ಅಂಶಗಳು ಸೊನ್ನೆಯಾಗಿದ್ದರೆ ಆ ಮಾತೃಕೆಯನ್ನು ಅನನ್ಯತಾ ಮಾತೃಕೆ ಎನ್ನುವರು. n ದರ್ಜೆಯ ಅನನ್ಯತಾ ಮಾತೃಕೆಯನ್ನು 1n ಎಂದು ಸೂಚಿಸುತ್ತೇವೆ.


$$[1] \quad \begin{bmatrix} 1 & 0 \\ 0 & 1 \end{bmatrix} \quad \begin{bmatrix} 1 & 0 & 0 \\ 0 & 1 & 0 \\ 0 & 0 & 1 \end{bmatrix}$$

ಇದು ಕ್ರಮವಾಗಿ 1, 2 ಮತ್ತು 3ನೇ ದರ್ಜೆಯ ಅನನ್ಯತಾ ಮಾತೃಕೆಗಳಾಗಿವೆ.

ಶೂನ್ಯ ಮಾತೃಕೆ: ಯಾವುದೇ ಮಾತೃಕೆಯಲ್ಲಿ ಅದರ ಎಲ್ಲಾ ಅಂಶಗಳು ಸೊನ್ನೆಯಾಗಿದ್ದರೆ ಅದನ್ನು ಶೂನ್ಯ ಮಾತೃಕೆ ಎನ್ನುವರು.

ಮುಂದುವರಿಯುವುದು..

(ಪಾಠಗಳ ಸಂಯೋಜನೆ: ಆಕಾಶ್ ಇನ್‌ಸ್ಟಿಟ್ಯೂಟ್, ಬೆಂಗಳೂರು)



ಸುಭಾಷಿತ

ಮಕ್ಕಳು ವಿಶಿಷ್ಟವಾಗಿ ಇರಲು ಪ್ರಯತ್ನಿಸುತ್ತಿದ್ದರೆ, ಅವರು ಇತರರಂತೆಯೇ ಕಾಣುವಂತೆ ಮಾಡಲು ಅವರ ಸುತ್ತಮುತ್ತಲಿನ ಪ್ರಪಂಚ ಎಲ್ಲ ರೀತಿಯಲ್ಲೂ ಪ್ರಯತ್ನ ನಡೆಸುತ್ತಿರುತ್ತದೆ.

-ಎ.ಪಿ.ಜೆ. ಅಬ್ದುಲ್ ಕಲಾಂ

‘ಸುಮಾರ್ಗ’ ಯೋಜನೆ: ಅನುದಾನ ಹಂಚಿಕೆಯಲ್ಲಿ ಭೇದಭಾವ ಸಲ್ಲದು

ಗ್ರಾಮೀಣ ಸಂಪರ್ಕ ರಸ್ತೆಗಳನ್ನು ಅಭಿವೃದ್ಧಿಪಡಿಸಲು ರಾಜ್ಯ ಸರ್ಕಾರ ರೂಪಿಸಿರುವ ‘ಸುಮಾರ್ಗ’ ಯೋಜನೆಯ ಅನುದಾನ ಹಂಚಿಕೆಯು ಕೆಲವು ಶಾಸಕರ ಅಸಮಾಧಾನಕ್ಕೆ ಕಾರಣವಾಗಿದೆ. ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಮುಖೇನ ಅನುಷ್ಠಾನವಾಗಬೇಕಾಗಿದ್ದ ಯೋಜನೆಯನ್ನು ಮುಖ್ಯಮಂತ್ರಿಯವರ ಕಚೇರಿ ತನ್ನ ಸುಪರ್ದಿಗೆ ತೆಗೆದುಕೊಳ್ಳಲು ಕಾರಣವೇನು? ಕಾರಣ ಏನೇ ಆಗಿರಲಿ, ಹಾಗೆ ಮಾಡಿದ ಬಳಿಕ ಅನುದಾನ ಹಂಚಿಕೆಯು ಅನುಮಾನಕ್ಕೆ ಅವಕಾಶ ಇಲ್ಲದ ರೀತಿಯಲ್ಲಿ ಆಗಬೇಕಾಗಿತ್ತು. ಹಾಗೆ ಆಗಿಲ್ಲ ಎಂಬುದೇ ಶಾಸಕರ ಅಸಮಾಧಾನಕ್ಕೆ ಕಾರಣ. ಸರ್ಕಾರವನ್ನು ಮುನ್ನಡೆಸುವ ಹೊಣೆ ಹೊತ್ತಿರುವ ಮುಖ್ಯಮಂತ್ರಿ ಅಥವಾ ಸಚಿವರು ಪಕ್ಷಪಾತಿಯಾಗಿ ರಬಾರದು; ಜನ ಕಲ್ಯಾಣ ಮತ್ತು ರಾಜ್ಯದ ಸಮಗ್ರ ಅಭಿವೃದ್ಧಿಯೇ ಅವರ ಗುರಿಯಾಗಿರಬೇಕು. ಕೇಂದ್ರ ಸರ್ಕಾರದ ಪ್ರಧಾನಮಂತ್ರಿ ಗ್ರಾಮ ಸಡಕ್ ಯೋಜನೆ ಮಾದರಿಯಲ್ಲಿಯೇ 2010ರಲ್ಲಿ ಕರ್ನಾಟಕ ಸರ್ಕಾರ ‘ನಮ್ಮ ಗ್ರಾಮ ನಮ್ಮ ರಸ್ತೆ’ ಯೋಜನೆ ಅನುಷ್ಠಾನಕ್ಕೆ ತಂದಿತ್ತು. ಅದರ ಅವಧಿ 2020ರ ಏಪ್ರಿಲ್‌ನಲ್ಲಿ ಮುಕ್ತಾಯವಾಗಿದೆ. ಈ ಯೋಜನೆ ಬದಲಿಗೆ ‘ಗ್ರಾಮೀಣ ಸುಮಾರ್ಗ ಯೋಜನೆ’ ಜಾರಿಗೆ ತರಲಾಗುವುದು ಎಂದು ಹಣಕಾಸು ಸಚಿವರೂ ಆಗಿರುವ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಕಳೆದ ಬಜೆಟ್‌ನಲ್ಲಿ ಘೋಷಿಸಿದ್ದರು. ‘ಮುಂದಿನ ಐದು ವರ್ಷಗಳಲ್ಲಿ ರಾಜ್ಯದ 20 ಸಾವಿರ ಕಿ.ಮೀ. ಉದ್ದದ ಗ್ರಾಮೀಣ ರಸ್ತೆಯನ್ನು ಅಭಿವೃದ್ಧಿ ಪಡಿಸಲಾಗುವುದು. ಈ ವರ್ಷ ₹ 780 ಕೋಟಿ ಅನುದಾನ ನೀಡಲಾಗುವುದು’ ಎಂದೂ ಪ್ರಕಟಿಸಿದ್ದರು. 2018-19ರ ಅಂದಾಜಿನ ಪ್ರಕಾರ, ಕರ್ನಾಟಕದಲ್ಲಿ 1,90,862 ಕಿ.ಮೀ. ಉದ್ದದಷ್ಟು ಗ್ರಾಮೀಣ ಸಂಪರ್ಕ ರಸ್ತೆಗಳಿವೆ. ಪ್ರಧಾನಮಂತ್ರಿ ಗ್ರಾಮ ಸಡಕ್ ಯೋಜನೆಯಡಿ ₹4,775 ಕೋಟಿ ವೆಚ್ಚ ಮಾಡಿ 18,549 ಕಿ.ಮೀ. ಹಾಗೂ ‘ನಮ್ಮ ಗ್ರಾಮ ನಮ್ಮ ರಸ್ತೆ’ ಯೋಜನೆಯಡಿ ₹6,567 ಕೋಟಿ ವೆಚ್ಚ ಮಾಡಿ, 14,070 ಕಿ.ಮೀ. ರಸ್ತೆಯನ್ನು ಅಭಿವೃದ್ಧಿಪಡಿಸಲಾಗಿದೆ ಎಂದು ಕರ್ನಾಟಕ ಆರ್ಥಿಕ ಸಮೀಕ್ಷೆ ಹೇಳಿದೆ. ಈ ಎರಡು ಯೋಜನೆಗಳಡಿ 32 ಸಾವಿರ ಕಿ.ಮೀ. ಉದ್ದದ ರಸ್ತೆ ಅಭಿವೃದ್ಧಿಯಾಗಿದೆ ಎಂದಿಟ್ಟುಕೊಂಡರೂ ಇನ್ನೂ 1.58 ಲಕ್ಷ ಕಿ.ಮೀ. ಉದ್ದದ ಗ್ರಾಮೀಣ ರಸ್ತೆಗಳು ಅಭಿವೃದ್ಧಿಗೆ ಕಾಯುತ್ತಿವೆ. ರಸ್ತೆಗೆ ವೆಚ್ಚ ಮಾಡುವ ಹಣದಲ್ಲಿ ಅರ್ಧಭಾಗವು ಅಧಿಕಾರಿಗಳು, ಗುತ್ತಿಗೆದಾರರು, ಜನಪ್ರತಿನಿಧಿಗಳ ಪಾಲಾಗುತ್ತದೆ ಎಂಬ ಆರೋಪ ಹಿಂದಿನಿಂದಲೂ ಇದೆ. ನಮ್ಮ ನಾಡಿನ ರಸ್ತೆಗಳ ಸ್ಥಿತಿ ಈ ಆರೋಪಕ್ಕೆ ಪುಷ್ಟಿ ನೀಡುವಂತೆಯೇ ಇದೆ. ಗ್ರಾಮೀಣ ರಸ್ತೆಗಳ ಅಭಿವೃದ್ಧಿಗೆ ಬಜೆಟ್‌ನಲ್ಲಿ ₹ 780 ಕೋಟಿ ಅನುದಾನ ಘೋಷಿಸಿದ್ದರೂ, 10 ತಿಂಗಳವರೆಗೂ ಈ ಯೋಜನೆಯ ಪ್ರಸ್ತಾಪವೇ ಇರಲಿಲ್ಲ. ‘ಅನುದಾನ ನೀಡಿಲ್ಲ, ಶಾಸಕರ ಅಹವಾಲುಗಳನ್ನು ಮುಖ್ಯಮಂತ್ರಿ ಮತ್ತು ಸಚಿವರು ಕೇಳುತ್ತಿಲ್ಲ, ‘ಪರ್ಸಂಟೇಜ್’ ಇಲ್ಲದೆ ಯಾವ ಕೆಲಸವೂ ಆಗುತ್ತಿಲ್ಲ’ ಎಂದು ಶಾಸಕಾಂಗ ಪಕ್ಷದ ಸಭೆಯಲ್ಲಿ ಆಡಳಿತಾರೂಢ ಪಕ್ಷದ ಶಾಸಕರೇ ಆರೋಪಿಸಿದ್ದರು ಎಂದು ವರದಿಯಾಗಿತ್ತು. ಇಂತಹ ಸನ್ನಿವೇಶದಲ್ಲಿ ಮುಖ್ಯಮಂತ್ರಿ ಕಚೇರಿಯೇ ಅನುದಾನ ಹಂಚಿಕೆ ಮಾಡಲು ಮುಂದಾಗಿದೆ. ಯಾರು ತಮ್ಮ ವಿರುದ್ಧ ಮಾತನಾಡಿದ್ದಾರೋ ಸಚಿವ ಸ್ಥಾನ ಸಿಗಲಿಲ್ಲವೆಂದು ಸಿಟ್ಟನ್ನು ಹೊರಹಾಕುತ್ತಿದ್ದಾರೋ ಅಂತಹವರನ್ನು ಓಲೈಸಿಕೊಳ್ಳಲು ‘ಸುಮಾರ್ಗ’ವನ್ನು ಮುಖ್ಯಮಂತ್ರಿ ಕಚೇರಿ ಬಳಸಿಕೊಂಡಿದೆ ಎಂಬ ಟೀಕೆಯನ್ನು ಆಡಳಿತ ಪಕ್ಷದ ಶಾಸಕರೇ ಮಾಡಿದ್ದಾರೆ. ಅನುದಾನ ಪಡೆದ 81 ವಿಧಾನಸಭಾ ಕ್ಷೇತ್ರಗಳಲ್ಲಿ ಬಿಜೆಪಿ ಶಾಸಕರು ಪ್ರತಿನಿಧಿಸುವ 32 ಕ್ಷೇತ್ರಗಳಿಗೆ ಹೆಚ್ಚು ಅನುದಾನ ಹಂಚಿಕೆಯಾಗಿದೆ. ಒಂದು ಕ್ಷೇತ್ರಕ್ಕೆ ಗರಿಷ್ಠ ₹ 23 ಕೋಟಿವರೆಗೂ ಹಂಚಿಕೆ ಆಗಿದೆ. ಕಾಂಗ್ರೆಸ್‌ನ 30, ಜೆಡಿಎಸ್‌ನ 18 ಹಾಗೂ ಬಿಎಸ್‌ಪಿಯ ಒಬ್ಬ ಶಾಸಕರು ಪ್ರತಿನಿಧಿಸುವ ಕ್ಷೇತ್ರಗಳಿಗೆ ತಲಾ ₹ 5 ಕೋಟಿ ದೊರೆತಿದೆ. ಈ ರೀತಿಯ ಹಂಚಿಕೆಗೆ ಯಾವ ಮಾನದಂಡ ಅನುಸರಿಸಲಾಗಿದೆ ಎಂಬುದನ್ನು ಸರ್ಕಾರ ಸ್ಪಷ್ಟಪಡಿಸಿಲ್ಲ. ಇದು ತಕರಾರಿಗೆ ಕಾರಣವಾಗಿರುವ ಅಂಶ.

ನಿರ್ದಿಷ್ಟ ವಿಧಾನಸಭಾ ಕ್ಷೇತ್ರದ ರಸ್ತೆ ಸ್ಥಿತಿಗತಿ, ಹಿಂದುಳಿದಿರುವಿಕೆ, ಹಿಂದಿನ ವರ್ಷಗಳಲ್ಲಿ ನೀಡಿದ ಅನುದಾನ, ಮಳೆಯಿಂದಾಗಿರುವ ಹಾನಿ ಮುಂತಾದ ಅಂಶಗಳನ್ನು ಕೂಲಂಕಷವಾಗಿ ವಿಶ್ಲೇಷಿಸಿ ಅಗತ್ಯಾನುಸಾರ ಅನುದಾನವನ್ನು ಹಂಚಿಕೆ ಮಾಡಬೇಕು. ಅದಕ್ಕೆ ಮಾನದಂಡ ಇರಬೇಕು. ಅದನ್ನು ಬಿಟ್ಟು, ತಮಗೆ ಬೇಕಾದವರಿಗೆ ಹಂಚಲು ಇದು ಸ್ವಂತದ ದುಡ್ಡಲ್ಲ. ರಾಜ್ಯದ ಜನರಿಂದ ತೆರಿಗೆ ರೂಪದಲ್ಲಿ ಸಂಗ್ರಹಿಸಿದ ಹಣವನ್ನು ಯಾರನ್ನೋ ಓಲೈಸಲು ಹಂಚುವುದು ಜನತಂತ್ರ ವಿರೋಧಿಯಾದ ಕ್ರಮ. ಸರ್ಕಾರದ ಸಂಪನ್ಮೂಲವು ರಾಜ್ಯದ ಎಲ್ಲರಿಗೂ ಸೌಕರ್ಯ ಕಲ್ಪಿಸಲು ಹಾಗೂ ಪ್ರಾದೇಶಿಕ ಅಸಮತೋಲನ ನಿವಾರಿಸಲು ಸದ್ಬಳಕೆಯಾಗಬೇಕು. ಈ ಸಾಂವಿಧಾನಿಕ ಆಶಯವನ್ನು ಬದಿಗಿಟ್ಟು, ಕ್ಷಣಿಕ ರಾಜಕೀಯ ಪ್ರಯೋಜನಕ್ಕಾಗಿ ಬೇಕಾಬಿಟ್ಟಿಯಾಗಿ ಅನುದಾನ ಹಂಚಿಕೆ ಮಾಡುವುದು ಒಪ್ಪುವಂತಹ ನಡೆಯಲ್ಲ. ಯೋಜನೆಗಳಿಗೆ ಮೀಸಲಿಟ್ಟ ಅನುದಾನವನ್ನು ವಿವೇಚನೆಯಿಂದ ಬಳಸಿದಾಗ ಮಾತ್ರ ಅವುಗಳ ಗುರಿ ಈಡೇರುತ್ತದೆ. ಅಭಿವೃದ್ಧಿಯ ಆಶಯವೂ ನೆರವೇರುತ್ತದೆ.



ಅನುದಾನ ಹಂಚಿಕೆಗೆ ಮಾನದಂಡ ಆಧಾರವಾಗಿರಲಿ ಮತ್ತು ಹಂಚಿಕೆ ಪ್ರಕ್ರಿಯೆ ಪಾರದರ್ಶಕವಾಗಿ ನಡೆಯಲಿ

ದಿನದ ಟ್ವೀಟ್

ಅಂತಹ ದಿನ ಬಾರದಿರಲಿ



ಇತ್ತೀಚೆಗಷ್ಟೇ ಹಿಮಕರಡಿ ದಿನ (ಪೋಲಾರ್ ಬೇರ್ ಡೇ) ಆಚರಿಸಿದ್ದೇವೆ. ಈ ಪ್ರಾಣಿಗಳನ್ನು ಆಲಂಕಾರಿಕ ಹೆಸರುಗಳಿಂದ ಕರೆದು ಸಂಭ್ರಮಿಸುವ ಬದಲಿಗೆ, ಅವು ಕ್ರಮೇಣ ತಮ್ಮ ನೆಲೆಗಳು ಮತ್ತು ಬದುಕನ್ನು ಕಳೆದುಕೊಳ್ಳುತ್ತಿರುವ ವಿಷಯವನ್ನು ಅರ್ಥಮಾಡಿಕೊಳ್ಳಲು ಪ್ರಯತ್ನಿಸಿ. ನಮ್ಮ ಮುಂದಿನ ಪೀಳಿಗೆಗಳು ಅವುಗಳನ್ನು ಕೇವಲ ಟೆಡ್ಡಿ ಗೊಂಬೆಗಳನ್ನಾಗಿ ಕಾಣುವ ದಿನ ಬರಬಹುದು.

ಸುಧಾ ರಾಮನ್, ಐಎಫ್‌ಎಸ್ ಅಧಿಕಾರಿ

25 ವರ್ಷಗಳ ಹಿಂದೆ

ಶುಕ್ರವಾರ, 1-3- 1996

• 11 ರಾಜಕಾರಣಿಗಳ ಬಂಧನಕ್ಕೆ ವಾರಂಟ್

ನವದೆಹಲಿ, ಫೆ. 29 (ಯುಎನ್‌ಐ, ಪಿಟಿಐ)– ಹವಾಲ ಹಗರಣದಲ್ಲಿ ಭಾಗಿಯಾಗಿದ್ದಾರೆನ್ನಲಾದ ಪ್ರಭಾವಿ ರಾಜಕಾರಣಿಗಳನ್ನು ಬಂಧಿಸಲು ಸಿಬಿಐ ಯಾವುದೇ ಕ್ರಮ ಕೈಗೊಳ್ಳದಿರುವುದರ ಬಗ್ಗೆ ತೀವ್ರ ಅಸಮಾಧಾನ ವ್ಯಕ್ತಪಡಿಸಿರುವ ವಿಶೇಷ ಹವಾಲ ನ್ಯಾಯಾಲಯ, ಇಂದು 11 ರಾಜಕಾರಣಿಗಳ ಬಂಧನಕ್ಕೆ ಜಾಮೀನು ರಹಿತ ವಾರಂಟ್ ಜಾರಿಗೊಳಿಸಿದೆ. ಈ ನಡುವೆ, ಭಾರತೀಯ ಜನತಾ ಪಕ್ಷದ ಅಧ್ಯಕ್ಷ ಎಲ್.ಕೆ.ಅಡ್ವಾಣಿ ಅವರಿಗೆ ದೆಹಲಿ ಹೈಕೋರ್ಟ್ ನಿರೀಕ್ಷಣಾ ಜಾಮೀನು ನೀಡಿದೆ.

ಪ್ರಭಾವಿ ರಾಜಕಾರಣಿಗಳ ಬಂಧನಕ್ಕೆ ಸಂಬಂಧಿಸಿದಂತೆ ಬೇರೆ ಮಾನದಂಡ ನೀಡಬೇಕೆಂಬ ಸಿಬಿಐ ಮನವಿಯನ್ನು ತಳ್ಳಿಹಾಕಿದ ನ್ಯಾಯಾಲಯ, ಕಾನೂನು ಎಲ್ಲರಿಗೂ ಒಂದೇ ಎಂದು ಸ್ಪಷ್ಟಪಡಿಸಿದೆ.

• ಜೂನ್ 1ರಿಂದ ರಾಜ್ಯದಾದ್ಯಂತ ಸಾರಾಯಿ ನಿಷೇಧ

ಬೆಂಗಳೂರು, ಫೆ. 29– ಸಂಪೂರ್ಣ ಪಾನ ನಿಷೇಧವನ್ನು ಜಾರಿಗೆ ತರುವ ಮೊದಲ ಹೆಜ್ಜೆಯಾಗಿ ಈ ವರ್ಷದ ಜೂನ್ 1ರಿಂದ ರಾಜ್ಯದಲ್ಲಿ ಸಾರಾಯಿ ಮಾರಾಟವನ್ನು ಸರ್ಕಾರ ನಿಷೇಧಿಸಲಿದೆ ಎಂದು ಮುಖ್ಯಮಂತ್ರಿ ಎಚ್.ಡಿ.ದೇವೇಗೌಡರು ಇಂದು ವಿಧಾನ ಪರಿಷತ್ತಿನಲ್ಲಿ ಪ್ರಕಟಿಸಿದರು.

50 ವರ್ಷಗಳ ಹಿಂದೆ

ಸೋಮವಾರ, 1-3-1971

• 7 ರಾಜ್ಯಗಳ 101 ಕ್ಷೇತ್ರಗಳಲ್ಲಿ ಇಂದು ಮತದಾನ ಆರಂಭ

ನವದೆಹಲಿ, ಫೆ. 28– ನಿಗದಿಯಾದ ಕಾಲಕ್ಕಿಂತ ಒಂದು ವರ್ಷ ಮೊದಲೇ ನಡೆಯುವಂತೆ ಆಜ್ಞೆ ಮಾಡಿರುವ ಲೋಕಸಭೆಯ ಐದನೇ ಸಾರ್ವತ್ರಿಕ ಚುನಾವಣೆಯ ಮೊದಲ ಹಂತದ ಮತದಾನ ರಾಷ್ಟ್ರದ ಏಳು ರಾಜ್ಯಗಳ ಹಲವು ಭಾಗಗಳಲ್ಲಿ ನಾಳೆ ಆರಂಭವಾಗಲಿದೆ.

ಅಸ್ಸಾಂ, ಬಿಹಾರ, ಗುಜರಾತ್, ಮಧ್ಯಪ್ರದೇಶ, ಮಹಾರಾಷ್ಟ್ರ, ತಮಿಳುನಾಡು ಮತ್ತು ಉತ್ತರ ಪ್ರದೇಶ ರಾಜ್ಯಗಳಲ್ಲಿ, ಅಂಡಮಾನ್ ಮತ್ತು ನಿಕೊಬಾರ್ ದ್ವೀಪಗಳಲ್ಲಿ ನಾಳೆ ಮತದಾನ ಸಂಪೂರ್ಣವಾಗಿ ಮುಕ್ತಾಯವಾಗಲಿದೆ.

• ವಿದ್ಯಾರ್ಥಿನಿಲಯದಲ್ಲಿ ಭಾರಿ ಶಸ್ತ್ರಾಸ್ತ್ರ ಸಂಗ್ರಹ

ಕಲ್ಕತ್ತ, ಫೆ. 28– ದಕ್ಷಿಣ ಕಲ್ಕತ್ತದ ಜಾಧವಪುರ ವಿಶ್ವವಿದ್ಯಾನಿಲಯದ ವಿದ್ಯಾರ್ಥಿನಿಲಯದಲ್ಲಿ ‘ಶಸ್ತ್ರಾಸ್ತ್ರ ಸಂಗ್ರಹ’ವಿರುವುದನ್ನು ಇಂದು ಪೊಲೀಸರು ಪತ್ತೆ ಹಚ್ಚಿದರು.

ನಕ್ಸಲೀಯರೆಂದು ಶಂಕಿಸಲಾದ ವಿದ್ಯಾರ್ಥಿನಿಲಯದವರು ಹಾಗೂ ಪೊಲೀಸರ ನಡುವೆ ಗುಂಡಿನ ವಿನಿಮಯ ನಡೆಯಿತು. ಗುಂಡಿನ ದಾಳಿಯಲ್ಲಿ 7 ಮಂದಿ ಪೊಲೀಸ್ ಅಧಿಕಾರಿಗಳು ಹಾಗೂ ಇತರರು ಗಾಯಗೊಂಡರು.

‘ಮೊದಲು ರಾಮ, ನಂತರ ಬಾಮ’ ಎನ್ನುತ್ತಿವೆ ಸಿಪಿಎಂ ಬಣಗಳು

ಮಮತಾ: ಕೋಮುವಾದ, ಕಮ್ಯುನಿಸಂ ದ್ವೇಷಿ



ವಿಶ್ಲೇಷಣೆ

ಸುಧೀಂದ್ರ ಕುಲಕರ್ಣಿ

ಈ ಪ್ರಸಂಗ ನಡೆದಿದ್ದು ಇಪ್ಪತ್ತು ವರ್ಷಗಳ ಹಿಂದೆ, ಅಟಲ್ ಬಿಹಾರಿ ವಾಜಪೇಯಿ ಅವರು ಪ್ರಧಾನಿಯಾಗಿದ್ದಾಗ ನಾನು ಪ್ರಧಾನಮಂತ್ರಿಯವರ ಕಚೇರಿಯಲ್ಲಿ ಕರ್ತವ್ಯದಲ್ಲಿದ್ದಾಗ. ಅಂದಿನ ಎನ್‌ಡಿಎ ಮೈತ್ರಿಕೂಟದ ಮುಖ್ಯ ಪಾಲುದಾರ ಆಗಿದ್ದ ಟಿಎಂಸಿ ಜೊತೆ ಸಮನ್ವಯ ಸಾಧಿಸಲು ನಾನು ವಾಜಪೇಯಿ ಅವರ ಮುಖ್ಯ ದೂತ ಆಗಿದ್ದೆ. ಕೆಲಸದ ಭಾಗವಾಗಿ ಕೋಲ್ಕತ್ತಕ್ಕೆ ಆಗಾಗ ಹೋಗಿ-ಬರುತ್ತಿದ್ದೆ.

‘ಕೋಲ್ಕತ್ತದಲ್ಲಿನ ಕಾಳಿ ಮಂದಿರಕ್ಕೆ ಹೋಗಿದ್ದೀರಾ?’ ಎಂದು ಅವರು ನನ್ನಲ್ಲಿ ಕೇಳಿದರು. ‘ಇಲ್ಲ’ ಎಂದೆ. ‘ಕಾಳಿ ದರ್ಶನ ಇಲ್ಲದೆ ವಾಪಸ್ ಹೇಗೆ ಹೋಗುತ್ತೀರಿ? ನಾನು ನಿಮ್ಮನ್ನು ನಾಳೆ ಅಲ್ಲಿಗೆ ಕರೆದೊಯ್ಯುವೆ’ ಎಂದು ಅವರು ತಿಳಿಸಿದರು. ಆ ಸಂದರ್ಭದಲ್ಲಿ ದೇಶದ ರೈಲ್ವೆ ಸಚಿವೆ ಆಗಿದ್ದ ಅವರು ಮಾರನೆಯ ದಿನ ಬೆಳಿಗ್ಗೆ 4 ಗಂಟೆಗೆ ನನ್ನನ್ನು ಕಾಳಿ ಮಂದಿರಕ್ಕೆ ಕರೆದೊಯ್ದರು. ‘ಕಾಳಿ ಮಾತೆಗೆ ಪೂಜೆ ಸಲ್ಲಿಸಲು ಇದು ಪ್ರಶಸ್ತ ಸಮಯ’ ಎಂದು ಹೇಳಿದರು. ಪಶ್ಚಿಮ ಬಂಗಾಳದ ಬಹುದೊಡ್ಡ ನಾಯಕಿಯೂ ಆಗಿರುವ ಅವರ ಹೆಸರು ಮಮತಾ ಬ್ಯಾನರ್ಜಿ. ಪಶ್ಚಿಮ ಬಂಗಾಳದ ವಿಧಾನಸಭಾ ಚುನಾವಣೆಯ ಪ್ರಚಾರದಲ್ಲಿ ಇದೇ ಮಮತಾ ಅವರನ್ನು ವಾಜಪೇಯಿ ಅವರ ಪಕ್ಷವೇ ಹಿಂದೂ ವಿರೋಧಿ ಎಂದು ಕರೆಯುತ್ತಿದೆ.

ಬಿಜೆಪಿಯಲ್ಲಿದ್ದ ಅವಧಿಯಲ್ಲಿ (2012ರಲ್ಲಿ ಬಿಜೆಪಿ ತೊರೆದೆ) ನಾನು ಬೇರೆ ಯಾವ ನಾಯಕರಿಗಿಂತಲೂ ಹೆಚ್ಚು ನಿಕಟವಾಗಿ ಮಮತಾ ಜೊತೆ ಒಡನಾಡಿದ್ದೇನೆ. ಆಕೆ ಶ್ರದ್ಧಾವಂತ ಹಿಂದೂ, ಬಂಗಾಳ ಕಂಡ ಅತ್ಯುನ್ನತ ಆಧ್ಯಾತ್ಮಿಕ ನಾಯಕರಾದ ರಾಮಕೃಷ್ಣ ಪರಮಹಂಸ ಮತ್ತು ಸ್ವಾಮಿ ವಿವೇಕಾನಂದರ ಪರಂಪರೆಯಲ್ಲಿ ಬೆಳೆದಿರುವವರು ಎಂಬ ಮಾತನ್ನು ಅಳುಕಿಲ್ಲದೆ ಹೇಳಬಲ್ಲೆ. ಅವಿಭಜಿತ ಬಂಗಾಳದ ಅತ್ಯುನ್ನತ ಕವಿಗಳಾದ ಗುರುದೇವ ರವೀಂದ್ರನಾಥ ಟ್ಯಾಗೋರ್ ಮತ್ತು ವಿದ್ರೋಹಿ ಕವಿ ಕಾಜಿ ನಜರುಲ್ ಇಸ್ಲಾಂ ಅವರ ಸರ್ವಧರ್ಮ ಸಮನ್ವಯದ, ಧರ್ಮನಿರಪೇಕ್ಷ ಪರಂಪರೆಯವರು ಕೂಡ ಹೌದು ಮಮತಾ.

ಬಂಗಾಳದ ರಾಜಕೀಯ ವಾತಾವರಣವನ್ನು ತಿಳಿಯಲು ಇಲ್ಲಿಗೆ ಬಂದಿರುವ ಕಾರಣ ನಾನು ಮಮತಾ ಅವರ ಬಗ್ಗೆ ಬರೆಯಲು ತೀರ್ಮಾನಿಸಿದೆ. ಇದು ನನ್ನ ಅಂದಾಜು: ಮುಂದಿನ ಎರಡು ತಿಂಗಳುಗಳಲ್ಲಿ ಊಹಿಸಲಾಗದ್ದು ಏನೂ ನಡೆಯದಿದ್ದರೆ ಜನ ಮಮತಾ ಅವರನ್ನು ಸತತ ಮೂರನೆಯ ಬಾರಿಗೆ ಅಧಿಕಾರಕ್ಕೆ ತರುತ್ತಾರೆ. ಆಕ್ರಮಣಕಾರಿ ಅಭಿಯಾನದ ಕಾರಣದಿಂದಾಗಿ ಬಿಜೆಪಿ ತನ್ನ ಸಂಖ್ಯಾಬಲ ಹೆಚ್ಚಿಸಿಕೊಳ್ಳಲಿದೆ.

ಬಂಗಾಳದ ಕೋಟೆಯನ್ನು ಒಡೆದು ಮುನ್ನುಗ್ಗುವ ಬಯಕೆ ಬಹುಕಾಲದಿಂದ ಬಿಜೆಪಿಯಲ್ಲಿದೆ. ಅಷ್ಟಕ್ಕೂ, ಭಾರತೀಯ ಜನಸಂಘದ (ಬಿಜೆಪಿಯ ಹಿಂದಿನ ಅವತಾರ) ಸಂಸ್ಥಾಪಕ ಡಾ. ಶ್ಯಾಮಪ್ರಸಾದ್ ಮುಖರ್ಜಿ ಅವರು ಜನಿಸಿದ್ದು ಬಂಗಾಳದಲ್ಲಿ. 2014ರ ಲೋಕಸಭಾ ಚುನಾವಣೆಯಲ್ಲಿ ಬಂಗಾಳದಲ್ಲಿ ಎರಡು ಸ್ಥಾನ ಗಳಿಸಿದ್ದ ಬಿಜೆಪಿ 2019ರಲ್ಲಿ 18 ಸ್ಥಾನ ಪಡೆಯಿತು. ಆಗ ಬಂಗಾಳದಲ್ಲಿ ತಾನು ಸರ್ಕಾರ ರಚಿಸಬಹುದು ಎಂಬ ವಿಶ್ವಾಸ ಬಿಜೆಪಿಯಲ್ಲಿ ಹೆಚ್ಚಿತು. ಬಿಜೆಪಿಯ ಮತಗಳಿಕೆ ಪ್ರಮಾಣ (ಶೇ 40ರಷ್ಟು) ಟಿಎಂಸಿಯ (ಶೇ 43ರಷ್ಟು) ಮತಗಳಿಕೆ ಪ್ರಮಾಣಕ್ಕೆ ಹತ್ತಿರವಾಗಿತ್ತು. ಇದಾದ ನಂತರ, ಮಮತಾ ಅವರನ್ನು ಅಧಿಕಾರದಿಂದ ಇಳಿಸಲು ನರೇಂದ್ರ ಮೋದಿ ಮತ್ತು ಅಮಿತ್ ಶಾ ಅವರು ತಮ್ಮ ವೈಯಕ್ತಿಕ ಪ್ರತಿಷ್ಠೆ ಪಣಕ್ಕಿಟ್ಟರು.

ಆದರೆ, ನಾಲ್ಕು ಕಾರಣಗಳಿಂದಾಗಿ ಅವರು ಇದರಲ್ಲಿ ಯಶಸ್ಸು ಕಾಣಲಾರರು. ಮೊದಲನೆಯದು, ಬಂಗಾಳದ ಜನ ಕೋಲ್ಕತ್ತದಲ್ಲಿ ಸರ್ಕಾರದ ಮುಖ್ಯಸ್ಥರು ಯಾರಾಗಬೇಕು ಎಂಬುದನ್ನು ತೀರ್ಮಾನಿಸಲಿದ್ದಾರೆಯೇ ವಿನಾ ಭಾರತದ ಪ್ರಧಾನಿ ಯಾರಾಗಬೇಕು ಎಂಬುದನ್ನಲ್ಲ. ವಿಧಾನಸಭೆ ಹಾಗೂ ಲೋಕಸಭೆಯ ನಡುವಿನ ವ್ಯತ್ಯಾಸವನ್ನು ಗುರುತಿಸುವಷ್ಟು ಮತದಾರರು ಪ್ರಬುದ್ಧರಿದ್ದಾರೆ. ಮಮತಾ ಅವರ ಜನಪ್ರಿಯತೆ, ಚರಿಷ್ಮಾದ ಹತ್ತಿರಕ್ಕೆ ಬರುವ ನಾಯಕರು ಬಿಜೆಪಿಗೆ ಬಂಗಾಳದಲ್ಲಿ ಇಲ್ಲ. ಮಮತಾ ಅವರ ಸರಳತೆ, ವೈಯಕ್ತಿಕವಾಗಿ ಭ್ರಷ್ಟಾಚಾರದಿಂದ ದೂರ ಇರುವುದು, ಸಾಮಾನ್ಯರ ನಡುವೆ ದಣಿವರಿಯದೆ ದುಡಿಯುವ ಅವರ ಗುಣವನ್ನು ಟೀಕಾಕಾರರೂ ಮೆಚ್ಚುತ್ತಾರೆ.

ಎರಡನೆಯದು, ಶೇ 27ರಷ್ಟು ಮುಸ್ಲಿಂ ಜನಸಂಖ್ಯೆಯನ್ನು ಹೊಂದಿರುವ ರಾಜ್ಯದಲ್ಲಿ ಹಿಂದೂ ಮತಬ್ಯಾಂಕ್ ಗಟ್ಟಿಗೊಳಿಸುವ ಹಿಂದುತ್ವದ ಅಜೆಂಡಾ ಮೇಲೆ ಬಿಜೆಪಿಯ ಅಭಿಯಾನ ಕೇಂದ್ರೀಕೃತ ಆಗಿದೆ. ಹಾಗಾಗಿ, ‘ಜೈ ಶ್ರೀರಾಮ್’ ಘೋಷಣೆಯನ್ನು ಬಿಜೆಪಿ ತನ್ನ ಅಭಿಯಾನದ ಮುಖ್ಯ ಘೋಷಣೆಯಾಗಿಸಿಕೊಂಡಿದೆ. ಟಿಎಂಸಿ ಕುರಿತ ವಿರೋಧದ ಕಾರಣದಿಂದಾಗಿ ಸಿಪಿಎಂನ ಕೆಲವು ಬಣಗಳು ಬಿಜೆಪಿಯನ್ನು ಬೆಂಬಲಿಸುತ್ತಿವೆ. ಅವರ ತರ್ಕ ಹೀಗಿದೆ: ‘ಮೊದಲು ರಾಮ, ನಂತರ ಬಾಮ’ (‘ಬಾಮ’ ಅಂದರೆ ಇಲ್ಲಿ ‘ವಾಮ’, ಅಂದರೆ ಎಡಪಂಥ ಎಂಬ ಅರ್ಥವಿದೆ). ‘ಮಮತಾ ಅವರು ಹಿಂದೂ ವಿರೋಧಿ ಹಾಗೂ ಮುಸ್ಲಿಂ ಪರ ಎಂದು ಬಿಂಬಿಸಲು, ಮಮತಾ ನೇತೃತ್ವದ ಸರ್ಕಾರವು ದುರ್ಗಾ ಪೂಜೆ ಮತ್ತು ಸರಸ್ವತಿ ಪೂಜೆಗೆ ರಾಜ್ಯದಲ್ಲಿ ಅವಕಾಶ ಕೊಟ್ಟಿಲ್ಲ ಎಂದು ಅಮಿತ್ ಶಾ ಆರೋಪಿಸುತ್ತಿದ್ದಾರೆ. ಇದು ಸಂಪೂರ್ಣ ಸುಳ್ಳು’ ಎಂದು ಪ್ರೊ. ಸುಗತ ಬೋಸ್ ನನ್ನಲ್ಲಿ ಹೇಳಿದರು. ಬೋಸ್ ಅವರು ಹಾರ್ವರ್ಡ್ ವಿಶ್ವವಿದ್ಯಾಲಯದಲ್ಲಿ ಹೆಸರಾಂತ ಇತಿಹಾಸಕಾರ.

ಅದೇ ರೀತಿ ಮೋದಿ ಅವರು ಈಚೆಗೆ ಒಂದು ರ‍್ಯಾಲಿಯಲ್ಲಿ, ‘ಬಂಕಿಮ ಚಂದ್ರ ಚಟರ್ಜಿ ಅವರು ವಂದೇ ಮಾತರಂ ಗೀತೆ ಬರೆದ ಮನೆ ಈಗ ಶೋಚನೀಯ ಸ್ಥಿತಿಯಲ್ಲಿದೆ’ ಎಂದು ಅಸತ್ಯ ನುಡಿದರು. ಅವರು ಇದನ್ನು ಮಮತಾ ಅವರ ಮುಸ್ಲಿಂ ತುಷ್ಟೀಕರಣ ನೀತಿಗೆ ಉದಾಹರಣೆ ಎಂಬಂತೆ ಹೇಳಿದರು. ಆದರೆ, ಬಂಕಿಮ ಚಂದ್ರ ಅವರ ಮನೆಯನ್ನು ವಸ್ತುಸಂಗ್ರಹಾಲಯವಾಗಿಸಿ, ಅತ್ಯುತ್ತಮ ಸ್ಥಿತಿಯಲ್ಲಿ ಇರಿಸಿಕೊಳ್ಳಲಾಗಿದೆ ಎಂದು ಹೇಳುವ ಚಿತ್ರಗಳನ್ನು ಬಂಗಾಳದ ಪತ್ರಿಕೆಗಳು ಪ್ರಕಟಿಸಿದವು.



ಮೂರನೆಯದು, ಬಿಜೆಪಿಯು ಅಭಿಯಾನದಲ್ಲಿ ಜನರ ಮುಂದೆ ತೋರಿಸುತ್ತಿರುವುದು ಶಾ ಮತ್ತು ಮೋದಿ ಅವರನ್ನು ಮಾತ್ರ. ಬಿಜೆಪಿ ಜಯ ಗಳಿಸಿದರೆ ರಾಜ್ಯವನ್ನು ‘ಹೊರಗಿನವರು ಆಳುತ್ತಾರೆ, ಪ್ರಧಾನಿ ಕಚೇರಿಯಲ್ಲಿ ಹಾಗೂ ಗೃಹ ಸಚಿವಾಲಯದಲ್ಲಿ ಅದರ ರಿಮೋಟ್ ಕಂಟ್ರೋಲ್ ಇರುತ್ತದೆ ಎಂಬ ಭಾವನೆ ಬಂಗಾಳಿಗರಲ್ಲಿ ಬೆಳೆಯುತ್ತಿದೆ. ‘ಇದು ಬಂಗಾಳದ ಹೆಮ್ಮೆಯ ಪ್ರಶ್ನೆ. ಬಂಗಾಳಿ ಜನ ದೆಹಲಿಯ ಜೀತದಾಳುಗಳಾಗಲು ನಾನು ಬಿಡಲಾರೆ’ ಎಂದು ಮಮತಾ ಅವರು ನನ್ನಲ್ಲಿ ಹೇಳಿದರು. ‘ಸಂವಿಧಾನವು ರಾಜ್ಯಗಳಿಗೆ ನೀಡಿರುವ ಅಧಿಕಾರವನ್ನು ಕಿತ್ತುಕೊಂಡು, ತನ್ನಲ್ಲಿ ಅವುಗಳನ್ನೆಲ್ಲ ಇರಿಸಿಕೊಂಡ ಇಂತಹ ಕೇಂದ್ರ ಸರ್ಕಾರ ಸ್ವತಂತ್ರ ಭಾರತದ ಇತಿಹಾಸದಲ್ಲಿ ಹಿಂದೆಲ್ಲೂ ಇರಲಿಲ್ಲ. ನಾನು ಅಟಲ್‌ಜಿ ಜೊತೆ ನಿಕಟವಾಗಿ ಕೆಲಸ ಮಾಡುತ್ತಿದ್ದಾಗ ಪರಿಸ್ಥಿತಿ ಹೀಗಿರಲಿಲ್ಲ. ಟಿಎಂಸಿಯಂತಹ ಸಣ್ಣ ಪಕ್ಷಗಳನ್ನೂ ಅಟಲ್‌ಜಿ ಗೌರವಿಸುತ್ತಿದ್ದರು. ಹಾಗಾಗಿ ನಾವು ಕೂಡ ಅವರನ್ನು ಗೌರವಿಸುತ್ತೇವೆ. ಮೋದಿ ಮತ್ತು ಶಾ ಅವರು ಬಿಜೆಪಿಯನ್ನು ಪೂರ್ತಿಯಾಗಿ ಬದಲಾಯಿಸಿದ್ದಾರೆ’ ಎಂದೂ ಮಮತಾ ಹೇಳಿದರು.

ನಾಲ್ಕನೆಯದು, ದೊಡ್ಡ ಉದ್ದಿಮೆಗಳು ಬಂಗಾಳದಲ್ಲಿ ಹೂಡಿಕೆ ಮಾಡುವಂತೆ ಮಾಡುವಲ್ಲಿ ಟಿಎಂಸಿ ವಿಫಲವಾಗಿದ್ದರೂ, ಆ ಪಕ್ಷ ಬಡವರ ಪರವಾಗಿ ಕೈಗೊಂಡ ಅನೇಕ ಯೋಜನೆಗಳು ಮೆಚ್ಚುಗೆಗೆ ಪಾತ್ರವಾಗಿವೆ. ಅದರಲ್ಲೂ, ಗ್ರಾಮೀಣ ಭಾಗದ ಬಂಗಾಳಿಗಳು ಮೆಚ್ಚಿಕೊಂಡಿದ್ದಾರೆ.

ಆದರೆ ಮಮತಾ ವಿರುದ್ಧ ಒಂದು ಅಂಶ ಕೆಲಸ ಮಾಡುತ್ತದೆ. ಸರ್ಕಾರದ ಯೋಜನೆಗಳ ಅನುಷ್ಠಾನದಲ್ಲಿ ಟಿಎಂಸಿ ಕಾರ್ಯಕರ್ತರ ಭ್ರಷ್ಟಾಚಾರದ ಬಗ್ಗೆ ಅಸಮಾಧಾನ ರಾಜ್ಯದೆಲ್ಲೆಡೆ ಇದೆ. ‘ಮಮತಾ ಅವರು ತಮ್ಮ ಜೊತೆಗಾರರನ್ನು ನಿಯಂತ್ರಿಸದೆ ಅಪರಾಧ ಎಸಗಿದ್ದಾರೆ. ಆದರೆ, ಬಿಜೆಪಿಯಲ್ಲಿ ಇರುವವರೆಲ್ಲ ಧರ್ಮಪುತ್ರರೆಂದೇನೂ ಅಲ್ಲ. ಚುನಾವಣೆ ಅಭಿಯಾನಕ್ಕೆ ಸಹಸ್ರಾರು ಕೋಟಿ ರೂಪಾಯಿ ಬಿಜೆಪಿಗೆ ಎಲ್ಲಿಂದ ಬರುತ್ತಿದೆ?’ ಎಂದು ತಟಸ್ಥ ರಾಜಕೀಯ ವಿಶ್ಲೇಷಕರೊಬ್ಬರು ನನ್ನಲ್ಲಿ ಹೇಳಿದರು.

ಮಮತಾ ಅವರು 34 ವರ್ಷಗಳ ಕಮ್ಯುನಿಸ್ಟ್ ಆಡಳಿತವನ್ನು ಬಂಗಾಳದಲ್ಲಿ ಏಕಾಂಗಿಯಾಗಿ ಕೊನೆಗಾಣಿಸಿದರು. ಕಮ್ಯುನಿಸಂ ಬಗ್ಗೆ ಅವರು ತೋರಿದ ವಿರೋಧದ ಕಾರಣದಿಂದಾಗಿ ಅವರು ಬಿಜೆಪಿ, ಆರ್‌ಎಸ್‌ಎಸ್‌ಗೆ ಸಹಜವಾಗಿಯೇ ಜೊತೆಗಾರ್ತಿ ಆಗಬೇಕಿತ್ತು. ಆದರೆ, ಕಮ್ಯುನಿಸಂ ಮಾತ್ರವಲ್ಲದೆ ಕೋಮುವಾದವನ್ನೂ ಅವರು ವಿರೋಧಿಸುತ್ತಿದ್ದಾರೆ ಎಂಬ ಕಾರಣಕ್ಕೆ ಸಂಘಪರಿವಾರ ಅವರನ್ನು ದ್ವೇಷಿಸುತ್ತಿದೆ. 2021ರಲ್ಲಿ ಬಂಗಾಳದ ಹೆಣ್ಣುಹುಲಿಯನ್ನು ಸೋಲಿಸಲು ಅವರಿಂದ ಸಾಧ್ಯವಿಲ್ಲ.

ಚುರುಮುರಿ



ಅಭಿವೃದ್ಧಿ ಮಂತ್ರ

• ಸುಮಂಗಲಾ

ಬೆಕ್ಕಣ್ಣ ಬೆಳಗ್ಗೆಯಿಂದ ಧುಸುಮುಸು ನಡೆಸಿತ್ತು.

‘ನೋಡು... ಬಳ್ಳಾರಿ ಡಾಗ್ ಶೋವಳಗ ಮುಧೋಳದ ನಾಯಿನೇ ಫಸ್ಟ್ ಬಂತಂತ. ನಂಗೂ ಹಂಗೇ ಎಲ್ಲಾರೂ ಕ್ಯಾಟ್ ಶೋಗೆ ಕಳ್ಸು ಅಂದ್ರ ನೀ ಎಲ್ಲಿಗೂ ಕಳಿಸಂಗಿಲ್ಲ’ ಎಂದು ಗುರುಗುಟ್ಟಿತು.

‘ಕ್ಯಾಟ್ಶೋವಳಗ ಪರ್ಷಿಯನ್ ಬೆಕ್ಕು ತಂದಿರ್ತಾರ. ನಿನ್ನಂಗ...’ ನನ್ನ ಮಾತು ಪೂರ್ಣಗೊಳಿಸಲೂ ಬಿಡದೆ ‘ಈಗೇನಿದ್ರೂ ಎಲ್ಲ ಕಡೆ ಸ್ವದೇಶಿ ಬ್ರ್ಯಾಂಡ್ ನಡಿತೈತಿ. ಯೆಡ್ಯೂರಜ್ಜಾರು ಮೊನ್ನೆ ಅಷ್ಟೆ ಮೇಕ್ ಇನ್ ಇಂಡಿಯಾ ಲಾಂಛನ ಬಿಡುಗಡೆ ಮಾಡ್ಯಾರೆ, ನೋಡೀಯಿಲ್ಲೋ. ಮತ್ತ ನಾ ಏನ್ ಖಾಲಿಪೀಲಿ ಬೀದಿಬೆಕ್ಕು ಅಂದ್ಕಂಡೀಯೇನ್... ನಾ ಡೊಮೆಸ್ಟಿಕ್ ಲಾಂಗ್ ಹೇರ್ ಕ್ಯಾಟ್ ಅದೀನಿ’ ಎಂದು ತನ್ನ ಜೂಲು ಬಾಲವನ್ನು ಅಲ್ಲಾಡಿಸಿತು.

‘ಮತ್ತ ಅದ್ಕೆಲ್ಲ ತರಬೇತಿ ತಗಂಬೇಕಲೇ... ಸುಮ್ಸುಮ್ನೆ ಗೆಲ್ತಾರೇನ್... ನಿನ್ನ ಸಾಕೂ ಬದಲಿಗೆ ನಾ ಮುಧೋಳದ ನಾಯಿನೇ ಸಾಕಿದ್ರ ನಾಯಿ ಮಾಲೀಕಳು ಅಂತ ನಂಗೂ ಮಂದಿ ರಗಡ್ ಮರ್ಯಾದಿ ಕೊಡ್ತಿದ್ರು’ ಎಂದು ಕಿಚಾಯಿಸಿದೆ. ನಾಯಿ ಸಾಕುವ ವಿಚಾರ ತೆಗೆಯುತ್ತಿದ್ದಂತೆ ಬಾಲಮುದುರಿಕೊಂಡು ಪೇಪರು ಓದತೊಡಗಿತು.

‘ನಮಗ ಈ ಕೊರೊನಾನೇ ಓಡಿಸಾಕೆ ಆಗವಲ್ದು. ಆ ಚೀನಾದವ್ರು ನೋಡ್... ನಲ್ವತ್ತು ಉಪಗ್ರಹ ಒಂದೇ ಸಲಕ್ಕೆ ಮ್ಯಾಲೆ ಹಾರಿಸ್ತಾರಂತ. ಬದನೇಕಾಯಿ ಮಾಹಿತಿ ಕೇಳಿದರೂ ನೀ ಗೂಗಲಣ್ಣಂಗೆ ಕೇಳ್ತೀನಿ ಅಂತಿ. ಅವರ್ ನೋಡು... ಗೂಗಲ್ಲು, ಫೇಸುಬುಕ್ಕು, ವಾಟ್ಸಾಪ್ಪು ಮುಟ್ಟಂಗಿಲ್ಲಂತ. ಎಲ್ಲ ತಮ್ಮದೇ ಬ್ಯಾರೆ ಸ್ವಂತ ಮಾಡಿಕೊಂಡಾರಂತ... ಎಷ್ಟರ ದೇಶಭಕ್ತಿ, ಎಷ್ಟರ ಆತ್ಮನಿರ್ಭರ ಆಗ್ಯಾರ’ ಚೀನೀ ಗುಣಗಾನ ಶುರು ಮಾಡಿತು.

‘ದೇಶಭಕ್ತಿ ನಮಗೇನ್ ಕಡಿಮಿ... ಕ್ರೀಡಾಂಗಣದಿಂದ ಹಿಡಿದು ಎಷ್ಟಕೊಂದು ಹೊಸ ಹೆಸರು ಇಟ್ಟಿಲ್ಲೇನ್’ ಎಂದೆ.

‘ಖರೇ ಅದ ಮತ್ತ... ನಮೋನಾಡು ಅಂತ ನಮ್ಮ ದೇಶಕ್ಕೆ ಮರುನಾಮಕರಣ ಮಾಡಿದ್ರ ವಾಸ್ತು ಚೇಂಜ್ ಆಗತೈತಿ, ಬರೀ ಉಪಗ್ರಹ ಅಲ್ಲ, ನಾವ್ ಜಿಡಿಪಿನೇ ಆಕಾಶಕ್ಕೆ ಹಾರಿಸಬೌದು’ ಎಂದು ಮುಸಿಮುಸಿ ನಕ್ಕಿತು.

ಸಂಗತ

ವೈಜ್ಞಾನಿಕ ತತ್ವ: ಕಸುಬಿಗೆ ಕಳಶ

ನಾವು ‘ವಿಜ್ಞಾನ ಸಾಕ್ಷರ’ರಾದರೆ ಪ್ರಾಕೃತಿಕ ವಿದ್ಯಮಾನಗಳನ್ನು ವಿವೇಚಿಸಲು, ಸಾಕ್ಷ್ಯಾಧಾರಗಳಿಂದ ಸತ್ಯಾಸತ್ಯತೆ ನಿಷ್ಕರ್ಷಿಸಲು ಸಾಧ್ಯವಾಗುತ್ತದೆ

• ಯೋಗಾನಂದ

ಫೆಬ್ರುವರಿ 28, ಸರ್ ಸಿ.ವಿ. ರಾಮನ್ ಅವರು ಪ್ರತಿಷ್ಠಿತ ನೊಬೆಲ್ ಪ್ರಶಸ್ತಿಗೆ ಪಾತ್ರರಾದ ‘ರಾಮನ್ ಪರಿಣಾಮ’ವನ್ನು ಆವಿಷ್ಕರಿಸಿದ ದಿನ. ‘ಪಾರಕ ಮಾಧ್ಯಮದ ಮೂಲಕ ಏಕವರ್ಣೀ ಬೆಳಕು ಹಾಯುವಾಗ ಅದರ ತರಂಗ ದೂರಕ್ಕೂ ಚೆದುರಿದ ಬೆಳಕಿನ ತರಂಗ ದೂರಕ್ಕೂ ವ್ಯತ್ಯಾಸವಿರುವುದು’- ಇದು ರಾಮನ್ ಪರಿಣಾಮ. ತನ್ನಿಮಿತ್ತ ಪ್ರತಿವರ್ಷವೂ ಅಂದು ಭಾರತದ ಪಾಲಿಗೆ ‘ರಾಷ್ಟ್ರೀಯ ವಿಜ್ಞಾನ ಹಬ್ಬ’. ಆ ದಿನ ಒಂದೊಂದು ವಿಷಯ ಆರಿಸಿಕೊಂಡು ಅಲ್ಲಲ್ಲಿ ಉಪನ್ಯಾಸ, ಸಂವಾದ, ಚರ್ಚೆ. ಈ ಬಾರಿ ಗ್ರಾಸವಾದ ವಿಷಯ ‘ಲೈಂಗಿಕ ಸಂಪರ್ಕದ ಮೂಲಕ ಹರಡಬಹುದಾದ ವ್ಯಾಧಿಗಳು ಮತ್ತು ಶಿಕ್ಷಣ ಕೌಶಲಗಳ ಮೇಲೆ ಅವುಗಳ ದುಷ್ಪರಿಣಾಮಗಳು’.

ವಿಜ್ಞಾನ ಕೇವಲ ಅಧ್ಯಯನ ಶಿಸ್ತಾಗದೆ ಬದುಕಿನ ಶೈಲಿಯಾಗಬೇಕಿದೆ. ಇಂದು ಸಾಮಾಜಿಕ ಸುಧಾರಣೆಗೆ ಎಷ್ಟು ಪ್ರಭಾವಯುತ ಎನ್ನುವ ದಿಸೆಯಲ್ಲಿ ಶಿಕ್ಷಣ ಸಾಮರ್ಥ್ಯದ ಮಾಪನವಾಗುತ್ತಿಲ್ಲ. ತರಗತಿಗೆ ಹಾಜರಿ, ಓದು, ಪರೀಕ್ಷೆಗಷ್ಟೇ ಜ್ಞಾನ ವಿಜ್ಞಾನ ಸೀಮಿತವಾಗಿದೆ. ವೈಚಾರಿಕತೆ ಪುಟಸದ ಪದವಿ, ಪ್ರಶಸ್ತಿಗಳು ಕಪಾಟಿನೊಳಗೆ ಮಾತ್ರ ಇರುತ್ತವೆ. ಸಮಷ್ಟಿ ಹಿತಕ್ಕಿರಲಿ, ಸ್ವತಃ ಅವನ್ನು ಗಳಿಸಿದ ವ್ಯಕ್ತಿಗೂ ಅವುಗಳಿಂದ ಪ್ರಯೋಜನವಾಗವು. ಡಾ. ಬಾಬಾ ಸಾಹೇಬ್ ಅಂಬೇಡ್ಕರ್ ಅವರಿಗಿದ್ದ ಕನಸು, ಕಳಕಳಿಯೆಂದರೆ, ವೈಜ್ಞಾನಿಕ ಪ್ರಜ್ಞೆಯುಳ್ಳ ಪ್ರಬುದ್ಧ ಸಮಾಜ. ಅವರು ರಚಿಸಿದ ಸಂವಿಧಾನದಲ್ಲೇ ಅದು ವ್ಯಕ್ತವಾಗಿದೆ. ಐನ್‌ಸ್ಟೀನ್ ‘ಧರ್ಮರಹಿತ ವಿಜ್ಞಾನ ಕುರುಡು, ವಿಜ್ಞಾನರಹಿತ ಧರ್ಮ ಕುಂಟು’ ಎಂದರು. ರಸಋಷಿ ಕುವೆಂಪು, ನಮ್ಮ ಬದುಕಿನ ಹಾದಿ ಯಶಸ್ವಿಯಾಗಿ ಕ್ರಮಿಸಲು ವಿಜ್ಞಾನವೆಂಬ ದೀವಿಗೆ ಸರ್ವದಾ ನಮ್ಮ ಕೈಲಿರಬೇಕೆಂದು ಹಂಬಲಿಸಿದರು.

ಎರಡು ದಶಕಗಳಿಗೂ ಹಿಂದಿನ ಸಂಗತಿ. ಒಂದು ದಿನ ಬೆಳಗ್ಗೆ ಏಕಾಏಕಿ ದೈವ ಮೂರ್ತಿಯೊಂದು ಹಾಲು ಕುಡಿಯುತ್ತಿರುವುದಾಗಿ ಹಳ್ಳಿ, ಪಟ್ಟಣವೆನ್ನದೆ ಎಲ್ಲೆಡೆ ಸುದ್ದಿ ಗರಿಗೆದರಿತ್ತು. ದ್ರವಕ್ಕೆ ಸ್ವಭಾವತಃ ಮೇಲ್ಮುಖ ಒತ್ತಡವಿದೆ. ಯಾವುದೇ ವಸ್ತು ತನ್ನ ಮಟ್ಟಕ್ಕಿಂತಲೂ ತುಸು ಮೇಲಿದ್ದರೆ ಅದು ಅದಕ್ಕೆ ಲಗತ್ತಾಗುವುದು. ವಸ್ತುವು ದ್ರವ ಹೀರಿತೆನ್ನುತ್ತೇವೆ. ಆಗಿದ್ದು ಅದೇ. ಎಲ್ಲೋ ಒಂದೆಡೆ ಯಾರೋ ಆಕಸ್ಮಿಕವಾಗಿ ಮೂರ್ತಿಯ ಮುಖದ ಬಳಿ ಹಾಲು ತಂದಿದ್ದೇ ಬಂತು ವೈಜ್ಞಾನಿಕ ವಿದ್ಯಮಾನಕ್ಕೆ ರೆಕ್ಕೆ, ಪುಕ್ಕ! ಹೌದಾ? ಹೀಗಾ? ಅಂತೂ ಆಶ್ಚರ್ಯದ ಬೆನ್ನಲ್ಲೇ ಮನದಟ್ಟಾಗಿತ್ತು ವಾಸ್ತವ. ಛೆ! ಅಷ್ಟು ಹೊತ್ತಿಗೆ ಸಹಸ್ರಾರು ಲೀಟರು ಹಾಲು ವೃಥಾ ಹರಿದುಹೋಗಿತ್ತು.

ಬೆಂಕಿಯನ್ನು ಆವಿಷ್ಕರಿಸಿದ ಆದಿಮಾನವನೂ ಒಬ್ಬ ವಿಜ್ಞಾನಿಯೇ. ಮುಚ್ಚಿದ ಪಾತ್ರೆಯಲ್ಲಿ ಕಾಳು ಬೇಗ ಬೇಯುತ್ತದೆ ಅಂತ ಮೊದಲಿಗೆ ಕಂಡುಕೊಂಡಾಕೆಯೂ ತಂತ್ರಜ್ಞಳೇ. ಹಾಗಾಗಿ ಯಾವುದೇ ಯುಗವನ್ನು ವಿಜ್ಞಾನ ಯುಗವೆನ್ನುವಂತಿಲ್ಲ. ಇಂದು ವಿಜ್ಞಾನ ಎದುರಿಸುತ್ತಿರುವ ಅಗ್ನಿಪರೀಕ್ಷೆಯೆಂದರೆ ಮೌಢ್ಯದ ಸಮರ್ಥನೆಗಾಗಿ ಅದರ ದುರುಪಯೋಗ. ವಿಜ್ಞಾನ ಏನಿದ್ದರೂ ವಿಜ್ಞಾನಿಗಳಿಗೆ, ವಿಜ್ಞಾನಾಸಕ್ತರಿಗೆ ಮಾತ್ರವೇ ಎನ್ನುವ ಧೋರಣೆ ಸಲ್ಲದು. ಅದು ಜನಸಾಮಾನ್ಯರ ಪ್ರಜ್ಞೆಯಾಗಬೇಕು. ನಮ್ಮ ಸುತ್ತಮುತ್ತಲಿನ ವಸ್ತು ವೈವಿಧ್ಯಗಳಲ್ಲಿನ ವಿಜ್ಞಾನವನ್ನು ಗುರುತಿಸಬೇಕಿದೆ. ಸರ್ವದಾ ಕುತೂಹಲದಿಂದ ಹೊಸದನ್ನು ಕಾಣುವ ಒಂದೊಂದು ಮಗುವೂ ಪುಟ್ಟ ವಿಜ್ಞಾನಿಯೇ. ಮಿಕ್ಸರ್‌ನ ಮೂಲ ಸ್ವರೂಪ ಒರಳುಕಲ್ಲೇ, ವಾಷಿಂಗ್ ಮಶೀನ್‌ನ ವಿನ್ಯಾಸ ಒಗೆಯುವ ಕಲ್ಲಿನದೇ. ನಮ್ಮ ಸಾಂಪ್ರದಾಯಿಕ ತಂತ್ರಜ್ಞಾನವನ್ನು ಆಧುನಿಕವಲ್ಲವೆಂಬ ಕಾರಣಕ್ಕೆ ಕಡೆಗಣಿಸಿದರೆ ಸೊನ್ನೆ, ದಶಮಾಂಶ ಪದ್ಧತಿಯೂ ವರ್ಜ್ಯವಾದೀತು. ಬೈಸಿಕಲ್ ದುರಸ್ತಿ ಪಡಿಸುವವನಿಗೆ ಅದರ ವಿವಿಧ ಘಟಕಗಳ ಕಾರ್ಯಗಳ ಹಿಂದಿನ ವೈಜ್ಞಾನಿಕ ತತ್ವ ತಿಳಿದಿದ್ದರೆ ಅದು ಅವನ ಕಸುಬಿಗೆ ಕಳಶ.



ಸ್ಮಾರ್ಟ್ ಫೋನ್, ಸಿ.ಸಿ. ಟಿ.ವಿ., ಐ ಪ್ಯಾಡ್, ಸಿ.ಟಿ. ಸ್ಕ್ಯಾನರ್... ಹೀಗೆ ವಿವಿಧ ಪರಿಕರಗಳನ್ನು ಒದಗಿಸಿರುವ ವಿಜ್ಞಾನವು ಭರವಸೆ ಮತ್ತು ಸ್ಫೂರ್ತಿಯ ಚಿಲುಮೆ. ಮೌಢ್ಯಕ್ಕೆ ಸಡ್ಡು ಹೊಡೆಯಬಲ್ಲ ವಿಜ್ಞಾನಕ್ಕೆ ಸಮೂಹ ಸನ್ನಿಗೆ, ಹುಸಿ ನಂಬಿಕೆಗೆ ಚಿಕಿತ್ಸೆ ನೀಡುವ ಶಕ್ತಿಯಿದೆ. ವಿಜ್ಞಾನದ ಪರಮ ಚೈತನ್ಯ ಅದರ ‘ಕಾರ್ಯ-ಕಾರಣ’ ವಿಶ್ಲೇಷಣೆಯಲ್ಲಿ ಸಾಂದ್ರಗೊಂಡಿದೆ. ‘ವಿಜ್ಞಾನ ಸಾಕ್ಷರ’ರಾದರೆ ಪ್ರಾಕೃತಿಕ ವಿದ್ಯಮಾನಗಳನ್ನು ವಿವೇಚಿಸಲು, ಸಾಕ್ಷ್ಯಾಧಾರಗಳಿಂದ ಸತ್ಯಾಸತ್ಯತೆ ನಿಷ್ಕರ್ಷಿಸಲು ಸಾಧ್ಯವಾಗುತ್ತದೆ. ನಮ್ಮ ಜನಪದರು ಅಕ್ಷರದ ಹಂಗಿಲ್ಲದೆ ವೈಜ್ಞಾನಿಕ ಮನೋವೃತ್ತಿ ರೂಢಿಸಿಕೊಂಡವರು. ‘ಎತ್ತು ಈತು, ಕೊಟ್ಟಿಗೆಗೆ ಕಟ್ಟು’ ಎನ್ನುವ ಗಾದೆ, ಯುಕ್ತಾಯುಕ್ತ ಆಲೋಚಿಸದೆ ಯಾವುದನ್ನೂ ತೀರ್ಮಾನಿಸಬಾರದು ಎನ್ನುವುದಕ್ಕೆ ಹಿಡಿದ ಕನ್ನಡಿ.

ಮೌಖಿಕ ಪರಂಪರೆಯಲ್ಲಿ ವಿಜ್ಞಾನ ಪ್ರಸರಣ ಸುಲಭ ಸಾಧ್ಯವಾದುದಕ್ಕೆ ಮೂರು ಮುಖ್ಯ ಕಾರಣಗಳಿವೆ. ಎಲ್ಲೆಂದರಲ್ಲಿ, ಯಾವುದೇ ಸಮಯದಲ್ಲಿ ಕಿರಿಯರಿಗೆ ತಿಳಿ ಹೇಳಬಹುದಿತ್ತು. ಕಡಿಮೆ ವೆಚ್ಚ. ತಿಳಿವಿನ ಆಸಕ್ತಿಯುಳ್ಳವರಿಗೆ ಓದು, ಬರಹ ಬರಬೇಕೆಂದಿರಲಿಲ್ಲ. ವಿಜ್ಞಾನದಲ್ಲಿ ಪವಾಡ ಎನ್ನುವುದಿಲ್ಲ. ವಿಜ್ಞಾನವೇ ಒಂದು ಅನನ್ಯ ಪವಾಡ. ವಿಜ್ಞಾನದಲ್ಲಿ ಪ್ರತಿಯೊಂದು ಆಗುಹೋಗುವಿಗೂ ವಿವರಣೆಯಿರುತ್ತದೆ, ವಿವರಣೆಗೆ ದಕ್ಕದ್ದನ್ನು ಪ್ರಾಮಾಣಿಕವಾಗಿ ಗೊತ್ತಿಲ್ಲ ಅಥವಾ ಇನ್ನೂ ತಿಳಿಯಬೇಕಿದೆ ಎನ್ನುವ ಷರಾ ಇರುತ್ತದೆ. ವಿಜ್ಞಾನ ಕಾರ್ಯ-ಕಾರಣ ಸಂಬಂಧಿತ. ಹುಸಿ ವಿಜ್ಞಾನ ಕಾಕತಾಳೀಯ ಘಟನೆಯನ್ನು ಸಮರ್ಥನೆಗೆ ಬಳಸಿಕೊಳ್ಳುವ ತೋರಿಕೆ.

ವಾಚಕರ ವಾಣಿ

ಪ್ರಜಾಪ್ರಭುತ್ವ ವಿರೋಧಿ ಕ್ರಮ

ಕೇಂದ್ರಾಡಳಿತ ಪ್ರದೇಶವಾದ ಪುದುಚೇರಿಯಲ್ಲಿ ವಿ.ನಾರಾಯಣ ಸ್ವಾಮಿ ನೇತೃತ್ವದ ಕಾಂಗ್ರೆಸ್ ಸರ್ಕಾರ ಇತ್ತೀಚೆಗೆ ಪತನವಾದದ್ದು ದುರದೃಷ್ಟಕರ ಬೆಳವಣಿಗೆ. ಕೆಲವು ಕಾಂಗ್ರೆಸ್ ಶಾಸಕರು ಪೈಪೋಟಿಗೆ ಬಿದ್ದವರ ಹಾಗೆ ರಾಜೀನಾಮೆ ನೀಡಿ ಸರ್ಕಾರವನ್ನು ಪತನದ ಅಂಚಿಗೆ ತಂದರು. ಸದನದಲ್ಲಿ ಮುಖ್ಯಮಂತ್ರಿ ತಮ್ಮ ಬಹುಮತ ಸಾಬೀತುಪಡಿಸಬೇಕೆಂಬ ಅಲ್ಲಿನ ನೂತನ ಲೆಫ್ಟಿನೆಂಟ್ ಗವರ್ನರ್ ಸೂಚನೆ, ಹಿಂದಿನ ಲೆಫ್ಟಿನೆಂಟ್ ಗವರ್ನರ್ ಕಿರಣ್ ಬೇಡಿ ಅವರನ್ನು ಪದಚ್ಯುತಿಗೊಳಿಸಿದ್ದು... ಈ ಎಲ್ಲ ನಾಟಕೀಯ ಬೆಳವಣಿಗೆಗಳ ಹಿಂದೆ ಯಾರಿದ್ದಾರೆ ಎಂಬುದು ಪ್ರಜ್ಞಾವಂತ ನಾಗರಿಕರಿಗೆ ತಿಳಿಯದ ವಿಷಯವೇನಲ್ಲ.

ಕಳೆದ ಒಂದು ವರ್ಷದ ಅವಧಿಯಲ್ಲಿ ಈ ರೀತಿ ಪತನಗೊಳ್ಳುತ್ತಿರುವ ಎರಡನೇ ಸರ್ಕಾರ ಇದಾಗಿದೆ. ಕಳೆದ ವರ್ಷದ ಮಾರ್ಚ್‌ನಲ್ಲಿ ಕಮಲನಾಥ್ ನೇತೃತ್ವದ ಮಧ್ಯಪ್ರದೇಶದ ಕಾಂಗ್ರೆಸ್ ಸರ್ಕಾರವನ್ನು ಪದಚ್ಯುತಗೊಳಿಸಲಾಯಿತು. ಕಾಂಗ್ರೆಸ್ ಪಕ್ಷಕ್ಕೆ ಸೇರಿದ 22 ಶಾಸಕರು ಜ್ಯೋತಿರಾದಿತ್ಯ ಸಿಂಧಿಯಾ ನೇತೃತ್ವದಲ್ಲಿ ತಮ್ಮ ಪಕ್ಷಕ್ಕೆ ರಾಜೀನಾಮೆ ನೀಡಿದ ನಂತರ ಕಮಲನಾಥ್ ನೇತೃತ್ವದ ಕಾಂಗ್ರೆಸ್ ಸರ್ಕಾರ ಅಲ್ಪಮತಕ್ಕೆ ಇಳಿಯಿತು. ಇಂತಹುದೇ ಪ್ರಯತ್ನ ರಾಜಸ್ಥಾನದಲ್ಲಿ ನಡೆಯಿತಾದರೂ ಅದು ಫಲಕಾರಿಯಾಗಲಿಲ್ಲ. ಇತ್ತ ಕರ್ನಾಟಕದಲ್ಲಿ ಕೂಡ ಆಪರೇಷನ್ ಕಮಲದ ಮೂಲಕ ಕುಮಾರಸ್ವಾಮಿ ನೇತೃತ್ವದ ಕಾಂಗ್ರೆಸ್- ಜೆಡಿಎಸ್ ಮೈತ್ರಿಕೂಟ ಸರ್ಕಾರವನ್ನು ಉರುಳಿಸಲಾಯಿತು. ಈ ಎಲ್ಲಾ ಬೆಳವಣಿಗೆಗಳ ನಂತರ ಸಂಬಂಧಪಟ್ಟ ರಾಜ್ಯಗಳಲ್ಲಿ ಬಿಜೆಪಿ ಸರ್ಕಾರ ರಚಿಸಿರುವುದು ಕಾಕತಾಳೀಯವೇನಲ್ಲ. ಅದೇನೇ ಇರಲಿ ಪ್ರಜಾಸತ್ತಾತ್ಮಕ ರೀತಿಯಲ್ಲಿ ಆಯ್ಕೆಯಾದ ಸರ್ಕಾರವನ್ನು ಉರುಳಿಸಲು ಅನೈತಿಕ ಮಾರ್ಗಗಳ ಮೂಲಕ ಪ್ರಯತ್ನಿಸುವುದು ಪ್ರಜಾಪ್ರಭುತ್ವ ವಿರೋಧಿ ಕ್ರಮ. ದೇಶದಲ್ಲಿ ಹೆಚ್ಚುತ್ತಿರುವ ಇಂತಹ ಪ್ರವೃತ್ತಿಗಳ ಬಗ್ಗೆ ಸುಪ್ರೀಂ ಕೋರ್ಟ್ ಗಮನ ಹರಿಸಬೇಕಾಗಿದೆ.

ಕೆ.ವಿ.ವಾಸು, ಮೈಸೂರು

ಕ್ರಿಕೆಟಿಗರ ವಿದಾಯ ಸ್ವಾಗತಾರ್ಹ

ಇಂದಿನ ದಿನಗಳಲ್ಲಿ ಕ್ರಿಕೆಟ್‌ನ ಅಂಗಳವನ್ನು ಹೊಸ ಪ್ರತಿಭಾವಂತರು ಪ್ರವೇಶಿಸುತ್ತಿದ್ದಾರೆ. ಹಳೆಯ ಕ್ರಿಕೆಟಿಗರಾದ ವಿನಯಕುಮಾರ್ ಹಾಗೂ ಯೂಸುಫ್ ಪಠಾಣ್ ಎಲ್ಲಾ ಮಾದರಿಯ ಕ್ರಿಕೆಟ್‌ನಿಂದ ನಿವೃತ್ತರಾಗಿರುವುದರಿಂದ ಹೊಸ ಪ್ರತಿಭಾವಂತ ಯುವಕರಿಗೆ ದಾರಿ ಮಾಡಿಕೊಟ್ಟಂತಾಗಿದೆ. ವಿನಯಕುಮಾರ್ ಹಾಗೂ ಪಠಾಣ್ ಅವರು ಕ್ರಿಕೆಟಿಗೆ ವಿದಾಯ ಹೇಳಿರುವುದನ್ನು ನಾವೆಲ್ಲ ಸ್ವಾಗತಿಸಿ, ಯುವ ಕ್ರಿಕೆಟಿಗರಿಗೆ ಪ್ರೋತ್ಸಾಹ ನೀಡೋಣ.

ರಘುನಾಥರಾವ್ ತಾಪ್ಸೆ, ದಾವಣಗೆರೆ

ಕಾಡಾನೆಯ ಹಸಿವು ನೀಗಿಸಿ, ಹಾವಳಿ ತಪ್ಪಿಸಿ

ಜನವಸತಿ ಪ್ರದೇಶಕ್ಕೆ ಕಾಡಾನೆಗಳ ಲಗ್ಗೆಯನ್ನು ತಗ್ಗಿಸಲು ಸರ್ಕಾರ ಹಾಗೂ ಸಾರ್ವಜನಿಕರ ವತಿಯಿಂದ ಹಲವು ಯೋಜನೆಗಳು ಹಾಗೂ ಉಪಾಯಗಳು ಜಾರಿಯಲ್ಲಿವೆ. ಆದರೆ ಹಾವಳಿಯ ಮೂಲ ಸಮಸ್ಯೆ ಬಗೆಹರಿಸುವುದು ಅತಿ ಮುಖ್ಯ. ಹೌದು, ಅದು ‘ಹಸಿವು’. ಅಸಂಖ್ಯ ಆಹಾರ ಆಯ್ಕೆಗಳಿರುವ ಮಾನವನಿಗೇ ಒಂದು ಕ್ಷಣ ಹಸಿವು ತಡೆಯಲಾಗುವುದಿಲ್ಲ. ಅಂತಹುದರಲ್ಲಿ ಪ್ರಾಣಿಯ ಆಹಾರದ ಮೂಲವಾಗಿರುವ ಅರಣ್ಯವನ್ನೇ ಮಾನವ ತನ್ನ ವಿವಿಧ ಉದ್ದೇಶಗಳಿಗಾಗಿ ಅತಿಕ್ರಮಿಸಿರುವುದು ವಿಷಾದಕರ.

ಕಾಡಾನೆಗಳ ಬಳಕೆಯಲ್ಲಿರುವ ನೀರಿನ ಕೊಳ್ಳ ಹಾಗೂ ಅವು ವಿಶ್ರಮಿಸುವ ಜಾಗದ ಸುತ್ತಮುತ್ತ ಅವುಗಳಿಗೆ ಬೇಕಾದ ಮೇವು, ಹಣ್ಣು ಹಂಪಲುಗಳನ್ನು ಅರಣ್ಯ ಇಲಾಖೆಯು ಹೇರಳವಾಗಿ ಬೆಳೆಯುತ್ತಲಿದ್ದರೆ ಕಾಡಾನೆಗಳ ಹಸಿವೂ ನೀಗುತ್ತದೆ ಹಾಗೂ ಆಹಾರ ಹುಡುಕಿ ನಾಡಿನತ್ತ ಲಗ್ಗೆ ಇಡುವ ಗಜಪಡೆಯ ಸಮಸ್ಯೆಗೆ ಪರಿಹಾರವೂ ದೊರಕಿದಂತಾಗುತ್ತದೆ.

ಪ್ರವೀಣ ಪೂಜೇರ, ಬೆಳಗಾವಿ

ಖಾಸಗಿ ಬ್ಯಾಂಕ್‌ಗಳಿಗೆ ಮನ್ನಣೆ ಸರಿಯೇ?

ಅಂದಿನ ಖಾಸಗಿ ಬ್ಯಾಂಕುಗಳು ಬರೀ ದೊಡ್ಡ ಉದ್ದಿಮೆದಾರರ ಹಿಡಿತದಲ್ಲಿದ್ದು ಜನಸಾಮಾನ್ಯರ ಆಶೋತ್ತರಗಳಿಗೆ ಗಗನ ಕುಸುಮವಾಗಿದ್ದವು. ಹೀಗಾಗಿ, 1969ರಲ್ಲಿ 14 ಹಾಗೂ 1980ರಲ್ಲಿ ಮತ್ತೆ 6 ಖಾಸಗಿ ಬ್ಯಾಂಕುಗಳನ್ನು ರಾಷ್ಟ್ರೀಕರಣಗೊಳಿಸಲಾಯಿತು. ಇದರ ಫಲಶ್ರುತಿಯಾಗಿ ಕೃಷಿ ವಲಯಕ್ಕೆ, ಚಿಕ್ಕ ಪುಟ್ಟ ಉದ್ದಿಮೆಗಳಿಗೆ, ಹೈನುಗಾರಿಕೆಗೆ, ಮೀನುಗಾರಿಕೆಗೆ, ಉದ್ಯೋಗ ಸೃಷ್ಟಿಗೆ ಹೀಗೆ ಹತ್ತು ಹಲವಾರು ಕ್ಷೇತ್ರಗಳಿಗೆ, ಉದ್ದೇಶಗಳಿಗೆ ನಿರಂತರವಾಗಿ ಸಾಲ ವಿತರಿಸುತ್ತಾ, ಜನರ ಜೀವನಮಟ್ಟ ಸುಧಾರಿಸಿ ರಾಷ್ಟ್ರದ ಆರ್ಥಿಕತೆಯು ನಿಧಾನವಾಗಿ ಉತ್ತಮಗೊಂಡಿತು. ಕೆಲವೇ ಸಾವಿರಗಳ ಬ್ಯಾಂಕ್ ಸಾಲದಿಂದ ಇಂದು ದೊಡ್ಡ ಮಟ್ಟಿಗಿನ ವ್ಯವಹಾರ ನಡೆಸುತ್ತಾ ಹಲವಾರು ಮಂದಿಗೆ ಉದ್ಯೋಗ ನೀಡಿದಂತಹ ಲಕ್ಷಾಂತರ ಉದಾಹರಣೆಗಳಿವೆ.

ಇತ್ತೀಚಿನ ವರ್ಷಗಳಲ್ಲಿ ಆರ್ಥಿಕ ಸೇರ್ಪಡೆ ಕಾರ್ಯಕ್ರಮದ ಮೂಲಕ ದೇಶದಾದ್ಯಂತ ಹಳ್ಳಿ ಹಳ್ಳಿಯಲ್ಲೂ ಪ್ರತೀ ಕುಟುಂಬಕ್ಕೂ ಬ್ಯಾಂಕ್ ಸೌಕರ್ಯ ಒದಗಿಸಿದ್ದು, ಜನಧನ ಯೋಜನೆಯ ಸೌಲಭ್ಯವನ್ನು ಕಡು ಬಡವರಿಗೂ ತಲುಪಿಸಿದ್ದು, ಕಡಿಮೆ ಪ್ರೀಮಿಯಂನ ವಿಮೆಯ ಅನುಕೂಲಗಳನ್ನು ನೀಡಿದ್ದು ಇವೇ ರಾಷ್ಟ್ರೀಕೃತ ಬ್ಯಾಂಕುಗಳು. ಸರ್ಕಾರದ ಎಲ್ಲ ಸಹಾಯಧನ ಯೋಜನೆಗಳ ಅನುಷ್ಠಾನಕ್ಕೆ, ಸಕಲ ಜನೋಪಯೋಗಿ ಕಾರ್ಯಕ್ರಮಗಳಿಗೆ, ಸದ್ಯದ ಬೀದಿ ಬದಿ ವ್ಯಾಪಾರಿಗಳ ಸಾಲ ನೀಡಿಕೆಗೆ ಬೆನ್ನೆಲುಬಾಗಿ ನಿಂತು ಶ್ರಮಿಸುವುದು ಸರ್ಕಾರಿ ಸ್ವಾಮ್ಯದ ಬ್ಯಾಂಕುಗಳೇ.

ಹಲವಾರು ಖಾಸಗಿ ಬ್ಯಾಂಕುಗಳು ದಿವಾಳಿಯಾದಾಗ ಸಾಮಾನ್ಯ ಠೇವಣಿದಾರರ ಹಿತರಕ್ಷಣೆಗಾಗಿ ಕೋಟ್ಯಂತರ ರೂಪಾಯಿಗಳ ನಷ್ಟದ ಹೊರೆ ಹೊತ್ತು ಲಕ್ಷಾಂತರ ಕುಟುಂಬಗಳು ಮುಳುಗದಂತೆ ರಕ್ಷಣೆ ನೀಡಿದ್ದು ರಾಷ್ಟ್ರೀಕೃತ ಬ್ಯಾಂಕುಗಳೇ. ಕಳೆದ ವರ್ಷವಷ್ಟೇ ಎರಡು ಖಾಸಗಿ ಬ್ಯಾಂಕುಗಳು ಹೀಗೆ ಮುಳುಗಡೆಯ ಸ್ಥಿತಿಯಿಂದ ಹೊರ ಬಂದುದು ಎಲ್ಲರ ನೆನಪಿಂದ ಇನ್ನೂ ಮಾಸಿಲ್ಲ. ಕೇಂದ್ರ ಬಜೆಟ್‌ನಲ್ಲಿ ಎರಡು ರಾಷ್ಟ್ರೀಕೃತ ಬ್ಯಾಂಕುಗಳನ್ನು ಖಾಸಗೀಕರಣಗೊಳಿಸುವ ಪ್ರಸ್ತಾಪದ ಜೊತೆಗೆ ಈಗ ಸರ್ಕಾರದ ಬ್ಯಾಂಕ್ ವ್ಯವಹಾರಗಳನ್ನು ಖಾಸಗಿ ಬ್ಯಾಂಕುಗಳಿಗೂ ವಿಸ್ತರಿಸಿರುವುದು ಸಮಂಜಸವಲ್ಲ. ಬಡವರಿಗೆ ನೀಡುವ ಸಹಾಯಧನದ ಸರ್ಕಾರಿ ಸಾಲ ಯೋಜನೆಗಳಿಂದ ದೂರವಾಗಿ, ಲಾಭವಿರುವ ವ್ಯವಹಾರಗಳು ಮಾತ್ರ ಬೇಕೆನ್ನುವ ಖಾಸಗಿ ಬ್ಯಾಂಕುಗಳಿಗೆ ಮಣೆ ಹಾಕುವುದು ಸರಿಯೇ?

ಬಿ.ಎನ್.ಭರತ, ಮೈಸೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

ಮೀಸಲಾತಿ ಹೋರಾಟವಲ್ಲ, ಧಮ್ಕಿ

ತಳಸಮುದಾಯಗಳಿಗೆ ಪ್ರವರ್ಗ '2ಸಿ' ಸೃಷ್ಟಿಸಿ

• ಪ್ರೊ.ಎನ್.ವಿ. ನರಸಿಂಹಯ್ಯ

ಸಾಮಾಜಿಕವಾಗಿ, ಆರ್ಥಿಕವಾಗಿ ಪ್ರಬಲವಾಗಿರುವ ಸಮುದಾಯಗಳೇ ಇಂದು ಮೀಸಲಾತಿಗೆ ಹೋರಾಡುತ್ತಿವೆ. ಈ ಸಮುದಾಯಗಳಿಗೆ ಒಂದೇ ಪ್ರವರ್ಗದಡಿ ಮೀಸಲಾತಿ ನೀಡಿದರೆ, ತಳಸಮುದಾಯಗಳಿಗೆ ಪ್ರಬಲರ ಜೊತೆ ಹೋರಾಡಲು ಸಾಧ್ಯವಾಗದು.



ಪ್ರೊ. ನರಸಿಂಹಯ್ಯ

ಉದಾಹರಣೆಗೆ, ಸವಿತಾ ಸಮಾಜವು ಪ್ರವರ್ಗ '2ಎ'ದಲ್ಲಿದೆ. ಈ ವರ್ಗದಲ್ಲಿ 101 ಜಾತಿಗಳಿದ್ದು, ಶೇ 15ರಷ್ಟು ಮೀಸಲಾತಿ ಪಡೆಯಲು ಅರ್ಹವಾಗಿವೆ. ಸವಿತಾ, ಮಡಿವಾಳ, ಕುಂಬಾರ, ತಿಗಳ, ದೇವಾಡಿಗ ಮತ್ತು ಒಟ್ಟು ಜನಸಂಖ್ಯೆಯಲ್ಲಿ ಶೇ 1ಕ್ಕಿಂತ ಕಡಿಮೆ ಪ್ರಮಾಣದಲ್ಲಿರುವ ಜಾತಿಗಳು ಈ ಪ್ರವರ್ಗದಲ್ಲಿವೆ. ರಾಜಕೀಯವಾಗಿ ಪ್ರಬಲವಾಗಿರುವ ಕುರುಬ ಸಮುದಾಯವೂ ಇದೇ ಪ್ರವರ್ಗದಲ್ಲಿದೆ. ಈಗ ಪಂಚಮಸಾಲಿ ಲಿಂಗಾಯತ ಸಮುದಾಯವು 'ಪ್ರವರ್ಗ 2ಎ' ಮೀಸಲಾತಿ ಕೋರುತ್ತಿದೆ. ತಳಸಮುದಾಯಗಳಿಗೆ ಇದರಿಂದ ಪರೋಕ್ಷವಾಗಿ ತೊಂದರೆಯಾಗಲಿದೆ.

ರಾಜಕೀಯದಲ್ಲಿ, ಐಎಎಸ್, ಐಪಿಎಸ್, ಕೆಎಎಸ್ ನಂತಹ ಆಡಳಿತಾತ್ಮಕ ಹುದ್ದೆಗಳಲ್ಲಿ ಸವಿತಾ ಸಮಾಜದವರ ಸಂಖ್ಯೆ ತೀರಾ ಕಡಿಮೆ ಇದೆ. ಪ್ರಬಲ ಸಮುದಾಯದವರಿಗೂ ಇದೇ ಪ್ರವರ್ಗದಲ್ಲಿ ಮೀಸಲಾತಿ ನೀಡಿದರೆ, ಪೈಪೋಟಿ ಎದುರಿಸುವುದು ತಳಸಮುದಾಯಗಳಿಗೆ ಕಷ್ಟವಾಗುತ್ತದೆ.

ಪಂಚಮಸಾಲಿ ಸಮುದಾಯದವರು 18 ಜನ ಶಾಸಕರು ಇದ್ದಾರೆ. ಇಷ್ಟು ಪ್ರಬಲವಾಗಿರುವ ಸಮುದಾಯವನ್ನು '2ಎ'ಗೆ ಸೇರಿಸಿದರೆ ಸವಿತಾ, ಮಡಿವಾಳ, ಕುಂಬಾರ, ತಿಗಳರಂತಹ ಸಣ್ಣ ಸಮುದಾಯಗಳು ಶಾಶ್ವತವಾಗಿ ತಲೆ ಮೇಲೆ ಬಂಡೆ ಎಳೆದುಕೊಳ್ಳಬೇಕಾಗುತ್ತದೆ.

ಪ್ರವರ್ಗ 2ಎಗೆ ಶೇ 15ರಷ್ಟು ಮೀಸಲಾತಿ ನೀಡಲಾಗುತ್ತದೆ. ಪ್ರಬಲರ ಜೊತೆ ನಮ್ಮನ್ನೂ ಈ ಪ್ರವರ್ಗದಲ್ಲಿಯೇ ಇಡುವ ಬದಲು '2ಸಿ' ಎಂದು ಪ್ರತ್ಯೇಕ ಪ್ರವರ್ಗ ರಚಿಸಿ, ಸವಿತಾ, ಮಡಿವಾಳ, ಕುಂಬಾರ, ತಿಗಳ, ದೇವಾಡಿಗದಂತಹ ಶೇ 1ಕ್ಕಿಂತ ಕಡಿಮೆ ಜನಸಂಖ್ಯೆ ಇರುವ ಸಮುದಾಯಗಳನ್ನು ಈ ಪ್ರವರ್ಗಕ್ಕೆ ಸೇರಿಸಿ, ಶೇ 5ರಷ್ಟು ಮೀಸಲಾತಿ ನೀಡಬೇಕು. ಪ್ರವರ್ಗ 2ಎಗೆ ಶೇ 10ರಷ್ಟು ಮೀಸಲಾತಿ ಒದಗಿಸಬೇಕು. ಆಗ, ತಳಸಮುದಾಯಗಳಿಗೂ ಹೆಚ್ಚು ಪೈಪೋಟಿ ಇರುವುದಿಲ್ಲ.

(ಲೇಖಕ: ಸವಿತಾ ಸಮುದಾಯದ ಮುಖಂಡ, ಹಿಂದುಳಿದ ವರ್ಗಗಳ ಆಯೋಗದ ಮಾಜಿ ಸದಸ್ಯ)

• ಜೆ. ಶ್ರೀನಿವಾಸನ್

ಕುರುಬರು, ಲಿಂಗಾಯತ ಪಂಚಮಸಾಲಿ ಸಮುದಾಯದವರು ಮೀಸಲಾತಿ ಪಟ್ಟಿಯಲ್ಲಿನ ಪರಿಷ್ಕರಣೆ ಹಾಗೂ ಒಕ್ಕಲಿಗರು ಪ್ರಮಾಣ ಹೆಚ್ಚಿಸಬೇಕೆಂಬ ಬೇಡಿಕೆ ಮುಂದಿಟ್ಟು ಹೋರಾಟದ ಹಾದಿ ಹಿಡಿದಿದ್ದಾರೆ. ರಾಜ್ಯದಲ್ಲಿ ಸಾಮಾಜಿಕ, ಆರ್ಥಿಕ, ಶೈಕ್ಷಣಿಕ ಮತ್ತು ರಾಜಕೀಯವಾಗಿ ಪ್ರಬಲವಾಗಿರುವ ಈ ಸಮುದಾಯಗಳು ಮೀಸಲಾತಿಯಲ್ಲಿ ಹೆಚ್ಚಿನ ಪಾಲು ಕೇಳಿ ನಡೆಸುತ್ತಿರುವ ಚಟುವಟಿಕೆಗಳನ್ನು ಹೋರಾಟ ಎಂದು ವ್ಯಾಖ್ಯಾನಿಸುವುದು ಕಷ್ಟ. ನಿಜವಾದ ಅರ್ಥದಲ್ಲಿ ಈಗ ಪ್ರಬಲ ಸಮುದಾಯಗಳು ಸರ್ಕಾರಕ್ಕೆ ಧಮ್ಕಿ ಹಾಕುವ ಕೆಲಸವನ್ನು ಮಾಡುತ್ತಿವೆ.



ಜೆ. ಶ್ರೀನಿವಾಸನ್

'ಸಾಮಾಜಿಕ ನ್ಯಾಯ' ಭಾರತದ ಸಂವಿಧಾನದ ಪ್ರಸ್ತಾವನೆಯ ಮೂಲ ಅಂಶ. ಈಗ ಸರ್ಕಾರವು ಒತ್ತಡಗಳಿಗೆ ಮಣಿದು ಪ್ರಬಲ ಸಮುದಾಯಗಳು ಮುಂದಿಟ್ಟಿರುವ ಬೇಡಿಕೆಯನ್ನು ಒಪ್ಪಿಕೊಂಡರೆ ಸಾಮಾಜಿಕ ನ್ಯಾಯದ ಸಮಾಧಿ ಆಗುತ್ತದೆ. ಮೀಸಲಾತಿ ಎಂದರೆ ಸರ್ಕಾರಿ ಮತ್ತು ಅರೆ ಸರ್ಕಾರಿ ವ್ಯವಸ್ಥೆಯಲ್ಲಿ ವಿವಿಧ ಸಮುದಾಯಗಳಿಗೆ ಪ್ರಾತಿನಿಧ್ಯ ಕಲ್ಪಿಸುವುದು. ಈಗ ಶೇಕಡ 50ರ ಮಿತಿಯಲ್ಲಿ ಮೀಸಲಾತಿ ಇದೆ. ಸಮಾಜದ ಅತ್ಯಂತ ಕೆಳ ಸ್ತರದಲ್ಲಿರುವ ಸಣ್ಣ, ಅತಿಸಣ್ಣ ಸಮುದಾಯಗಳು ಸರ್ಕಾರಿ ನೌಕರಿ ಮತ್ತು ಉನ್ನತ ಶಿಕ್ಷಣದಲ್ಲಿ ಅಲ್ಪ ಪ್ರಮಾಣದಲ್ಲಿ ಪ್ರಾತಿನಿಧ್ಯ ಪಡೆಯುವುದಕ್ಕೆ ಮೀಸಲಾತಿ ದಾರಿ ಮಾಡಿಕೊಟ್ಟಿದೆ. ಆದರೆ, ಈಗಿನ ಬೆಳವಣಿಗೆಗಳು ಅಂತಹ ಎಲ್ಲ ಅವಕಾಶಗಳನ್ನೂ ಇಲ್ಲವಾಗಿಸುತ್ತವೆ.

ಈಗಲೇ ಮೀಸಲಾತಿ ಅರ್ಥ ಕಳೆದುಕೊಂಡಂತಾಗಿದೆ. ನ್ಯಾಯಾಂಗ, ಶಾಸಕಾಂಗದಲ್ಲಿ ಮೀಸಲಾತಿ ಇಲ್ಲ. ಕಾರ್ಯಾಂಗದಲ್ಲಿ ಮಾತ್ರ ಮೀಸಲಾತಿ ಇದೆ. ಸರ್ಕಾರಿ ಉದ್ಯೋಗಗಳ ಸಂಖ್ಯೆಯಲ್ಲಿ ಗಣನೀಯ ಕುಸಿತ ಆಗುತ್ತಿದೆ. ಇರುವುದರಲ್ಲೂ ಕೆಳಹಂತದ ಉದ್ಯೋಗಗಳೇ ಹೆಚ್ಚಿನ ಸಂಖ್ಯೆಯಲ್ಲಿವೆ. ಅಲ್ಲಿ ಮಾತ್ರ ಮೀಸಲಾತಿ ನಿರೀಕ್ಷಿಸಬಹುದಾದ ಸ್ಥಿತಿ ಇದೆ. ಸಾರ್ವಜನಿಕ ವಲಯದ ಉದ್ದಿಮೆಗಳಲ್ಲಿ ಕಾಯಂ ನೌಕರರ ನೇಮಕಾತಿ ಸ್ಥಗಿತಗೊಳ್ಳುವ ಹಂತಕ್ಕೆ ತಲುಪಿದೆ. ವಿಮಾನ ನಿಲ್ದಾಣಗಳೂ ಅದಾನಿ, ಅಂಬಾನಿಯಂತಹ ಉದ್ಯಮಿಗಳ ಪಾಲಾಗುತ್ತಿವೆ. ಕೇಂದ್ರದಲ್ಲಿ ಎನ್‌ಡಿಎ ಸರ್ಕಾರ ಅಧಿಕಾರಕ್ಕೆ ಬಂದ ಬಳಿಕ ಹೂಡಿಕೆ ಹಿಂದೆಗೆತ, ಖಾಸಗೀಕರಣ ವೇಗ ಪಡೆದುಕೊಂಡಿದೆ. ಸರ್ಕಾರದಲ್ಲಿ ಬ್ಯಾಕ್‌ಲಾಗ್ ಹುದ್ದೆಗಳ ನೇಮಕಾತಿ ಪ್ರಕ್ರಿಯೆ ನನೆಗುದಿಗೆ ಬಿದ್ದಿದೆ. ಲಭ್ಯವಿರುವ ಸಣ್ಣ ಸಂಖ್ಯೆಯ ಹುದ್ದೆಗಳಲ್ಲೇ ಮೀಸಲಾತಿಯ ಪಾಲು ಪಡೆಯಬೇಕಾದ ಶೋಚನೀಯ ಸ್ಥಿತಿಯಲ್ಲಿ ತಳ ಸಮುದಾಯಗಳು ಇವೆ.

ಮೀಸಲಾತಿ ಎಂಬುದು ಪ್ರಾತಿನಿಧ್ಯ ನೀಡುವುದಕ್ಕಷ್ಟೇ ಸೀಮಿತವಾದ ವ್ಯವಸ್ಥೆ ಅಲ್ಲ. ಸಮಾನರ ನಡುವೆ ಸ್ಪರ್ಧೆ ಇರಬೇಕೆಂಬ ಮಹತ್ತರವಾದ ಉದ್ದೇಶವನ್ನೂ ಹೊಂದಿದೆ. ಈಗ ವಿವಿಧ ಸಮುದಾಯಗಳು ಮುಂದಿಟ್ಟಿರುವ ಬೇಡಿಕೆಗಳಿಗೆ ಒಪ್ಪಿಗೆ ದೊರೆತರೆ ಸಮಾನರ ನಡುವೆ ಸ್ಪರ್ಧೆಯ ಬದಲಾಗಿ ಅಸಮಾನರ ನಡುವೆ ಸ್ಪರ್ಧೆಗೆ ಬಾಗಿಲು ತೆರೆದಂತಾಗುತ್ತದೆ. ಎಲ್ಲ ರೀತಿಯಿಂದಲೂ ಪ್ರಬಲವಾಗಿರುವ ಸಮುದಾಯದ ಜನರು ಕೆಳ ಹಂತದಲ್ಲಿರುವ, ಶಕ್ತಿಯೇ ಇಲ್ಲದ ಸಮುದಾಯಗಳ ಜನರೊಂದಿಗೆ ಸ್ಪರ್ಧೆಗೆ ಇಳಿಯಲು ಅವಕಾಶ ದೊರೆಯುತ್ತದೆ. ಸಹಜವಾಗಿಯೇ ಎಲ್ಲ ಸೌಲಭ್ಯಗಳೂ ಪ್ರಬಲರ ಪಾಲಾಗುತ್ತವೆ. ಕೆಳಸ್ತರದಲ್ಲಿರುವ ಸಮುದಾಯಗಳು ಮತ್ತಷ್ಟು ಅಂಚಿಗೆ ಸರಿಯುವ ಅಪಾಯ ಇದೆ.



ಪಂಚಮಸಾಲಿ ಸಮುದಾಯವನ್ನು 2ಎ ಪ್ರವರ್ಗಕ್ಕೆ ಸೇರಿಸಬೇಕು ಎಂದು ಒತ್ತಾಯಿಸಿ ಕೂಡಲಸಂಗಮ ಪೀಠದ ಬಸವ ಜಯಮೃತ್ಯುಂಜಯ ಸ್ವಾಮೀಜಿ ಮತ್ತು ಸಮುದಾಯದ ಸದಸ್ಯರಿಂದ ಬೆಂಗಳೂರಿನ ಸ್ವಾತಂತ್ರ್ಯ ಉದ್ಯಾನವನದಲ್ಲಿ ಇತ್ತೀಚೆಗೆ ಪ್ರತಿಭಟನೆ ನಡೆದಿತ್ತು – ಪ್ರಜಾವಾಣಿ ಚಿತ್ರ

ಸಬಲೀಕರಣಕ್ಕೆ ಒತ್ತು ದೊರೆಯಬೇಕು

ದೊಡ್ಡ ಸಮುದಾಯಗಳಿಂದಲೂ ಮೀಸಲಾತಿಯ ಬೇಡಿಕೆ ಹೆಚ್ಚಿದಂತೆಲ್ಲ ಸಣ್ಣ ಸಮುದಾಯಗಳ ಅವಕಾಶಗಳು ಕಡಿಮೆಯಾಗುತ್ತಿವೆ. ಅವಕಾಶ ವಂಚಿತ ಸಮುದಾಯಗಳನ್ನು ಶಿಕ್ಷಣದ ಮೂಲಕ ಸಬಲೀಕರಣಗೊಳಿಸುವ ಕೆಲಸಕ್ಕೆ ಹೆಚ್ಚು ಆದ್ಯತೆ ದೊರಕಬೇಕು. ಅದಕ್ಕೆ ಪೂರಕವಾಗಿ ಸರ್ಕಾರಿ ಶಾಲೆಗಳನ್ನು ಬಲಪಡಿಸುವ ಮತ್ತು ವಿದ್ಯಾರ್ಥಿ ನಿಲಯಗಳ ಸಂಖ್ಯೆಯನ್ನು ಹೆಚ್ಚಿಸುವ ಕೆಲಸ ಸರ್ಕಾರದಿಂದ ಆಗಬೇಕು.

ಪ್ರವರ್ಗಗಳ ಬದಲಾವಣೆ, ಹೆಚ್ಚಿನ ಮೀಸಲಾತಿಯ ಬೇಡಿಕೆ ಇಡುತ್ತಿರುವ ಸಮುದಾಯಗಳಿಗೆ ತಾವು ಏಕೆ ಬೇಡಿಕೆ ಮಂಡಿಸುತ್ತಿದ್ದೇವೆ ಎಂಬುದೇ ಗೊತ್ತಿಲ್ಲ. ಪಂಚಮಸಾಲಿ ಸಮುದಾಯದ ಬೇಡಿಕೆ ಇದಕ್ಕೊಂದು ಉದಾಹರಣೆ. ಪಂಚಸಾಲಿಗಳಿಗೆ ಈಗಾಗಲೇ ಪ್ರವರ್ಗ '3ಬಿ' ಅಡಿಯಲ್ಲಿ ಮೀಸಲಾತಿ ಇದೆ. ಪ್ರವರ್ಗ '2ಎ' ಮೀಸಲಾತಿ ಏಕೆ ಬೇಕು? ಎಂಬುದನ್ನು ಅವರು ಹೇಳುತ್ತಿಲ್ಲ. '2ಎ' ಪ್ರವರ್ಗದಲ್ಲಿ ನಿಬಂಧನೆಗಳೇನೂ ಉದಾರವಾಗಿಲ್ಲ. ಕುರುಬರು ಎಸ್‌.ಟಿ ಪಟ್ಟಿಗೆ ಸೇರಿಸಬೇಕೆಂಬ ಬೇಡಿಕೆಯೂ ತಪ್ಪೇ. ಎಸ್‌.ಟಿ ಪಟ್ಟಿಯಲ್ಲಿ 51 ಜಾತಿಗಳಿವೆ. 2011ರ ಜನಗಣತಿ ಪ್ರಕಾರ, ರಾಜ್ಯದಲ್ಲಿ ಪರಿಶಿಷ್ಟ ಪಂಗಡಗಳ ಜನಸಂಖ್ಯೆ ಸುಮಾರು 50 ಲಕ್ಷದಷ್ಟಿದೆ. ಅದರಲ್ಲಿ ನಾಯಕರು, ಬೇಡರು ಮೀಸಲಾತಿಯಲ್ಲಿ ಹೆಚ್ಚಿನ ಪಾಲು ಪಡೆಯುತ್ತಿದ್ದಾರೆ. ರಾಜಕೀಯದಲ್ಲಿ ಈ ಎರಡೇ ವರ್ಗಗಳ ಪ್ರಾತಿನಿಧ್ಯ ಇದೆ. ದೊಡ್ಡ ಜನಸಂಖ್ಯೆಯನ್ನು ಹೊಂದಿರುವ ಕುರುಬರೂ ಎಸ್‌.ಟಿ ಪಟ್ಟಿ ಸೇರಿದರೆ ಎಸ್‌.ಟಿ ಪಟ್ಟಿಯಲ್ಲಿರುವ ಸೋಲಿಗರು, ಇರುಳಿಗರಂತಹ ಸಣ್ಣ ಸಮುದಾಯಗಳಿಗೆ ಪ್ರಾತಿನಿಧ್ಯವನ್ನು ಊಹಿಸಲೂ ಸಾಧ್ಯವಾಗದು.

ಪ್ರಬಲ ಸಮುದಾಯಗಳ ಬೇಡಿಕೆ ಈಡೇರಿದರೆ ಸ್ಪರ್ಧೆಯ ಸ್ವರೂಪದಲ್ಲಿ ಬದಲಾವಣೆ ಆಗುತ್ತದೆ. ಸಮ ಜೋಡಿಗಳ ನಡುವಿನ ಸ್ಪರ್ಧೆಯ ಬದಲಾಗಿ ಸಣ್ಣವರ ಜತೆ ಪ್ರಬಲರ ಸ್ಪರ್ಧೆಗೆ ಅವಕಾಶ ಸಿಗುತ್ತದೆ. ಅತ್ಯಂತ ಕಡಿಮೆ ಜನಸಂಖ್ಯೆ ಇರುವವರು, ಆರ್ಥಿಕ, ಶೈಕ್ಷಣಿಕ ಶಕ್ತಿಯೇ ಇಲ್ಲದ ಸಮುದಾಯಗಳು ಮುಗಿದುಹೋಗುತ್ತವೆ. ಚಿನ್ನಪ್ಪರೆಡ್ಡಿ ಆಯೋಗದ ವರದಿಯಲ್ಲಿ 'ಜನಸಂಖ್ಯೆ ತಿಳಿಯದ ಸಮುದಾಯ'ಗಳ ದೊಡ್ಡ ಪಟ್ಟಿಯೇ ಇದೆ. ಅಂತಹ ಎಲ್ಲ ಸಮುದಾಯಗಳೂ ಹೇಳ ಹೆಸರಿಲ್ಲದಂತಾಗುತ್ತವೆ. ದೊಡ್ಡ ಜಾತಿಗಳು ಹಿಂದುಳಿದ ವರ್ಗಗಳ '3ಎ' ಅಥವಾ '3ಬಿ' ಪ್ರವರ್ಗಗಳಿಂದ ಪ್ರವರ್ಗ '2ಎ' ಪಟ್ಟಿಗೆ ಬರುವುದು ಮತ್ತು '2ಎ' ಪಟ್ಟಿಯಿಂದ ಪರಿಶಿಷ್ಟ ಪಂಗಡಗಳ ಪಟ್ಟಿಗೆ ಸೇರುವುದು ಹಿಂದುಳಿದ, ತುಳಿತಕ್ಕೊಳಗಾದ, ದಲಿತ ಮತ್ತು ಅಲ್ಪಸಂಖ್ಯಾತ ಸಮುದಾಯಗಳ ಜನರ ಹಿತಾಸಕ್ತಿಯ ದೃಷ್ಟಿಯಿಂದ ಅಪಾಯಕಾರಿ ನಡೆ. ದುರ್ಬಲ ವರ್ಗಗಳಿಗೆ ದೊರಕುವ ಸೌಲಭ್ಯಗಳನ್ನು ಪ್ರಬಲ ಸಮುದಾಯಗಳು ಕಬಳಿಸಲು ದಾರಿಯಾಗುತ್ತದೆ. ದೊಡ್ಡ ಸಮುದಾಯಗಳ ಬೇಡಿಕೆ ಈಡೇರಿದಲ್ಲಿ ಸಣ್ಣ ಮತ್ತು ಸಮಾಜದ ಅಂಚಿನಲ್ಲಿರುವ ಸಮುದಾಯಗಳ ಜನರು ಉನ್ನತ ಶಿಕ್ಷಣ, ಸರ್ಕಾರಿ ನೌಕರಿ ಮತ್ತು ದೇಶದ ಸಂಪತ್ತಿನಲ್ಲಿ ಪಡೆಯಬಹುದಾದ ಪಾಲಿನ ಪ್ರಮಾಣ ಕ್ಷೀಣಿಸಲಿದೆ.

ದೊಡ್ಡ ಜಾತಿಗಳು ತಮಗಿರುವ ರಾಜಕೀಯ ಶಕ್ತಿಯನ್ನು ಬಳಸಿಕೊಂಡು ಸರ್ಕಾರವನ್ನು ಬೆದರಿಸುವ ಕೆಲಸಕ್ಕೆ ಇಳಿದಿವೆ. ಸಮುದಾಯದ ಶಾಸಕರನ್ನು ತೋರಿಸುತ್ತಾ, ಮೀಸಲಾತಿಯ ಬೇಡಿಕೆ ಈಡೇರಿಸದಿದ್ದರೆ ಸರ್ಕಾರವನ್ನೇ ಪತನಗೊಳಿಸುವುದಾಗಿ ಧಮ್ಕಿ ಹಾಕುತ್ತಿವೆ. ಸಂವಿಧಾನ, ಸುಪ್ರೀಂ ಕೋರ್ಟ್ ಯಾವುದಕ್ಕೂ ಗೌರವ ನೀಡದೆ ಬೆದರಿಸುವ ಕೆಲಸ ನಡೆಯುತ್ತಿದೆ. ಇದರಿಂದಾಗಿ ಸಣ್ಣ ಸಮುದಾಯಗಳ ಅಳಿವು, ಉಳಿವಿನ ಪ್ರಶ್ನೆ ಎದುರಾಗಿದೆ. ಮೀಸಲಾತಿ ಬೇಡಿಕೆಯ ಹುಚ್ಚು ನದಿ ಹರಿಯುತ್ತಿದೆ. ಸರ್ಕಾರ ಎಚ್ಚರ ವಹಿಸದಿದ್ದರೆ, ಸಣ್ಣ, ಅಂಚಿನಲ್ಲಿರುವ ಮತ್ತು ಶೋಷಿತ ಸಮುದಾಯಗಳು ಈ ಪ್ರವಾಹದಲ್ಲಿ ಕೊಚ್ಚಿಕೊಂಡು ಹೋಗುತ್ತವೆ.

ಪ್ರಬಲ ಸಮುದಾಯಗಳ ಬೇಡಿಕೆಯಿಂದ ಸಣ್ಣ, ಶಕ್ತಿರಹಿತ ಸಮುದಾಯಗಳಿಗೆ ಅಪಾಯ ಎದುರಾಗಿರುವುದು ಕಣ್ಣೆದುರಿಗಿನ ಸತ್ಯ. ಈಗ ಅಂತಹ ಆತಂಕವನ್ನು ದೂರ ಮಾಡಬೇಕಾದರೆ ಮೀಸಲಾತಿ ಪಟ್ಟಿಯ ಸಮಗ್ರ ಮರುವಿಂಗಡಣೆಯೊಂದೇ ಪರಿಹಾರ. ಎಲ್ಲ ಪ್ರವರ್ಗಗಳನ್ನೂ ಮರು ವಿಂಗಡಿಸಬೇಕು. ರಾಜ್ಯ ಹಿಂದುಳಿದ ವರ್ಗಗಳ ಆಯೋಗ ನಡೆಸಿರುವ ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆಯ ವರದಿಯನ್ನು ಮೊದಲು ಬಹಿರಂಗಪಡಿಸಬೇಕು. ವರದಿಯಲ್ಲಿ ಪ್ರತಿ ಸಮುದಾಯದ ಜನಸಂಖ್ಯೆ ಮತ್ತು ಸಾಮಾಜಿಕ ಸ್ಥಿತಿಗತಿಗಳ ಖಚಿತ ಅಂಕಿಅಂಶಗಳಿವೆ. ಅದನ್ನು ಆಧಾರವಾಗಿಟ್ಟುಕೊಂಡು ಎಲ್ಲ ಪ್ರವರ್ಗಗಳ ಮರುವಿಂಗಡಣೆ ಮಾಡುವ ಕೆಲಸ ಆಗಬೇಕು. ಸಮಬಲದ ಜಾತಿಗಳನ್ನು ಒಂದು ಪ್ರವರ್ಗಕ್ಕೆ ತರಬೇಕು. ಶಕ್ತಿ ಇಲ್ಲದ, ಸಣ್ಣ, ಅಂಚಿನಲ್ಲಿರುವ ಸಮುದಾಯಗಳನ್ನು ಒಂದೆಡೆ ತರುವ ಕೆಲಸ ಮಾಡಬೇಕು. ಆಗ ಮಾತ್ರ ಎಲ್ಲರನ್ನೂ ರಕ್ಷಿಸಲು ಸಾಧ್ಯವಾಗುತ್ತದೆ.

(ಲೇಖಕ: ಹಿಂದುಳಿದ ವರ್ಗಗಳ ಆಯೋಗದ ಮಾಜಿ ಸದಸ್ಯ)

ನಿರೂಪಣೆ: ವಿ.ಎಸ್. ಸುಬ್ರಹ್ಮಣ್ಯ

ಮತ ಬ್ಯಾಂಕ್‌ಗಾಗಿ ಮೀಸಲಾತಿ ಅಸ್ತ್ರ

• ಬಸವಲಿಂಗ ಪಟ್ಟದ್ದೇವರು



ಬಸವಲಿಂಗ ಪಟ್ಟದ್ದೇವರು

ವಿಶ್ವಗುರು ಬಸವಣ್ಣನವರು ಸ್ಥಾಪಿಸಿದ ಲಿಂಗಾಯತ ಧರ್ಮ ಎಲ್ಲ ಸಮುದಾಯಗಳನ್ನು ಒಳಗೊಂಡ ಧರ್ಮವಾಗಿದೆ. ಬಸವಣ್ಣನವರು 'ಇವ ನಮ್ಮವ, ಇವ ನಮ್ಮವ, ಇವ ನಮ್ಮವ' ಎನ್ನುತ್ತ ಅಂದಿನ ಕಾಲದಲ್ಲಿ ತುಳಿತಕ್ಕೆ ಒಳಗಾಗಿರುವ ಎಲ್ಲ ಸಮುದಾಯಗಳನ್ನು ಅಪ್ಪಿಕೊಂಡರು. ಹೀಗಾಗಿ ಲಿಂಗಾಯತ ಶೋಷಿತರ, ದಮನಿತರ, ಶ್ರಮಿಕರ, ವಂಚಿತರ ಧರ್ಮವಾಗಿ ಬೆಳೆಯಿತು. ಅದು ಕಾಯಕಜೀವಿಗಳ ಧರ್ಮವಾಯಿತು.

ಕಲ್ಯಾಣ ಪ್ರತಿಕ್ರಾಂತಿಯ ನಂತರ ಕಾಯಕವನ್ನೇ ಜಾತಿಯಾಗಿ ಬಿಂಬಿಸಲಾಯಿತು. ಹೀಗಾಗಿ ಇಂದು ಲಿಂಗಾಯತರಲ್ಲಿ 102 ಉಪ ಪಂಗಡಗಳು ಕಾಣಿಸುತ್ತವೆ. ಇದರಲ್ಲಿ ಬಹುಸಂಖ್ಯಾತ ಉಪಪಂಗಡಗಳು ಹಿಂದುಳಿದ ವರ್ಗದಲ್ಲಿಯೇ ಬರುತ್ತವೆ. ಅದರಲ್ಲಿ ಕೆಲವು ಉಪ ಪಂಗಡಗಳಿಗೆ ಮೀಸಲಾತಿ ಇದೆ. ಇನ್ನೂ ಕೆಲವರು ಮೀಸಲಾತಿಗಾಗಿ ಹೋರಾಡುತ್ತಿದ್ದಾರೆ.

ಮೀಸಲಾತಿಯ ಉದ್ದೇಶ ಹಿಂದುಳಿದವರ ಬೆಳವಣಿಗೆಯೇ ಆಗಿದ್ದರೂ ಅದು ಇಂದು ರಾಜಕೀಯ ಅಸ್ತ್ರವಾಗಿ ಬಳಕೆಯಾಗುತ್ತಿರುವ ಕಾರಣ ನಮ್ಮ ದೇಶದಲ್ಲಿ ಜಾತಿ ವ್ಯವಸ್ಥೆ ಇನ್ನೂ ಗಟ್ಟಿಯಾಗುತ್ತಿದೆ. ರಾಜಕೀಯ ಪಕ್ಷಗಳು ತಮ್ಮ ಮತ ಬ್ಯಾಂಕ್‌ಗಾಗಿ ಮೀಸಲಾತಿಯ ಅಸ್ತ್ರವನ್ನು ಬಳಸುತ್ತಿರುವುದರಿಂದ ಅದರ ಮೂಲ ಉದ್ದೇಶ ಮಾಯವಾಗಿ ದಿನೇ ದಿನೇ ಮೀಸಲಾತಿಯ ಹೋರಾಟ ಜೋರಾಗುತ್ತ ಸರ್ಕಾರಕ್ಕೆ ತಲೆನೋವು ಆಗುತ್ತಿದೆ. ಮೀಸಲಾತಿಯ ಮೂಲ ಉದ್ದೇಶದ ಕಡೆ ನಾವು ಗಮನ ಕೊಟ್ಟರೆ ನಿಜವಾದ ಬಡವರಿಗೆ ಇದರ ಸೌಲಭ್ಯ ಸಿಗಬೇಕು. ಹಿಂದುಳಿದ ಸಮುದಾಯಗಳು ಸರ್ವಾಂಗೀಣವಾಗಿ ಬೆಳೆಯಬೇಕು.

ಲಿಂಗಾಯತ ಪ್ರತ್ಯೇಕ ಧರ್ಮದ ಹೋರಾಟವನ್ನು ಕೆಲವರು ಧರ್ಮ ಒಡೆಯುವ ಹುನ್ನಾರ ಎಂದು ಅಪಪ್ರಚಾರ ಎಬ್ಬಿಸಿದ್ದರು. ಆದರೆ ಇದು ಧರ್ಮ ಒಡೆಯುವ ಕೆಲಸವಲ್ಲ. ಧರ್ಮವನ್ನು ಒಗ್ಗೂಡಿಸುವ ಕಾರ್ಯ. ಲಿಂಗಾಯತ ಸಿದ್ಧಾಂತವೇ ಕೂಡಿಸುವ ಸಿದ್ಧಾಂತವಾಗಿದೆ. ತುಂಡು ತುಂಡು ಬಟ್ಟೆಗಳನ್ನು ಸೂಜಿಯಿಂದ ಜೋಡಿಸಿ ಅಖಂಡ ಬಟ್ಟೆ ಮಾಡಿದಂತೆ ಲಿಂಗಾಯತ ಧರ್ಮದಲ್ಲಿರುವ 102 ಉಪಪಂಗಡಗಳ ಸರ್ವಾಂಗೀಣ ಅಭಿವೃದ್ಧಿಗಾಗಿ ಲಿಂಗಾಯತ ಸ್ವತಂತ್ರ ಧರ್ಮ ಹೋರಾಟ ನಿರಂತರವಾಗಿ ನಡೆಯುತ್ತಿದೆ. ಕೆಲವರು ಪ್ರತ್ಯೇಕ ಧರ್ಮ ಹೋರಾಟ ನಿಂತುಹೋಗಿದೆ ಎನ್ನುತ್ತಿದ್ದಾರೆ. ಆದರೆ, ಇದು ನಮ್ಮ ಗುರಿ ಮುಟ್ಟುವವರೆಗೂ ನಿಲ್ಲದ ಹೋರಾಟವಾಗಿದೆ.

ಲಿಂಗಾಯತ ಧರ್ಮದ ಸಿದ್ಧಾಂತವೇ ಸಮಾನತೆ ತರುವ ಸಿದ್ಧಾಂತವಾಗಿದೆ. ಅರ್ಹತೆ ಇದ್ದರೆ ಪೇಪರ್ ಮಾರುವವ ರಾಷ್ಟ್ರಪತಿ ಆಗಬಹುದು, ಆಗಿದ್ದಾರೆ. ಚಹಾ ಮಾರುವವ ದೇಶದ ಪ್ರಧಾನಿಯಾದಂತೆ, ಅರಿವು-ಆಚಾರ-ಅನುಭಾವ ಇರುವವರು ಗುರುವಾಗಬಹುದು. ಜಗದ್ಗುರುವಾಗಬಹುದು. ಇದು ಬಸವ ಸಿದ್ಧಾಂತ. ಇದು ಒಡೆಯುವ ಕಾರ್ಯ ಹೇಗೆ ಆಗುತ್ತದೆ? ಆದರೆ, ಕೆಲವರು ತಮ್ಮ ಅಸ್ತಿತ್ವಕ್ಕೆ ಧಕ್ಕೆಯಾಗುತ್ತಿದೆ, ನಿಜದ ಬಣ್ಣ ಬಯಲಾಗುತ್ತಿದೆ ಎಂಬ ಕಾರಣ ಧರ್ಮ ಒಡೆದಿದ್ದಾರೆ ಎಂದು ಕೋಲಾಹಲ ಎಬ್ಬಿಸಿ ತಮ್ಮ ಸ್ವಾರ್ಥ ಸಾಧಿಸುತ್ತಿದ್ದಾರೆ.

'ಲಿಂಗಾಯತ ಸ್ವತಂತ್ರ ಧರ್ಮ' ಎಂಬುದು ಹಿಂದೆ ಇತ್ತು. ಇಂದೂ ಇದೆ. ಎಂದೆಂದಿಗೂ ಇರುತ್ತದೆ. ಅದಕ್ಕೆ ಸಾಂವಿಧಾನಿಕ ಮಾನ್ಯತೆ ಬೇಕು ಅಷ್ಟೇ. ಒಂದಿಲ್ಲ ಒಂದು ದಿವಸ ಮಾನ್ಯತೆ ಸಿಕ್ಕೇ ಸಿಗುತ್ತದೆ ಎಂಬ ನೂರಕ್ಕೆ ನೂರರಷ್ಟು ವಿಶ್ವಾಸ ನಮಗಿದೆ.

ಲಿಂಗಾಯತರಲ್ಲಿ ಇರುವ ಪಂಚಮಸಾಲಿ, ಹಡಪದ, ಡೋಹರ, ಮೇದರ, ಮಡಿವಾಳ, ಅಂಬಿಗ, ಉರಿಲಿಂಗಪೆದ್ದಿ ಮುಂತಾದ ಗುರುಪೀಠಗಳು ಸಮಸ್ತ ಲಿಂಗಾಯತರಿಗೆ ಗುರುಗಳು. ತಮ್ಮ ಒಳಪಂಗಡಕ್ಕೆ ಮಾತ್ರ ಗುರುಗಳು ಅಲ್ಲ ಎಂಬುದು ತಿಳಿದುಕೊಳ್ಳಬೇಕು. ಉದಾಹರಣೆಗೆ ಮಂತ್ರಿಗಳು ಇರುತ್ತಾರೆ. ಮಂತ್ರಿಗಳು ಅಧಿಕಾರ ಸ್ವೀಕರಿಸಿದಾಗ ಸಮಸ್ತ ಕರ್ನಾಟಕಕ್ಕೆ ಮಂತ್ರಿಗಳು ಆಗಿರುತ್ತಾರೆ. ಆದರೆ, ಒಂದು ಜಿಲ್ಲೆಗೆ ಉಸ್ತುವಾರಿ ಮಂತ್ರಿಯಾಗುತ್ತಾರೆ. ಅದರ ಉದ್ದೇಶ ಆ ಜಿಲ್ಲೆಯ ಅಭಿವೃದ್ಧಿಗಾಗಿ ವಿಶೇಷ ಕಾಳಜಿ ಮಾಡುವುದು. ಅದೇ ರೀತಿ ಒಳಪಂಗಡಗಳ ಗುರುಪೀಠ ಎಷ್ಟೇ ಇದ್ದರೂ ಸಮಸ್ತ ಲಿಂಗಾಯತ ಸಮಾಜಕ್ಕೆ ಅವರು ಗುರುಗಳು. ಆಯಾ ಒಳಪಂಗಡಕ್ಕೆ ಉಸ್ತುವಾರಿ ಮಂತ್ರಿಗಳಿದ್ದ ಹಾಗೆ, ವಿಶೇಷ ಕಾಳಜಿವಹಿಸಿ ಆ ಸಮುದಾಯಗಳಿಗೆ ಬಸವಸಿದ್ಧಾಂತ ತಿಳಿಸಬೇಕು ಎಂಬುದೇ ಮೂಲ ಉದ್ದೇಶವಾಗಿದೆ.

ಕಲಬುರ್ಗಿ ಗಡಿಭಾಗದಲ್ಲಿ ಒಳಪಂಗಡಗಳ ಭೇದವೇ ಇಲ್ಲ. ಲಿಂಗಾಯತ ಎಂಬುದು ಒಂದೇ ಆಗಿದೆ. ಲಿಂಗಾಯತರಲ್ಲಿ ನೀವು ಯಾರು ಎಂದರೆ ಹೇಳಲಿಕ್ಕೆ ಬರುವುದಿಲ್ಲ. ಅಷ್ಟೊಂದು ಸಾಮರಸ್ಯ ಇದೆ ಎಂದು ಹೆಮ್ಮೆಯಿಂದ ಹೇಳಬಹುದು. ಲಿಂಗಾಯತ ಧರ್ಮದಲ್ಲಿ ಪಂಚಮಸಾಲಿ ಪಂಗಡ ಆರ್ಥಿಕವಾಗಿ ಹೇಗೆ ಇದೆ ಎಂಬುದು ಅಧ್ಯಯನ ಮಾಡಿ ನಿರ್ಣಯಿಸಿ ಸೌಲಭ್ಯ ಒದಗಿಸುವುದು ಬಿಡುವುದು ಸರ್ಕಾರಕ್ಕೆ ಬಿಟ್ಟ ವಿಷಯ. ಆದರೆ, ಅವರ ಹೋರಾಟವು ಲಿಂಗಾಯತ ಧರ್ಮ ವಿಭಜಿಸುವ ಪ್ರಯತ್ನವಂತೂ ಖಂಡಿತವಾಗಿ ಅಲ್ಲವೇ ಅಲ್ಲ. ಪಂಚಮಸಾಲಿ ಗುರುಪೀಠ ಸಮಸ್ತ ಲಿಂಗಾಯತ ಸಮಾಜಕ್ಕೆ ಗುರುಗಳು ಆಗಿದ್ದಾರೆ ಎಂಬುದು ಮರೆಯಬಾರದು. ಅವರ ಹಕ್ಕಿಗೆ ಅವರು ಹೋರಾಟ ಮಾಡಿದರೆ ಲಿಂಗಾಯತ ಧರ್ಮ ವಿಭಜಿಸುವ ಹುನ್ನಾರು ಹೇಗಾದೀತು? ಬಸವಣ್ಣನವರೇ ನಮ್ಮ ಧರ್ಮಗುರು, ವಚನ ಸಾಹಿತ್ಯ ಧರ್ಮಗ್ರಂಥ ಎಂದು ಈ ಸಿದ್ಧಾಂತ ಒಪ್ಪಿಕೊಳ್ಳುವ ನಾವೆಲ್ಲ ಲಿಂಗಾಯತ ಧರ್ಮದವರಾಗಿದ್ದೇವೆ. ಎಂದೆಂದಿಗೂ ಒಂದೇ ಆಗಿರುತ್ತೇವೆ.

(ಲೇಖಕ: ಬಸವಕಲ್ಯಾಣದ ಅನುಭವ ಮಂಟಪದ ಅಧ್ಯಕ್ಷ, ಲಿಂಗಾಯತ ಮಠಾಧೀಶರ ಒಕ್ಕೂಟದ ಅಧ್ಯಕ್ಷ)

ನಿರೂಪಣೆ: ಚಂದ್ರಕಾಂತ ಮಸಾನಿ


ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ
9606038256

✗ 'ಕೇರಳದಲ್ಲಿ ಓಂಕಾರವನ್ನು ನಿಷೇಧಿಸಬೇಕು ಎಂದು ಕೇರಳ ಮುಸ್ಲಿಮರು ಆಗ್ರಹಿಸುತ್ತಿದ್ದಾರೆ. ಪ್ರಶ್ನೆಪತ್ರಿಕೆ ಮೇಲೆ ಓಂಕಾರವನ್ನು ಬರೆದಿದ್ದ ಇಬ್ಬರು ಶಿಕ್ಷಕರನ್ನು ರಜೆ ಮೇಲೆ ಕಳುಹಿಸಲಾಗಿದೆ' ಎಂಬ ಬರಹ ಇರುವ ಸುದ್ದಿವಾಹಿನಿಗಳ ವರದಿಗಳ ಸ್ಕ್ರೀನ್‌ಶಾಟ್‌ಗಳನ್ನು ಆಧರಿಸಿ, ಸಾಮಾಜಿಕ ಜಾಲತಾಣಗಳಲ್ಲಿ ಹಲವರು ಪೋಸ್ಟ್‌ಗಳನ್ನು ಮಾಡಿದ್ದಾರೆ. 'ಕೇರಳದಲ್ಲಿ ಮುಸ್ಲಿಮರ ಜನಸಂಖ್ಯೆ ಪ್ರಮಾಣ ಶೇ 40ರಷ್ಟನ್ನು ದಾಟಿದೆ. ಕೇರಳದಲ್ಲಿ ಈಗ ಹಿಂದೂ ಧರ್ಮ ಅಪಾಯದಲ್ಲಿದೆ. ಇಂತಹ ಸಂದರ್ಭದಲ್ಲೂ ಜಾತ್ಯತೀತ ನಿಲುವುಗಳನ್ನು ಪಾಲಿಸಬೇಕೆ? ನಮ್ಮ ಧರ್ಮವನ್ನು ನಾವು ರಕ್ಷಿಸಿಕೊಳ್ಳುವುದೆ, ಬೇಡವೇ' ಎಂದು ಹಲವರು ಪ್ರಶ್ನಿಸಿದ್ದಾರೆ. ಈ ಪೋಸ್ಟ್‌ಗಳು ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗಿವೆ.

✓ ಸುದ್ದಿ ವಾಹಿನಿಗಳ ವರದಿಗಳನ್ನು ತಿರುಚಲಾಗಿದೆ. ಫೆಬ್ರುವರಿ 27ರಂದು ಟೈಮ್ಸ್ ನೌ, 'ಅಯಿಕ್ಕೋಡ್‌ನ ಸರ್ಕಾರಿ ಶಾಲೆಯ ಗಣಿತದ ಶಿಕ್ಷಕರು ಗಣಿತ ಪ್ರಾರ್ಥನೆಯನ್ನು ಸಿದ್ಧಪಡಿಸಿ ವಿದ್ಯಾರ್ಥಿಗಳಿಗೆ ನೀಡಿದ್ದರು. ಆ ಪ್ರಾರ್ಥನೆಯನ್ನು ದಿನವೂ ಅಭ್ಯಾಸ ಮಾಡುವಂತೆ ಹೇಳಿದ್ದರು. ಇದಕ್ಕೆ ಕೆಲವು ವಿದ್ಯಾರ್ಥಿಗಳ ಪೋಷಕರು ವಿರೋಧ ವ್ಯಕ್ತಪಡಿಸಿದ್ದರು. ಇದು ರಾಜಕೀಯ ನಾಯಕರ ಟೀಕೆಗೂ ಕಾರಣವಾಗಿತ್ತು. ಹೀಗಾಗಿ ಇಬ್ಬರೂ ಶಿಕ್ಷಕರನ್ನು ರಜೆಯ ಮೇಲೆ ಕಳುಹಿಸಲಾಗಿದೆ' ಎಂದು ವರದಿ ಮಾಡಿದೆ. ಈ ವರದಿಗಳನ್ನು ತಿರುಚಿ, ಸುಳ್ಳುಸುದ್ದಿ ಹರಡಲಾಗುತ್ತಿದೆ ಎಂದು ದಿ ಲಾಜಿಕಲ್ ಇಂಡಿಯನ್ ಫ್ಯಾಕ್ಟ್‌ಚೆಕ್ ಪ್ರಕಟಿಸಿದೆ.

ಗುಂಡಣ್ಣ



ಬೆರಗಿನ ಬೆಳಕು

ಗುರುರಾಜ ಕರಜಗಿ

ಮತ್ತೊಂದು ಪರೀಕ್ಷೆ

ಈಗ ರಾಜ ವಿದೇಹನಿಗೆ ತಡೆಯಲಾಗಲಿಲ್ಲ. ಎಷ್ಟು ಪರೀಕ್ಷೆಗಳನ್ನು ಮಾಡಿದರೂ ಮಹೋಷಧಕುಮಾರನಾದ ಬೋಧಿಸತ್ವ ಗೆಲ್ಲುತ್ತಲೇ ಇದ್ದಾನೆ. ಆದರೆ ಈ ಮಂತ್ರಿಗಳು ಅವನ ಬಗ್ಗೆ ಅಸಹನೆಯನ್ನು ಹೊಂದಿದ್ದಾರೆ ಮತ್ತು ಅವನು ಬಂದರೆ ತಮಗೆ ತೊಂದರೆಯಾದೀತು ಎಂಬ ಭಯಪಡುತ್ತಾರೆ ಎಂಬುದನ್ನು ತಿಳಿದ ರಾಜ, ತಾನೇ ಹೋಗಿ ಮಹೋಷಧಕುಮಾರನನ್ನು ಕರೆದು ತರಬೇಕು ಎಂದು ಮಿತವಾದ ಸೈನಿಕಪಡೆಯನ್ನು ಜೊತೆಮಾಡಿಕೊಂಡು ಮಂಗಲಾಶ್ವವನ್ನೇರಿ ಹೊರಟುಬಿಟ್ಟ. ಇದನ್ನು ಮಂತ್ರಿಗಳಿಗೆ ಹೇಳಲಿಲ್ಲ. ಆದರೆ ದಾರಿಯಲ್ಲಿ ಸೀಳಿದ ಭೂಮಿಯಲ್ಲಿ ಕುದುರೆಯ ಕಾಲು ಸಿಕ್ಕಿ ಮುರಿದು ಹೋಯಿತು. ಅದು ಅಪಶಕುನವಾಯಿತೆಂದು ಮರಳಿ ಮಿಥಿಲೆಗೆ ಬಂದ. ಮಂತ್ರಿಗಳು ಬಂದು, 'ಮಹಾರಾಜ, ದಯವಿಟ್ಟು ನಮ್ಮನ್ನು ತಪ್ಪು ತಿಳಿಯುವುದು ಬೇಡ. ನಾವು ತಮ್ಮ ಹಿತಚಿಂತಕರು. ತಾವು ನಂಬಿರುವ ಮಹೋಷಧಕುಮಾರನನ್ನು ಸರಿಯಾಗಿ ಪರೀಕ್ಷಿಸದೆ ಒಪ್ಪಿದರೆ ಮುಂದೆ ದೇಶಕ್ಕೆ ಅನ್ಯಾಯವಾಗುವುದು' ಎಂದು ಹೇಳಿದರು. 'ಪ್ರಭೂ, ದಯವಿಟ್ಟು ಒಂದು ಸಂದೇಶವನ್ನು ಕಳುಹಿಸಿ. ನಾವು ನಿನ್ನೆಡೆಗೆ ಬರುವಾಗ ಕುದುರೆಯ ಗೊರಸು ಮುರಿಯಿತು. ಆದ್ದರಿಂದ ನೀನೇ ಇಲ್ಲಿಗೆ ಬಾ. ಹೇಸರಗತ್ತೆಯನ್ನೋ, ಹಿರಿಯದಾದದ್ದನ್ನೋ ಏರಿ ಬಾ'. ರಾಜ ಅದರಂತೆಯೇ ಸಂದೇಶ ಕಳುಹಿಸಿದ.

ಮಹೋಷಧಕುಮಾರ ತನ್ನ ತಂದೆಯ ಬಳಿಗೆ ಹೋಗಿ, 'ಅಪ್ಪಾ, ರಾಜ ನಮ್ಮನ್ನು ಬರಹೇಳಿದ್ದಾನೆ. ಅಲ್ಲೊಂದು ಪರೀಕ್ಷೆ ಇದೆ. ತಾವು ತಪ್ಪು ತಿಳಿಯಬಾರದು. ತಾವು ಸಾವಿರ ಜನ ಶ್ರೇಷ್ಠಿಯರನ್ನು ಕರೆದುಕೊಂಡು, ಚಂದನದ ಪಾತ್ರೆಗಳಲ್ಲಿ ಹೊಸ ತುಪ್ಪವನ್ನು ತುಂಬಿಸಿಕೊಂಡು ಹೋಗಿ. ದರಬಾರಿನಲ್ಲಿ ಒಂದು ಉಚಿತಸ್ಥಾನದಲ್ಲಿ ಕುಳಿತುಕೊಳ್ಳಿ. ನಾನು ನಂತರ ಬಂದಾಗ ರಾಜ ನನಗೆ ಕುಳಿತುಕೊಳ್ಳಲು ಒಂದು ಸ್ಥಾನವನ್ನು ಹೇಳುತ್ತಾನೆ. ಆಗ ತಾವು ದಯವಿಟ್ಟು ಮೇಲೆದ್ದು ತಮ್ಮ ಆಸನವನ್ನು ನನಗೆ ಬಿಟ್ಟುಕೊಡಬೇಕು' ಎಂದು ಬೇಡಿದ. ಅದರಂತೆಯೇ ತಂದೆ ರಾಜಭವನಕ್ಕೆ ಹೋದರು. ಮಹೋಷಧಕುಮಾರ ತನ್ನ ಸಾವಿರ ಜನ ಸ್ನೇಹಿತ, ತರುಣರನ್ನು ಜೊತೆಮಾಡಿಕೊಂಡು ಅರಮನೆಗೆ ಬಂದ. ದಾರಿಯಲ್ಲಿ ಒಂದು ಕತ್ತೆಯನ್ನು ಹಿಡಿದು, ಬಾಯಿಕಟ್ಟಿ ಅದನ್ನೆತ್ತಿಕೊಂಡು ಬಂದರು.

ಅರಮನೆಯಲ್ಲಿ ಮಹೋಷಧಕುಮಾರನನ್ನು ಕಂಡು ರಾಜನಿಗೆ ಬಹಳ ಸಂತೋಷವಾಯಿತು. ಒಂದು ಒಳ್ಳೆಯ ಆಸನದಲ್ಲಿ ಕುಳಿತುಕೋ ಎಂದು ಹೇಳಿದ. ಮೊದಲು ಯೋಜಿಸಿದಂತೆ ತಂದೆ ಥಟ್ಟನೇ ಮೇಲೆದ್ದು ಬೇರೆ ಆಸನದಲ್ಲಿ ಕುಳಿತುಕೊಂಡ. ಕುಮಾರ ತಂದೆ ಕುಳಿತಿದ್ದ ಆಸನದಲ್ಲಿ ಕುಳಿತ. ಮಂತ್ರಿಗಳು ಇದನ್ನು ಕಂಡು ಕೈತಟ್ಟಿ ನಕ್ಕರು. ಈತ ತಂದೆಯನ್ನು ಮೇಲೆ ಎಬ್ಬಿಸಿ ತಾನು ಕುಳಿತು ಅಪಮಾನ ಮಾಡಿದ್ದಾನೆ. ಇವನೆಂಥ ಪಂಡಿತ ಎಂದು ಹೀಯಾಳಿಸಿದರು. ಆಗ ಕುಮಾರ ತಾನು ತಂದಿದ್ದ ಕತ್ತೆಯನ್ನು ಎಲ್ಲರ ಮುಂದೆ ನಿಲ್ಲಿಸಿ, 'ರಾಜಾ ಇದರ ಬೆಲೆ ಎಷ್ಟು?' ಎಂದು ಕೇಳಿದ. 'ಬಹುಶಃ ಏಳೆಂಟು ಕಹಾಪಣಗಳಾಗಬಹುದು' ಎಂದ ರಾಜ. 'ಇದರ ಸಂಪರ್ಕದಿಂದ ಶ್ರೇಷ್ಠ ಕುದುರೆಯ ಗರ್ಭದಿಂದ ಜನಿಸಿದ ಹೇಸರಗತ್ತೆಯ ಬೆಲೆ ಎಷ್ಟಾಗಬಹುದು?' ಎಂದು ಕೇಳಿದ. 'ಅದು ಅಮೂಲ್ಯವಾದದ್ದು' ಎಂದ ರಾಜ. 'ಕತ್ತೆ ವಯಸ್ಸಿನಲ್ಲಿ ಹಿರಿಯದು, ಹೇಸರಗತ್ತೆ ಕಿರಿಯದು. ಆದರೆ ಹೇಸರಗತ್ತೆಯ ಬೆಲೆ ಹೆಚ್ಚು. ಯಾವಾಗಲೂ ಹಿರಿತನವೇ ಬುದ್ಧಿವಂತಿಕೆಗೆ ಮಾನದಂಡವಾಗುವುದಿಲ್ಲ. ನನ್ನ ತಂದೆ ನನಗೆ ದೇವರ ಸಮಾನ. ಆದರೆ ಹಿರಿತನವೇ ಸದಾಕಾಲ ಶ್ರೇಷ್ಠವಲ್ಲನೆಂಬುದನ್ನು ತೋರಲು ಮೊದಲು ಅವರ ಅಪ್ಪಣೆ ಪಡೆದೇ ಹೀಗೆ ಮಾಡಿದೆ. ಆದರೆ ನಿಮ್ಮ ಅಮಾತ್ಯರಿಗೆ ಅದೂ ತಿಳಿಯದೆ ಚಪ್ಪಾಳೆ ತಟ್ಟಿದರು. ಇವರು ಬರೀ ವಯಸ್ಸಾದವರು, ಬುದ್ಧಿಯಲ್ಲಿ ಹಿರಿಯರಲ್ಲ' ಎಂದು ಚೆನ್ನಾಗಿ ಛೀಮಾರಿ ಹಾಕಿದ. ಮಹಾರಾಜನಿಗೆ ಬೋಧಿಸತ್ವ, ಮಹೋಷಧಕುಮಾರನ ಬಗ್ಗೆ ಅಭಿಮಾನ ಹೆಚ್ಚಿತು ❖

ದಿನ ಭವಿಷ್ಯ

ಸೋಮವಾರ 1 ಮಾರ್ಚ್ 2021

ಶಾರ್ವರಿ ನಾಮ ಸಂವತ್ಸರ ಉತ್ತರಾಯಣ ಶಿಶಿರ ಋತು ಮಾಘ ಮಾಸ ಕೃಷ್ಣ ಪಕ್ಷ ಮಳೆ ನಕ್ಷತ್ರ ಶತಬಿಷ ದ್ವಿತೀಯ ಗಂ. 10-44 (ಹ. 10-59) ಸೋಮವಾರ ನಿತ್ಯ ನಕ್ಷತ್ರ ಉತ್ತರ ಫಲ್ಗುಣಿ ಗಂ 8-13 (ಬೆ. 9-59) ಶೂಲ ನಾಮ ಯೋಗ ಗಂ 21-54 ಗರಜ ಕರಣ ಗಂ 10-44 ವಿಷ. ಗಂ. 28-3 ಅಮೃತ ಗಂ. 50-42 ರಾಹುಕಾಲ: ಬೆ. ಗಂ. 7-30 ರಿಂದ 9-00 ಗುಳಿಕ ಮ. ಕಾಲ ಗಂ 1-30 ರಿಂದ 3-00 ಯಮಗಂಡ ಕಾಲ ಬೆ. ಗಂ 10-30 ರಿಂದ 12-00 ಸೂರ್ಯೋದಯ: 6-39 ಸೂರ್ಯಾಸ್ತ: 6-25 ಅದೃಷ್ಟ ಸಂಖ್ಯೆ 4, 9

ಮೇಷ: ಬರಬೇಕಾದ ಹಣ ಹಿಂದಿರುಗಿ ಬರುವ ಸಾಧ್ಯತೆ. ಉಳಿತಾಯದಲ್ಲಿ ಪ್ರಗತಿ. ಆರೋಗ್ಯದಲ್ಲಿ ಸುಧಾರಣೆ. ಸಂತಾನ ಭಾಗ್ಯ ಪ್ರಾಪ್ತಿಯಾಗುವ ಕಾಲ ಸನ್ನಿಹಿತವಾಗಿದೆ. ನಿಂತು ಹೋದ ಯೋಜನೆಗಳು ಪುನರಾರಂಭಗೊಳ್ಳುವವು.

ವೃಷಭ: ಬೇರೆಯವರ ಅಪಹಾಸ್ಯಕ್ಕೆ ಗುರಿಯಾಗುವ ಸಾಧ್ಯತೆಯಿದ್ದು ಗಂಭೀರ ನಡವಳಿಕೆ ಅಗತ್ಯ. ಮಾನಸಿಕ ಚಂಚಲತೆಯುಂಟಾಗಿ ದುಸ್ವಪ್ನಗಳು ಉಂಟಾಗಬಹುದು. ನಿರಾಶೆಗೊಳ್ಳುವ ಅವಶ್ಯಕತೆ ಇಲ್ಲ.

ಮಿಥುನ: ನೌಕರರು ಮತ್ತು ಸ್ವಂತ ಉದ್ಯೋಗಿಗಳು ತಪ್ಪು ತಡೆಗಳಿಗೆ ಅವಕಾಶವಾಗದಂತೆ ಎಚ್ಚರಿಕೆ ವಹಿಸುವುದು ಅಗತ್ಯ. ಉದ್ಯೋಗ ಅಥವಾ ವಾಸದ ಸ್ಥಾನ ಪಲ್ಲಟವಾಗುವ ಸಾಧ್ಯತೆ. ಯಾವುದೇ ಆತಂಕಕ್ಕೆ ಒಳಗಾಗುವ ಅವಶ್ಯಕತೆ ಇಲ್ಲ.

ಕರ್ಕಾಟಕ: ಆರ್ಥಿಕ ಅನುಕೂಲ ನಿಮ್ಮನ್ನರಸಿ ಬರುವುದು. ಧಾರ್ಮಿಕ ಕಾರ್ಯಗಳಲ್ಲಿ ತೊಡಗಿಸಿಕೊಳ್ಳುವುದರೊಂದಿಗೆ ವೆಚ್ಚವನ್ನೂ ಮಾಡುವಿರಿ. ನಿಮ್ಮ ಉತ್ತಮ ನಡವಳಿಕೆಯಿಂದಾಗಿ ಗೌರವಾದರಗಳು ಲಭ್ಯವಾಗುವವು.

ಸಿಂಹ: ಕಣ್ಣು ಅಥವಾ ತಲೆನೋವಿನಿಂದ ಬಳಲುವ ಸಾಧ್ಯತೆ. ಅತಿಯಾದ ವಾದ ವಿವಾದದಿಂದಾಗಿ ವೈರತ್ವ ಬರಬಹುದು. ಅಮೂಲ್ಯ ವಸ್ತುಗಳನ್ನು ಕಳೆದುಕೊಳ್ಳುವ ಸಾಧ್ಯತೆಯಿದ್ದು ಜಾಗೃತೆ ವಹಿಸಿ. ದಂಡ ತೆರಬೇಕಾದೀತು.

ಕನ್ಯಾ: ನಿಮ್ಮ ಕೆಲಸ-ಕಾರ್ಯಗಳು ಮಂದಗತಿಯಲ್ಲೂ ಪ್ರಗತಿಯನ್ನು ಕಾಣುವುದು. ಉದರ ಸಂಬಂಧಿ ಸಣ್ಣಪುಟ್ಟ ತೊಂದರೆಗಳು ಕಂಡುಬರಬಹುದು. ಹೊಸ ಕಾರ್ಯ ಪ್ರಾರಂಭಿಸದಿರುವುದೇ ಒಳ್ಳೆಯದು.

ತುಲಾ: ಸಂಕಷ್ಟಗಳು ಕಡಿಮೆಯಾಗಿ ಕೆಲಸ-ಕಾರ್ಯಗಳು ಸುಗಮ ಚಾಲನೆ ಪಡೆದುಕೊಳ್ಳುವವು. ಸಿಟ್ಟು ಸೆಡವುಗಳಿಂದಾಗಿ ತೊಂದರೆ. ಅನಿರೀಕ್ಷಿತ ಅನಾವಶ್ಯಕ ಖರ್ಚು ಸಂಭವಿಸುವವು. ಆರೋಗ್ಯದಲ್ಲಿ ಸುಧಾರಣೆ.

ವೃಶ್ಚಿಕ: ಆರ್ಥಿಕ ಉನ್ನತಿ ಕಂಡುಬರುವುದು. ಶತ್ರುಗಳ ವಿರುದ್ಧ ಜಯದ ಸವಾರಿ ಮಾಡುವ ಯೋಗವಿದೆ. ಬಹುದಿನಗಳ ಸಮಸ್ಯೆಯಿಂದ ಪರಿಹಾರ ದೊರೆತು ನೆಮ್ಮದಿಯ ಜೀವನ ಕಂಡುಬರುವುದು. ಬಂಧುಗಳ ಆಗಮನವನ್ನು ನಿರೀಕ್ಷಿಸಿ.

ಧನು: ನಿಮ್ಮ ನಿರ್ಣಯಗಳು ಫಲ ನೀಡುವವು. ಆದಾಯದಲ್ಲಿ ಹೆಚ್ಚಳ ಕಂಡುಬಂದು ಪರಿಸ್ಥಿತಿ ಸುಧಾರಿಸುವುದು. ವಾಹನ ಖರೀದಿ ಭಾಗ್ಯ. ಉದ್ಯೋಗ ಕ್ಷೇತ್ರದಲ್ಲಿ ಗೌರವಾದರ. ಸ್ನೇಹಿತರೊಂದಿಗೆ ಸಂತಸ ಹಂಚಿಕೊಳ್ಳುವಿರಿ.

ಮಕರ: ಹಿರಿಯರೊಂದಿಗೆ ವಿಧೇಯತೆಯಿಂದ ನಡೆದುಕೊಳ್ಳಿ. ಸಾಮಾಜಿಕ ಕಾರ್ಯಗಳಿಂದಾಗಿ ನೆಮ್ಮದಿ. ವೃಥಾ ವೈಮನಸ್ಸು ಎದುರಾಗಬಹುದು. ಆರ್ಥಿಕ ವಿಷಯದಲ್ಲಿ ಯಥಾಸ್ಥಿತಿ ಮುಂದುವರೆದು, ಕೆಲಸ-ಕಾರ್ಯಗಳಲ್ಲಿ ಉತ್ಸಾಹ.

ಕುಂಭ: ಮನೆಯಲ್ಲಿ ಶುಭಮಂಗಲ ಕಾರ್ಯಗಳು ನೆರವೇರುವ ಸಾಧ್ಯತೆ. ನೌಕರಿಯ ವಿಷಯದಲ್ಲಿ ಉನ್ನತ ಸ್ಥಾನ ಅಥವಾ ಬದಲಾವಣೆ ಕಂಡುಬರುವುದು. ಆರ್ಥಿಕ ಅನುಕೂಲತೆ ಉತ್ತಮಗೊಳ್ಳುವುದು.

ಮೀನ: ಅನಾವಶ್ಯಕ ಖರ್ಚು. ಬಂಧುಗಳ ಭೇಟಿ ಸಾಧ್ಯತೆ. ಉದ್ಯೋಗದಲ್ಲಿ ಹೆಚ್ಚಿನ ಒತ್ತಡ. ಆಹಾರದಲ್ಲಿನ ವ್ಯತ್ಯಯದಿಂದಾಗಿ ಅಜೀರ್ಣ ಸಂಬಂಧಿ ರೋಗಗಳು ಕಂಡುಬರಬಹುದು. ಸಂಗಾತಿಯಿಂದ ಉತ್ತಮ ಸಹಕಾರ.

ನಿಮ್ಮ ಜನ್ಮದಿನ 1-ಮಾರ್ಚ್: ಈ ದಿನ ಅತ್ಯಂತ ಶುಭಕರ. ವ್ಯವಹಾರದಲ್ಲಿ ಸಾಮಾನ್ಯ ಪ್ರಗತಿ, ಉದ್ಯೋಗಸ್ಥರಿಗೆ ಉತ್ತಮ ಆದಾಯ. ಮಕ್ಕಳ ಕಡೆಯಿಂದ ಗೌರವಾನ್ವಿತ ಸ್ಥಾನಮಾನಗಳು ಲಭ್ಯವಾಗುವವು. ಶೀತ ಪ್ರಕೃತಿಯಿಂದಾಗಿ ತಲೆನೋವು, ಕಣ್ಣು ನೋವುಗಳಿಂದ ತೊಂದರೆ ಉಂಟಾಗಬಹುದು. ದೂರದ ಪ್ರಯಾಣಗಳ ಅವಕಾಶ ದೊರಕಲಿದೆ.

ಪದಬಂಧ 4523

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ಕಡಲೆಬೇಳೆ ಬೆಲ್ಲ ಬೇಯಿಸಿ ಮಾಡಿದ ಸಿಹಿ ಖಾದ್ಯ (4)
3.ಸಣ್ಣ ರೆಂಬೆ ಅಥವಾ ಚಿಕ್ಕ ರೆಂಬೆ (4)
5.ಕೆಲಸದವರು ಸಿಡಿಸಿದ ರಾಡಿ! (3)
7.ಬಿಮ್ಮಾನ ತೋರಿದಾತನ ದುಃಖ! (3)
9.ಹೊಟ್ಟೆಕಿಚ್ಚು ಹೀಗೆ ಬಂದಿದೆ (3)
10.ಬಾಣವನ್ನು ಹಿಡಿದಿರುವ ಶೈವ ಭಕ್ತ (3)
11.ವಾಲಿಯ ಮಗನಿವನು (3)
15.ಕೋಲನ್ನು ಹಿಡಿದುದಕ್ಕೇ ಈ ಗದ್ದಲ! (4)
16.ಕಾರನ್ನು ಏರಿದವನು ನಡೆಸಿದ ಆಡಳಿತ (4)

ಮೇಲಿಂದ ಕೆಳಕ್ಕೆ

1.ದೇವರಿಗೆ ಸಲ್ಲಿಸುವ ಮುಡಿಪು (3)
2.ನಾರಿನಿಂದ ಮಾಡಿರುವ ಬಟ್ಟೆ (2)
3.ವಾರದ ಕೊನೆಗೆ ಬಂದ ಅಭ್ಯರ್ಥಿ (5)
4.ಕಾಡಾನೆಗಳನ್ನು ಹಿಡಿಯಲು ಮಾಡಿದ ಕಂದಕ (2)
6.ಒಳ್ಳೆಯ ಅವಕಾಶ (5)
8.ಈತ ಬಿಳಿಯ ಕೂದಲುಳ್ಳವನು (5)
9.ಸಾಯುವ ಸಮಯವಿದು (5)
12.ಒಡ್ಡೋಲಗದಲ್ಲಿ ಅಧಿಕಾರ ನಡೆಸುವಿಕೆ (3)
13.ಮಹಿಷವಿಲ್ಲಿ ತಿರುಗಿ ನಿಂತಿದೆಯಲ್ಲಾ? (2)
14.ಉತ್ತರದ ಕಡೆಯ ಚಿಕ್ಕಪ್ಪ (2)

4522ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ವಿಯೋಗ 3.ಸವಾರ 6.ರಿಪೇರಿ 7.ಸಿಬ್ಬಂದಿ 8.ನಲುಮೆ 9.ಚಿಂತೆ 10.ಬಸದಿ 12.ತೀರ 13.ವಿನಂತಿ 14.ಓಲಗ 15.ನಗರ 17.ತಗರಿ 18.ಸಮ್ಮೋಹ

ಮೇಲಿಂದ ಕೆಳಕ್ಕೆ:
1.ವಿಧಾನಸೌಧ 2.ಗರಿಮೆ 3.ಸರಿ 4.ರಸಿಕತೆ 5.ಹಂದಿ 9.ಚಿಂದಿ 10.ಬರ 11.ವಿಶ್ರಾಂತಿಗೃಹ 12.ತೀವ್ರಗತಿ 13.ವಿರಸ 14.ನರಿ 15.ಓಲೆ

ಸುಡೊಕು 4909

	5		1			4		7
6				5				
	4	2	8				6	
4			5		9	2		1
	2	8		4			5	
3		5	2		8			6
5	7					8		9
		1	4		5			
	8			7			3	4

ಆಡುವುದು ಹೇಗೆ? ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

4908 ಸುಡೊಕು

5	7	6	8	3	1	9	4	2
9	8	2	4	5	6	7	3	1
3	4	1	2	7	9	8	5	6
4	1	7	5	6	8	3	2	9
6	5	9	3	2	7	1	8	4
8	2	3	9	1	4	5	6	7
1	6	5	7	8	2	4	9	3
7	9	8	6	4	3	2	1	5
2	3	4	1	9	5	6	7	8

ವಂಶಾಡಳಿತದಿಂದ ಕಾಂಗ್ರೆಸ್ ಕುಸಿತ: ಶಾ



ಕಾರೈಕಲ್‌ನಲ್ಲಿ ಅಮಿತ್ ಶಾ

ಕಾರೈಕಲ್/ಚೆನ್ನೈ (ಪಿಟಿಐ): ಕಾಂಗ್ರೆಸ್‌ನ ಹಿರಿಯ ಮುಖಂಡರೆಲ್ಲ ಬಿಜೆಪಿ ಸೇರುತ್ತಿದ್ದಾರೆ. ವಂಶಾಡಳಿತ ಮತ್ತು ಒಂದು ಕುಟುಂಬದಿಂದಾಗಿ ಕಾಂಗ್ರೆಸ್ ಪಕ್ಷವು ಪುದುಚೇರಿಯಲ್ಲಿ ಮಾತ್ರವಲ್ಲ, ಇಡೀ ದೇಶದಲ್ಲಿ ಕುಸಿಯುತ್ತಿದೆ ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಭಾನುವಾರ ಹೇಳಿದ್ದಾರೆ.

ತಮಿಳುನಾಡಿನ ವಿಲ್ಲುಪುರಂನಲ್ಲಿಯೂ ಶಾ ಅವರು ವಂಶಾಡಳಿತದ ವಿಚಾರವನ್ನೇ ಪ್ರಸ್ತಾಪಿಸಿದರು. 'ಡಿಎಂಕೆ ಮತ್ತು ಕಾಂಗ್ರೆಸ್ ನಾಯಕರು ತಮ್ಮ ಕುಟುಂಬಗಳ ಬಗ್ಗೆಯಷ್ಟೇ ಯೋಚಿಸುತ್ತಾರೆ. ಮಗ ರಾಹುಲ್ ಗಾಂಧಿಯನ್ನು ಪ್ರಧಾನಿ ಮಾಡುವುದಷ್ಟೇ ಕಾಂಗ್ರೆಸ್ ಅಧ್ಯಕ್ಷೆ ಸೋನಿಯಾ ಗಾಂಧಿಗೆ ಬೇಕಾಗಿದೆ. ಮಗ ಉದಯನಿಧಿಯನ್ನು ಮುಖ್ಯಮಂತ್ರಿ ಮಾಡುವುದು ಡಿಎಂಕೆ ಮುಖ್ಯಸ್ಥ ಸ್ಟಾಲಿನ್ ಬಯಕೆ' ಎಂದು ಶಾ ಹೇಳಿದ್ದಾರೆ.

ಮೀನುಗಾರಿಕೆಗೆ ಪ್ರತ್ಯೇಕ ಸಚಿವಾಲಯ ಇಲ್ಲ ಎಂದು ಕಾಂಗ್ರೆಸ್ ಸಂಸದ ರಾಹುಲ್ ಗಾಂಧಿ ಅವರು ಇತ್ತೀಚೆಗೆ ಹೇಳಿದ್ದನ್ನೂ ಶಾ ಅವರು ಲೇವಡಿ ಮಾಡಿದರು. 'ಕೆಲ ದಿನಗಳ ಹಿಂದೆ ಇಲ್ಲಿಗೆ ಬಂದಿದ್ದ ರಾಹುಲ್ ಅವರು ಕೇಂದ್ರದಲ್ಲಿ ಮೀನುಗಾರಿಕೆಗೆ ಪ್ರತ್ಯೇಕ ಸಚಿವಾಲಯ ಏಕಿಲ್ಲ ಎಂದು ಪ್ರಶ್ನಿಸಿದ್ದರು. ರಾಹುಲ್ ಅವರೇ, ನೀವು ಆಗ ರಜೆಯಲ್ಲಿದ್ದೀರಿ. ಮೋದಿ ಅವರು 2019ರಲ್ಲಿಯೇ ಎರಡು ಪ್ರತ್ಯೇಕ ಇಲಾಖೆಗಳನ್ನು ಸ್ಥಾಪಿಸಿದ್ದಾರೆ. ಅದು ನಿಮ್ಮ ಅರಿವಿಗೆ ಬಂದಿಲ್ಲ' ಎಂದರು.


ತಮಿಳು ಭಾಷೆಯಲ್ಲಿ ಮಾತನಾಡಲು ಸಾಧ್ಯವಾಗದ್ದಕ್ಕೆ ಶಾ ಅವರು ವಿಷಾದವನ್ನೂ ವ್ಯಕ್ತಪಡಿಸಿದರು.

ಮೈತ್ರಿ ರಾಜಕಾರಣ

ತಮಿಳುನಾಡಿನಲ್ಲಿ ಡಿಎಂಕೆ ಮತ್ತು ಕಾಂಗ್ರೆಸ್ ಮೈತ್ರಿ ಮಾಡಿಕೊಂಡಿವೆ. ಆಡಳಿತಾರೂಢ ಎಐಎಡಿಎಂಕೆ ಮತ್ತು ಬಿಜೆಪಿ ನಡುವೆ ಮೈತ್ರಿ ಇದೆ. ಪುದುಚೇರಿಯಲ್ಲಿ ಕಳೆದ ಚುನಾವಣೆಯಲ್ಲಿ ಎಲ್ಲ 30 ಕ್ಷೇತ್ರಗಳಲ್ಲಿ ಬಿಜೆಪಿ ಸೋತಿತ್ತು. ಈ ಬಾರಿ, ಎನ್.ಆರ್. ರಂಗಸ್ವಾಮಿ ಅವರ ಎನ್.ಆರ್. ಕಾಂಗ್ರೆಸ್ ನೇತೃತ್ವದಲ್ಲಿ ಹಲವು ಪಕ್ಷಗಳ ಮೈತ್ರಿಕೂಟವನ್ನು ಬಿಜೆಪಿ ರೂಪಿಸಿದೆ. ಪುದುಚೇರಿಯ ಮುಂದಿನ ಸರ್ಕಾರ ರಚನೆಯಲ್ಲಿ ಮಹತ್ವದ ಪಾತ್ರ ವಹಿಸುವ ಉಮೇದನ್ನು ಬಿಜೆಪಿ ಹೊಂದಿದೆ.

ಬಿಜೆಪಿ ಸೋಲಿಸಲು ಪ್ರೀತಿಯೇ ಅಸ್ತ್ರ: ರಾಹುಲ್

ಜನತಂತ್ರದ ಹಬ್ಬ 2021



ಶಿಕ್ಷಕರೊಂದಿಗೆ ಮಾತು ಸಂವಾದದಲ್ಲಿ ರಾಹುಲ್ ಪಿಟಿಐ ಚಿತ್ರ

ತಿರುನಲ್ವೇಲಿ (ತಮಿಳುನಾಡು) (ಪಿಟಿಐ): ತಮ್ಮ ಪ್ರತಿಸ್ಪರ್ಧಿಗಳನ್ನು 'ತುಳಿದು ಹಾಕಿರುವ' ಪ್ರಧಾನಿ ನರೇಂದ್ರ ಮೋದಿ ಅವರು 'ಅಸಾಧ್ಯ ಶತ್ರು'. ಪ್ರೀತಿ ಮತ್ತು ಅಹಿಂಸೆಯ ದಾರಿಯ ಮೂಲಕವೇ ಅವರನ್ನು ರಾಜಕೀಯ ವಿಸ್ಮೃತಿಗೆ ಕಳುಹಿಸಬೇಕು ಎಂದು ಕಾಂಗ್ರೆಸ್ ಸಂಸದ ರಾಹುಲ್ ಗಾಂಧಿ ತಮಿಳುನಾಡಿನ ಚುನಾವಣಾ ಪ್ರಚಾರ ಕಾರ್ಯಕ್ರಮದಲ್ಲಿ ಹೇಳಿದ್ದಾರೆ.

ತಮ್ಮ ಉತ್ತಮ ಚಿಂತನೆಗಳನ್ನು ಜಾರಿಗೆ ತರಲು ಅಧಿಕಾರಕ್ಕೆ ಬರುವವರೆಗೆ ಕಾಯುವುದಕ್ಕಿಂತ ಈಗಿನ ಕೇಂದ್ರ ಸರ್ಕಾರವೇ ಅವುಗಳನ್ನು ಜಾರಿಗೆ ತರುವಂತೆ ಒತ್ತಡ ಹೇರುವುದು ಉತ್ತಮವಲ್ಲವೇ ಎಂಬ ಪ್ರಶ್ನೆಗೆ ರಾಹುಲ್ ಉತ್ತರಿಸಿದರು.

'ನಾವು ಅಸಾಧ್ಯ ಶತ್ರುವಿನ ವಿರುದ್ಧ ಹೋರಾಡುತ್ತಿದ್ದೇವೆ ಎಂಬುದು ನಿಜ. ಹಣದಲ್ಲಿ ಬಹಳ ಪ್ರಭಾವಿಯಾಗಿರುವ ಶತ್ರುವಿನ ವಿರುದ್ಧದ ಹೋರಾಟ ನಮ್ಮದು. ಪ್ರತಿಸ್ಪರ್ಧಿಗಳನ್ನು ತುಳಿದು ಹಾಕುವ ಶತ್ರುವಿನ ವಿರುದ್ಧ ಹೋರಾಡುತ್ತಿದ್ದೇವೆ. ಆದರೆ, ಇದನ್ನು ನಾವು ಹಿಂದೆಯೂ ಮಾಡಿದ್ದೇವೆ. ಈಗ ಇರುವ ಹೊಸ ಶತ್ರುವಿಗಿಂತ ಬಹಳ ದೊಡ್ಡದಾಗಿದ್ದ ಶತ್ರು ಬ್ರಿಟಿಷರನ್ನು ನಾವು ಸೋಲಿಸಿದ್ದೇವೆ' ಎಂದು ವಿವರಿಸಿದರು.

'ಬ್ರಿಟಿಷ್ ಸಾಮ್ರಾಜ್ಯಕ್ಕೆ ಹೋಲಿಸಿದರೆ ಮೋದಿ ಅವರು ಏನೂ ಅಲ್ಲ. ಈ ದೇಶದ ಜನರು ಬ್ರಿಟಿಷ್ ಸಾಮ್ರಾಜ್ಯವನ್ನು ಹಿಂದಕ್ಕೆ ಅಟ್ಟಿದ್ದಾರೆ. ಅದೇ ರೀತಿ ನಾವು ಮೋದಿ ಅವರನ್ನು ನಾಗ್ಪುರಕ್ಕೆ (ಆರ್‌ಎಸ್‌ಎಸ್ ಕೇಂದ್ರ ಕಚೇರಿ) ಕಳುಹಿಸುತ್ತೇವೆ' ಎಂದರು. ಆದರೆ, ಮೋದಿ ಅಥವಾ ಅವರ ಪಕ್ಷದ ಬಗ್ಗೆ ದ್ವೇಷ, ಸಿಟ್ಟು ಅಥವಾ ಹಿಂಸೆ ಇಲ್ಲದೆಯೇ ಇದನ್ನು ಸಾಧಿಸಲಾಗುವುದು ಎಂದು ಅವರು ಹೇಳಿದರು.

ಬಿಜೆಪಿಗೆ ಬಿಪಿಎಫ್ ಸವಾಲು

ಗುವಾಹಟಿ (ಪಿಟಿಐ): 'ನಾವು ಈಗ ಬಿಜೆಪಿಯ ಸಖ್ಯವನ್ನು ತೊರೆದಿದ್ದೇವೆ. ನಾವು ಇಲ್ಲದೆ ಬಿಜೆಪಿ, ಅಸ್ಸಾಂನಲ್ಲಿ ಹೇಗೆ ಅಧಿಕಾರಕ್ಕೆ ಬರುತ್ತದೆ ಎಂಬುದನ್ನು ನೋಡುತ್ತೇವೆ' ಎಂದು ಅಸ್ಸಾಂನ ಬೋಡೊ ಪೀಪಲ್ಸ್ ಫ್ರಂಟ್‌ನ (ಬಿಪಿಎಫ್) ಮುಖ್ಯಸ್ಥ ಹಾಗರಾಮ್ ಮೊಹಿಲಾರಿ ಬಿಜೆಪಿಗೆ ಸವಾಲು ಹಾಕಿದ್ದಾರೆ.

ಅಸ್ಸಾಂನಲ್ಲಿ ಕಾಂಗ್ರೆಸ್‌ನ ಮಿತ್ರಪಕ್ಷವಾಗಿದ್ದ ಬಿಪಿಎಫ್ 2016ರ ವಿಧಾನಸಭೆ ಚುನಾವಣೆಯ ಫಲಿತಾಂಶದ ನಂತರ ಬಿಜೆಪಿ ಜತೆಗೆ ಮೈತ್ರಿ ಮಾಡಿಕೊಂಡಿತ್ತು. 2019ರ ಲೋಕಸಭಾ ಚುನಾವಣೆಯಲ್ಲಿ ಬಿಜೆಪಿಯು ಬಿಪಿಎಫ್ ಅನ್ನು ಕಡೆಗಣಿಸಿತ್ತು. ಬೋಡೋಲ್ಯಾಂಡ್‌ನಲ್ಲಿ ಸ್ವತಂತ್ರವಾಗಿ ಸ್ಪರ್ಧಿಸಿದ್ದ ಬಿಪಿಎಫ್ ಅತ್ಯಧಿಕ ಸ್ಥಾನಗಳನ್ನು ಗೆದ್ದುಕೊಂಡಿತ್ತು. ಈಗ ಎನ್‌ಡಿಎಯನ್ನು ತೊರೆದಿರುವ ಬಿಪಿಎಫ್, ಕಾಂಗ್ರೆಸ್ ನೇತೃತ್ವದ ಮಹಾಮೈತ್ರಿಕೂಟವನ್ನು ಸೇರಿಕೊಂಡಿದೆ. ಭಾನುವಾರ ಇಲ್ಲಿ ನಡೆದ ಕಾರ್ಯಕ್ರಮದಲ್ಲಿ ಬಿಪಿಎಫ್ ನಾಯಕರು ಅಧಿಕೃತವಾಗಿ ಮಹಾಮೈತ್ರಿಕೂಟವನ್ನು ಸೇರಿಕೊಂಡರು. ಆನಂತರ ನಡೆದ ಪ್ರಚಾರ ಸಭೆಯಲ್ಲಿ ಹಾಗರಾಮ್ ಅವರು, ಬಿಜೆಪಿಗೆ ಈ ಸವಾಲು ಹಾಕಿದ್ದಾರೆ.

'ಬಿಜೆಪಿಯು ಅಸ್ಸಾಂನಲ್ಲಿ ಸರ್ಕಾರ ರಚಿಸಲು ಸ್ಥಳೀಯ ನಾಯಕರನ್ನು ಅಪಹರಿಸುತ್ತಿದೆ. ಬೋಡೋಲ್ಯಾಂಡ್ ಚುನಾವಣೆಯ ವೇಳೆಯೂ ಬಿಜೆಪಿ ಹೀಗೇ ಮಾಡಿತ್ತು. ಆದರೆ, ಈ ಚುನಾವಣೆಯಲ್ಲಿ ಬಿಜೆಪಿ ಅಸ್ಸಾಂನಿಂದ ಹೊರಗೆ ನಡೆಯುವುದನ್ನು ನಾವು ನೋಡುತ್ತೇವೆ' ಎಂದು ಹಾಗರಾಮ್ ಹೇಳಿದ್ದಾರೆ.

ಪ್ರಿಯಾಂಕಾ ಪ್ರಚಾರ: ಅಸ್ಸಾಂನಲ್ಲಿ ಕಾಂಗ್ರೆಸ್ ಪರ ಪ್ರಚಾರ ನಡೆಸಲು ಪಕ್ಷದ ಪ್ರಧಾನ ಕಾರ್ಯದರ್ಶಿ ಪ್ರಿಯಾಂಕಾ ಗಾಂಧಿ ವಾದ್ರಾ ಅಸ್ಸಾಂಗೆ ಸೋಮವಾರ ತೆರಳಲಿದ್ದಾರೆ. ಎರಡು ದಿನಗಳ ಅಸ್ಸಾಂ ಭೇಟಿಯಲ್ಲಿ ಅವರು ಹಲವು ಚುಣಾವನಾ ಪ್ರಚಾರ ಸಭೆಗಳನ್ನು ನಡೆಸಲಿದ್ದಾರೆ. ಇಲ್ಲಿನ ಖ್ಯಾತ ಕಾಮಾಕ್ಯ ದೇವಾಲಯಕ್ಕೆ, ಮಹಾಭೈರವ ದೇವಾಲಯಕ್ಕೆ ತೆರಳಿ, ಪೂಜೆ ಸಲ್ಲಿಸಲಿದ್ದಾರೆ. ಇಲ್ಲಿನ ಚಹಾ ತೋಟದ ಕಾರ್ಮಿಕರ ಜತೆ, ಮಹಿಳೆಯರ ಜತೆ ಸಂವಾದ ನಡೆಸಲಿದ್ದಾರೆ.



ಕೇರಳ ವಿಧಾನಸಭೆ ಚುನಾವಣೆ ಘೋಷಣೆಯಾದ ಹಿನ್ನೆಲೆಯಲ್ಲಿ ತಿರುವನಂತಪುರದಲ್ಲಿ ಅರೆಸೇನಾಪಡೆಯ ಯೋಧರು ಭಾನುವಾರ ಪಥಸಂಚಲನ ನಡೆಸಿದರು ಪಿಟಿಐ ಚಿತ್ರ

> ಮೆಟ್ರೊಮ್ಯಾನ್ ಶ್ರೀಧರನ್ ಅವರ ಬಿಜೆಪಿ ಸೇರ್ಪಡೆ ಗಿಮಿಕ್, ಕೇರಳದಲ್ಲಿ ಬಿಜೆಪಿ ಅಂಚಿನ ಆಟಗಾರ ಮಾತ್ರ
>
> **ತಾರೀಕ್ ಅನ್ವರ್,** ಕೇರಳ ಕಾಂಗ್ರೆಸ್ ಉಸ್ತುವಾರಿ

> ಪಶ್ಚಿಮ ಬಂಗಾಳದಲ್ಲಿ ಬಿಜೆಪಿ, ಟಿಎಂಸಿಯನ್ನು ಮಹಾಮೈತ್ರಿಕೂಟವು ಸೋಲಿಸಲಿದೆ. ಬಂಗಾಳದಲ್ಲಿ ಇನ್ನು ಮುಂದೆ ಬಿಜೆಪಿ, ಟಿಎಂಸಿ ಇರುವುದಿಲ್ಲ
>
> **ಅಧೀರ್ ರಂಜನ್ ಚೌಧರಿ,** ಲೋಕಸಭೆಯಲ್ಲಿ ಕಾಂಗ್ರೆಸ್ ನಾಯಕ

ದಿನದ ಬೆಳವಣಿಗೆ

- ಎಐಎಡಿಎಂಕೆಯ ಸ್ಥಾಪಕ ಎಂ.ಜಿ.ರಾಮಚಂದ್ರನ್ ಅವರು ದಶಕದ ಕಾಲ ಪ್ರತಿನಿಧಿಸಿದ್ದ ಅಲಂದೂರು ವಿಧಾನಸಭಾ ಕ್ಷೇತ್ರದಲ್ಲಿ ಸ್ಪರ್ಧಿಸಲು ಮಕ್ಕಳ ನೀತಿ ಮಯ್ಯಂ ಮುಖ್ಯಸ್ಥ ಕಮಲ್ ಹಾಸನ್ ಒಲವು ತೋರಿದ್ದಾರೆ
- ತಮಿಳುನಾಡಿನಲ್ಲಿ ಡಿಎಂಕೆ ಮತ್ತು ಎಐಎಡಿಎಂಕೆ ಪಕ್ಷಗಳಿಗೆ ಪರ್ಯಾಯವನ್ನು ಸೃಷ್ಟಿಸಲು ಕಮಲ್ ಹಾಸನ್ ಅವರ ಮಕ್ಕಳ ನೀತಿ ಮಯ್ಯಂ ಯತ್ನಿಸುತ್ತಿದೆ. ಈ ಸಲುವಾಗಿ ಸಮಾನ ಮನಸ್ಕ ಪಕ್ಷಗಳನ್ನು ಒಟ್ಟುಗೂಡಿಸಲು ಕಮಲ್ ಯತ್ನಿಸುತ್ತಿದ್ದಾರೆ
- ಕೇರಳದ ಆಡಳಿತಾರೂಢ ಎಲ್‌ಡಿಎಫ್ ಈ ಬಾರಿಯ ಚುನಾವಣಾ ಪ್ರಚಾರಕ್ಕೆ ಹೊಸ ಘೋಷಣೆಯನ್ನು ಭಾನುವಾರ ಘೋಷಿಸಿದೆ. 'ಎಲ್‌ಡಿಎಫ್ ಗೆಲುವು ಖಚಿತ' ಎಂಬ ಘೋಷಣೆ ಅಡಿ ಪ್ರಚಾರ ನಡೆಸಲಾಗುತ್ತದೆ.
- ಅಸ್ಸಾಂನಲ್ಲಿ ವಿಧಾನಸಭೆ ಚುನಾವಣೆಯ ನಂತರ ನಮ್ಮ ಮುಖ್ಯಮಂತ್ರಿ ಅಭ್ಯರ್ಥಿಯನ್ನು ಘೋಷಿಸುತ್ತೇವೆ: ಕಾಂಗ್ರೆಸ್ ನೇತೃತ್ವದ ಮಹಾಮೈತ್ರಿಕೂಟ

'ಜೆಡಿಎಸ್ ಸೇರಲು ತನ್ವೀರ್‌ಗೆ ಸ್ವಾಗತ'

ಪ್ರಜಾವಾಣಿ ವಾರ್ತೆ

ಮೈಸೂರು: ಮೈಸೂರು ಮಹಾನಗರ ಪಾಲಿಕೆ ಮೇಯರ್ ಚುನಾವಣೆ ಹಾಗೂ ಮೈತ್ರಿ ವಿಚಾರ ದಿನಕ್ಕೊಂದು ತಿರುವು ಪಡೆಯುತ್ತಿದ್ದು, ಗೊಂದಲಕ್ಕೆ ಸಿದ್ದರಾಮಯ್ಯ ಅವರೇ ನೇರ ಕಾರಣ ಎಂದಿರುವ ಜೆಡಿಎಸ್ ಶಾಸಕ ಸಾ.ರಾ. ಮಹೇಶ್, ಶಾಸಕ ತನ್ವೀರ್ ಸೇಠ್ ಅವರನ್ನು ಕಾಂಗ್ರೆಸ್‌ನಿಂದ ವಜಾ ಮಾಡಿದರೆ ತಮ್ಮ ಪಕ್ಷಕ್ಕೆ ಸ್ವಾಗತಿಸುವುದಾಗಿ ಹೇಳಿದರು.

ತನ್ವೀರ್ ಅವರಿಗೆ ಜೆಡಿಎಸ್ ಟಿಕೆಟ್ ಕೊಡುತ್ತೀರಾ ಎಂಬ ವಿಚಾರಕ್ಕೆ, 'ಮೊದಲು ಅವರು ಪಕ್ಷಕ್ಕೆ ಬರಲಿ. ಅಲ್ಪಸಂಖ್ಯಾತ ಮುಖಂಡರಾಗಿರುವ ಅವರು ಯಾವುದೇ ಪಕ್ಷದಲ್ಲಿ ಇದ್ದರೂ ಗೌರವಿಸುತ್ತೇವೆ' ಎಂದು ಪ್ರತಿಕ್ರಿಯಿಸಿದರು.

ಭಾನುವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, 'ಸಿದ್ದರಾಮಯ್ಯ ಪದೇ ಪದೇ ಜೆಡಿಎಸ್ ಹಾಗೂ ಕುಮಾರಣ್ಣನನ್ನು ಹೀಯಾಳಿಸಿದ ಕಾರಣಕ್ಕೆ ಪಾಲಿಕೆಯಲ್ಲಿ ಕಾಂಗ್ರೆಸ್ ಜೊತೆಗಿನ ಮೈತ್ರಿ ಮುರಿದುಕೊಳ್ಳಲು ಮುಂದಾದೆವು. ಅವರ ತವರು ಮೈಸೂರಿನಲ್ಲೇ ಜೆಡಿಎಸ್ ಶಕ್ತಿ ಏನೆಂದು ತೋರಿಸಿದ್ದೇವೆ. ಇದು ಸ್ಯಾಂಪಲ್ ಅಷ್ಟೆ. ಆ ಪಕ್ಷದ ಇನ್ನುಳಿದ ಯಾವುದೇ ನಾಯಕರ ಬಗ್ಗೆ ನಮ್ಮ ತಕರಾರು ಇಲ್ಲ' ಎಂದರು.

'ಮೈತ್ರಿ ಮುಂದುವರಿಸಿ ಮೇಯರ್ ಸ್ಥಾನ ಬಿಟ್ಟುಕೊಡುವಂತೆ ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಮೊದಲು ಆಹ್ವಾನ ನೀಡಿದರು. ನನ್ನ ಹಾಗೂ ಕುಮಾರಸ್ವಾಮಿ ಜತೆಗೆ ಎರಡು ಬಾರಿ ಕರೆ ಮಾಡಿ, ಮಾತನಾಡಿದರು. ಮತ್ತೊಮ್ಮೆ ಕರೆ ಸ್ವೀಕರಿಸಲು ಸಾಧ್ಯವಾಗಲಿಲ್ಲ. ಚುನಾವಣೆಗೆ ಕೆಲವೇ ನಿಮಿಷಗಳು ಇದ್ದಾಗ ಮೇಯರ್ ಸ್ಥಾನ ಬಿಟ್ಟುಕೊಡುವುದಾಗಿ ತನ್ವೀರ್ ಹೇಳಿದರು' ಎಂದು ಬಹಿರಂಗಪಡಿಸಿದರು.

'ಕಾಂಗ್ರೆಸ್ ಅಥವಾ ಬಿಜೆಪಿ ಜೊತೆ ಮೈತ್ರಿ ಮಾಡಿಕೊಳ್ಳದಿದ್ದರೂ ಜೆಡಿಎಸ್‌ಗೆ ಮೇಯರ್ ಪಟ್ಟ ಸಿಗುತಿತ್ತು. ಹೀಗಾಗಿ, ಸ್ವತಂತ್ರವಾಗಿ ಕಣಕ್ಕಿಳಿಯಲು ನಿರ್ಧರಿಸಿದ್ದೆವು. ಆದರೆ, ನಮ್ಮ ಪಕ್ಷದ ಶಾಸಕ ಜಿ.ಟಿ.ದೇವೇಗೌಡ ಹಾಗೂ ವಿಧಾನ ಪರಿಷತ್ ಸದಸ್ಯ ಸಂದೇಶ್ ನಾಗರಾಜ ಮತದಾನದಿಂದ ದೂರ ಉಳಿದರು. ಈ ವಿಚಾರವಾಗಿ ಚುನಾವಣೆಯ ಹಿಂದಿನ ರಾತ್ರಿ ತನ್ವೀರ್ ಕೂಡ ಸಂದೇಶ ಕಳುಹಿಸಿದ್ದರು. ಇವರಿಬ್ಬರು ಬಿಜೆಪಿ ಜೊತೆ ಹೋಗಬಹುದೆಂಬ ಕಾರಣಕ್ಕೆ ಜೆಡಿಎಸ್‌ನ ಪಾಲಿಕೆ ಸದಸ್ಯರು ಕೊನೆ ಕ್ಷಣದಲ್ಲಿ ಕಾಂಗ್ರೆಸ್ ಜೊತೆ ಮೈತ್ರಿ ಮಾಡಿಕೊಳ್ಳಬೇಕಾದ ಪರಿಸ್ಥಿತಿ ಉದ್ಭವಿಸಿತು' ಎಂದು ವಿವರಿಸಿದರು.

'ಮುಂದಿನ ಬಾರಿ ಕಾಂಗ್ರೆಸ್‌ಗೆ ಮೇಯರ್ ಸ್ಥಾನ ಬಿಟ್ಟುಕೊಡುತ್ತೇವೆ. ಆದರೆ, ಸಿದ್ದರಾಮಯ್ಯ ಅವರು ತಮ್ಮ ಮಾತಿನ ಮೇಲೆ ನಿಯಂತ್ರಣ ಇಟ್ಟುಕೊಳ್ಳಬೇಕು' ಎಂದು ಎಚ್ಚರಿಕೆ ನೀಡಿದರು.

ಬಿಗ್‌ಬಾಸ್ 8ನೇ ಆವೃತ್ತಿ ಆರಂಭ

ಪ್ರಜಾವಾಣಿ ವಾರ್ತೆ



ಸುದೀಪ್



ಶುಭಾ ಪೂಂಜಾ



ಶಂಕರ್ ಅಶ್ವತ್ಥ್

ಬೆಂಗಳೂರು: ಬಿಗ್‌ಬಾಸ್ 8ನೇ ಆವೃತ್ತಿಯ ಬಹುನಿರೀಕ್ಷಿತ ಸರಣಿ ಕಲರ್ಸ್ ಕನ್ನಡ ವಾಹಿನಿಯಲ್ಲಿ ಭಾನುವಾರ ಆರಂಭಗೊಂಡಿದೆ. ನಟ ಕಿಚ್ಚ ಸುದೀಪ್ ನಿರೂಪಣೆಯಲ್ಲಿ ಈ ಸರಣಿ ಭರ್ಜರಿಯಾಗಿ ಆರಂಭಗೊಂಡಿದೆ.

ಬಿಗ್‌ಬಾಸ್ ತಂಡ ಈಗಾಗಲೇ ಪ್ರಕಟಿಸಿರುವಂತೆ ಈ ಆವೃತ್ತಿಯಲ್ಲಿ ಖ್ಯಾತನಾಮರೇ ಇದ್ದಾರೆ. ನಟಿಯರಾದ ಶುಭಾ ಪೂಂಜಾ, ನಿಧಿ ಸುಬ್ಬಯ್ಯ, ಮಜಾಭಾರತ ಖ್ಯಾತಿಯ ಮಂಜು ಪಾವಗಡ, ಯುಟ್ಯೂಬರ್ ಶಮಂತ್ ಗೌಡ (ಬ್ರೋ–ಗೌಡ ವೆಬ್ ಸಿರೀಸ್ ಖ್ಯಾತಿ), ಬ್ರಹ್ಮಗಂಟು ಧಾರಾವಾಹಿಯ ನಟಿ ಗೀತಾ ಭಾರತಿ ಭಟ್ (ಗುಂಡಮ್ಮ), ಹಾಸ್ಯಮಯ ವಿಡಿಯೊ ತುಣುಕುಗಳಿಂದ ಖ್ಯಾತರಾಗಿರುವ ರಾಘು (ರಘು ವೈನ್ ಸ್ಟೋರ್), ನಟಿ ಧನುಶ್ರೀ, ಪುಟ್ಟಗೌರಿ ಮದುವೆಯ 'ಅಜ್ಜಮ್ಮ' ಖ್ಯಾತಿಯ ಚಂದ್ರಕಲಾ ಮೋಹನ್, ಚಿತ್ರರಂಗದಲ್ಲಿ ಸಾಕಷ್ಟು ಸುದ್ದಿ ಮಾಡಿದ, ಡ್ರಗ್ಸ್ ಪ್ರಕರಣದ ಹಲವು ಸುಳಿವುಗಳನ್ನು ಹೊರಹಾಕಿದ ಪ್ರಶಾಂತ್ ಸಂಬರಗಿ, 'ತಲ್ಲಣ' ಖ್ಯಾತಿಯ ನಟಿ ನಿರ್ಮಲಾ ಚನ್ನಪ್ಪ, ಕ್ರಿಕೆಟ್ ಲೀಗ್ ಪ್ಲೇಯರ್ ರಾಜೀವ್, ಹಿರಿಯ ನಟ ಶಂಕರ್ ಅಶ್ವತ್ಥ್, ನಟಿ, ರೂಪದರ್ಶಿ ದಿವ್ಯಾ ಸುರೇಶ್, ಬೈಕ್‌ರೈಡರ್ ಉಡುಪಿಯ ಅರವಿಂದ್ ಕೆ.ಪಿ. ಅವರು ಬಿಗ್‌ಬಾಸ್ ಮನೆ ಸೇರಿದ್ದಾರೆ.

ರಾಜಕಾರಣಿಗಳನ್ನೂ ಒಳಗೊಂಡಿರುವ ಈ ಆವೃತ್ತಿಯಲ್ಲಿ ವಿಧಾನ ಪರಿಷತ್ ಸದಸ್ಯ ಎಚ್. ವಿಶ್ವನಾಥ್ ಅವರು ಕೂಡಾ ಬಿಗ್‌ಬಾಸ್ ಸ್ಪರ್ಧಿಗಳಲ್ಲಿ ಇದ್ದಾರೆ ಎಂದು ಮೂಲಗಳು ಹೇಳಿವೆ.

ನಟಿ ಶುಭಾ ಪೂಂಜಾ ಪ್ರವೇಶಿಸುವ ವೇಳೆ ಶುಭಾ ಅವರ ಭಾವೀ ಪತಿ ಸುಮಂತ್ ಮಹಾಬಲ ಮತ್ತು ತಾಯಿ ಇದ್ದರು. 'ದಾಲ ವರಿ ಮಲ್ಪೊಡ್ಚಿ ಆರಾಮಡ್ ಇಪ್ಪುಲೆ ಎಂದು ಶುಭಾ ಅವರು ತುಳುವಿನಲ್ಲಿ ತಾಯಿಗೆ ಶುಭ ಹಾರೈಸಿದರು.

ಬಿಗ್‌ಬಾಸ್ ಪ್ರವೇಶದ ಸಂದರ್ಭ ಹಲವು ಸ್ಪರ್ಧಿಗಳು ಭಾವುಕ ಮಾತುಗಳನ್ನು ಹಂಚಿಕೊಂಡರು. ನೂರು ದಿನ ಯಶಸ್ವಿಯಾಗಿ ಪೂರೈಸುವ ವಿಶ್ವಾಸವನ್ನೂ ವ್ಯಕ್ತಪಡಿಸಿದರು.

ಎಫ್‌ಡಿಎ: 2.49 ಲಕ್ಷ ಅಭ್ಯರ್ಥಿಗಳು ಹಾಜರು

ವಿಜ್ಞಾನ ವಿಷಯ ಪ್ರಶ್ನೆಗಳೇ ಹೆಚ್ಚು: ಅಭ್ಯರ್ಥಿಗಳ ಅಸಮಾಧಾನ

ಪ್ರಜಾವಾಣಿ ವಾರ್ತೆ



ಬೆಂಗಳೂರಿನ ಅಲ್ ಅಮೀನ್ ಕಲಾ ಮತ್ತು ವಾಣಿಜ್ಯ ಕಾಲೇಜಿನಲ್ಲಿನ ಪರೀಕ್ಷಾ ಕೇಂದ್ರದಲ್ಲಿ ಎಫ್‌ಡಿಎ ಪರೀಕ್ಷೆ ಬರೆಯಲು ಹೋಗುತ್ತಿದ್ದ ಅಭ್ಯರ್ಥಿಗಳು

ಬೆಂಗಳೂರು: ಪ್ರಥಮ ದರ್ಜೆ ಸಹಾಯಕರ (ಎಫ್‌ಡಿಎ) ನೇಮಕಾತಿ ಪರೀಕ್ಷೆಯು ಭಾನುವಾರ ರಾಜ್ಯದಾದ್ಯಂತ 1,057 ಕೇಂದ್ರಗಳಲ್ಲಿ ಸುಸೂತ್ರವಾಗಿ ನಡೆಯಿತು. ಕರ್ನಾಟಕ ಲೋಕಸೇವಾ ಆಯೋಗ ನಡೆಸಿದ ಈ ಪರೀಕ್ಷೆಯನ್ನು 2.49 ಲಕ್ಷ ಅಭ್ಯರ್ಥಿಗಳು ಬರೆದರು.

'ಅರ್ಜಿ ಸಲ್ಲಿಸಿದ ಅಭ್ಯರ್ಥಿಗಳನ್ನು ಗಣನೆಗೆ ತೆಗೆದುಕೊಂಡರೆ ಶೇ 66ರಷ್ಟು, ಪ್ರವೇಶ ಪತ್ರಗಳನ್ನು ಡೌನ್‌ಲೋಡ್ ಮಾಡಿಕೊಂಡವರನ್ನು ಮಾತ್ರ ಪರಿಗಣಿಸಿದರೆ ಶೇ 92ರಷ್ಟು ಅಭ್ಯರ್ಥಿಗಳು ಹಾಜರಾಗಿದ್ದಾರೆ. 2.68 ಲಕ್ಷ ಅಭ್ಯರ್ಥಿಗಳು ಪ್ರವೇಶಪತ್ರ ಡೌನ್‌ಲೋಡ್ ಮಾಡಿಕೊಂಡಿದ್ದರು' ಎಂದು ಕೆಪಿಎಸ್‌ಸಿ ಕಾರ್ಯದರ್ಶಿ ಜಿ. ಸತ್ಯವತಿ 'ಪ್ರಜಾವಾಣಿ'ಗೆ ತಿಳಿಸಿದರು.

ವಿಜ್ಞಾನ ಪ್ರಶ್ನೆ ಹೆಚ್ಚು: ಸಾಮಾನ್ಯ ಜ್ಞಾನ ಪ್ರಶ್ನೆಪತ್ರಿಕೆಯಲ್ಲಿ ವಿಜ್ಞಾನ ವಿಷಯಕ್ಕೆ ಸಂಬಂಧಿಸಿದ ಪ್ರಶ್ನೆಗಳೇ ಹೆಚ್ಚಾಗಿದ್ದರಿಂದ ಕೆಲವು ಅಭ್ಯರ್ಥಿಗಳು ಅಸಮಾಧಾನ ವ್ಯಕ್ತಪಡಿಸಿದರು.

'ಸಾಮಾನ್ಯ ಜ್ಞಾನದ 100 ಪ್ರಶ್ನೆಗಳಲ್ಲಿ 42ಕ್ಕೂ ಹೆಚ್ಚು ಪ್ರಶ್ನೆಗಳು ವಿಜ್ಞಾನಕ್ಕೆ ಸಂಬಂಧಿಸಿದವುಗಳಾಗಿವೆ. ಪದವಿಯಲ್ಲಿ ಕಲಾ ವಿಭಾಗದಲ್ಲಿ ಓದಿದವರಿಗೆ ಪ್ರಶ್ನೆಪತ್ರಿಕೆ ಕಠಿಣ ಎನ್ನಿಸಿತು' ಎಂದು ಅಭ್ಯರ್ಥಿಯೊಬ್ಬರು ಹೇಳಿದರು.

'ಪ್ರತಿ ಬಾರಿ ಸಮಾಜ ವಿಜ್ಞಾನಕ್ಕೆ ಸಂಬಂಧಿಸಿದ ಪ್ರಶ್ನೆಗಳೇ ಹೆಚ್ಚಾಗಿರುತ್ತಿದ್ದವು. ಈ ಸಲ ವಿಜ್ಞಾನ ವಿಷಯದ ಪ್ರಶ್ನೆಗಳು ಜಾಸ್ತಿ ಎನಿಸಿದ್ದರೂ, ಸಾಮಾನ್ಯ ಜ್ಞಾನ ವಿಭಾಗದ ಪ್ರಶ್ನೆಗಳೂ ಇದರಲ್ಲಿ ಸೇರಿದ್ದವು. ಸರಳ ವಿಜ್ಞಾನದ ಪ್ರಶ್ನೆಗಳೇ ಇದ್ದುದರಿಂದ ಕಠಿಣವೇನೂ ಇರಲಿಲ್ಲ' ಎಂದು ವಿಜ್ಞಾನ ಹಿನ್ನೆಲೆಯ ಅಭ್ಯರ್ಥಿಯೊಬ್ಬರು ತಿಳಿಸಿದರು.

ಎಫ್‌ಡಿಎ ಪರೀಕ್ಷೆಯಲ್ಲಿ ವಿಜ್ಞಾನ ಪ್ರಶ್ನೆಗಳೇ ಹೆಚ್ಚಾಗಿದ್ದರ ಬಗ್ಗೆಯೂ ಸಾಮಾಜಿಕ ಜಾಲತಾಣದಲ್ಲಿ ಸ್ವಾರಸ್ಯಕರ ಚರ್ಚೆ ಆಯಿತು. 'ಎಫ್‌ಡಿಎ ಅಭ್ಯರ್ಥಿಗಳಿಗೆ ಕೆಪಿಎಸ್‌ಸಿ ವತಿಯಿಂದ ವಿಜ್ಞಾನ ದಿನದ ಶುಭಾಶಯಗಳು' ಎಂದು ಒಬ್ಬರು ಪೋಸ್ಟ್ ಮಾಡಿದರೆ, 'ಇದೇನು ಎಫ್‌ಡಿಎ ಎಕ್ಸಾಮೋ, ಮೆಡಿಕಲ್ ಎಕ್ಸಾಮೋ' ಎಂದು ಕೆಲವು ಅಭ್ಯರ್ಥಿಗಳು ಅಸಮಾಧಾನ ವ್ಯಕ್ತಪಡಿಸಿದರು.

ಕೋವಿಡ್ ಅಂಕಿ–ಅಂಶ

ಆಧಾರ ವರ್ಲ್ಡೋಮೀಟರ್ ಪಿಟಿಐ

	ವಿಶ್ವ	ಭಾರತ	ರಾಜ್ಯ
ಒಟ್ಟು ಪ್ರಕರಣ	11.45 ಕೋಟಿ ▲	1.111 ಕೋಟಿ ▲	9,51,251 ▲ (ಒಟ್ಟು ಸೋಂಕಿತರು)
ಸಕ್ರಿಯ ಪ್ರಕರಣ	2.194 ಕೋಟಿ ▲	1.657ಲಕ್ಷ ▲	5,804 ▲
ಗುಣಮುಖ	9.004ಕೋಟಿ ▲	1.078 ಕೋಟಿ ▲	9,33,097 ▲
ಸಾವು	25.397ಲಕ್ಷ ▲	1.571ಲಕ್ಷ ▲	12,331 ▲

ದಿನದ ಏರಿಕೆ	ವಿಶ್ವ	ಭಾರತ	ರಾಜ್ಯ
ಹೊಸ ಪ್ರಕರಣ	3.87ಲಕ್ಷ ▼	15,309 ▼	521 ▼
ಗುಣಮುಖ	3.74ಲಕ್ಷ ▼	10,954 ▼	350 ▼
ಸಾವು	8,101 ▼	103 ▼	05 ▲

121ಐಸಿಯುನಲ್ಲಿ ಇರುವವರು

ಎಲ್ಲಿ ಹೆಚ್ಚು ಪ್ರಕರಣ (ಹಿಂದಿನ 24 ಗಂಟೆಗಳಲ್ಲಿ): 64,320 ಅಮೆರಿಕ ▼; 59,438 ಬ್ರೆಜಿಲ್ ▼; 23,996 ಫ್ರಾನ್ಸ್ ▼

ಎಲ್ಲಿ ಹೆಚ್ಚು ಸಕ್ರಿಯ ಪ್ರಕರಣಗಳು (ಲಕ್ಷಗಳಲ್ಲಿ): 90.45 ಅಮೆರಿಕ ▼; 33.94 ಫ್ರಾನ್ಸ್ ▲; 12.01 ಬ್ರಿಟನ್ ▼

ಎಲ್ಲಿ ಹೆಚ್ಚು ಸಾವು: 52,154 ಮಹಾರಾಷ್ಟ್ರ ▲; 12,496 ತಮಿಳುನಾಡು ▲; 10,910 ದೆಹಲಿ ▲

ಎಲ್ಲಿ ಹೆಚ್ಚು ಪ್ರಕರಣ (ಲಕ್ಷಗಳಲ್ಲಿ): 21.55 ಮಹಾರಾಷ್ಟ್ರ ▲; 10.59 ಕೇರಳ ▲; 8.899 ಆಂಧ್ರಪ್ರದೇಶ ▲

ಪ್ರಜಾವಾಣಿ ಗ್ರಾಫಿಕ್ಸ್

ಪೂಜಾರಿಗೆ ಪ್ರಶಸ್ತಿ ಸಮರ್ಪಿಸಿದ ನಳಿನ್

ಪ್ರಜಾವಾಣಿ ವಾರ್ತೆ

ಉಳ್ಳಾಲ (ಮಂಗಳೂರು ತಾ.): ಇಲ್ಲಿನ ಬ್ರಹ್ಮಶ್ರೀ ಬಿಲ್ಲವ ವೇದಿಕೆಯು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ನಳಿನ್ ಕುಮಾರ್ ಕಟೀಲ್ ಅವರಿಗೆ ಕೊಡಮಾಡಿದ 'ಬಿಲ್ಲವ ಶ್ರೀ' ಪ್ರಶಸ್ತಿಯನ್ನು, ಅವರು ಸ್ವೀಕರಿಸುವ ಬದಲಾಗಿ ಕಾಂಗ್ರೆಸ್‌ನ ಹಿರಿಯ ಮುಖಂಡ ಜನಾರ್ದನ ಪೂಜಾರಿ ಅವರಿಗೆ ಸಮರ್ಪಿಸಿದರು.

ಇಲ್ಲಿನ ಕಾಪಿಕಾಡ್ ಗಟ್ಟಿ ಸಮಾಜ ಭವನದಲ್ಲಿ ಭಾನುವಾರ ನಡೆದ ಸಮಾರಂಭದಲ್ಲಿ ಅಭಿನಂದನೆ ಸ್ವೀಕರಿಸಿ ಮಾತನಾಡಿದ ನಳಿನ್ ಕುಮಾರ್, 'ಪ್ರಶಸ್ತಿ, ಪುರಸ್ಕಾರಗಳು 60 ವರ್ಷದ ನಂತರ ಪಡೆಯುವುದು ಯೋಗ್ಯ. ನಾನು ಪ್ರಶಸ್ತಿ ಸ್ವೀಕರಿಸುವುದಿಲ್ಲ. ಅಂತಹ ಸಾಧನೆಗಳನ್ನು ಮಾಡಿಲ್ಲ. 'ಬಿಲ್ಲವ ಶ್ರೀ' ಪುರಸ್ಕಾರಕ್ಕೆ ಜನಾರ್ದನ ಪೂಜಾರಿ ಅವರೇ ಅರ್ಹರು' ಎಂದರು.

'ಪ್ರತಿ ಚುನಾವಣೆಯಲ್ಲೂ ಜನಾರ್ದನ ಪೂಜಾರಿ ಅವರ ಆಶೀರ್ವಾದ ಪಡೆದಿದ್ದೇನೆ. ಅವರು ಕಳಂಕವಿಲ್ಲದ, ಭ್ರಷ್ಟಾಚಾರ ರಹಿತ ರಾಜಕಾರಣಿ' ಎಂದರು.

ಒಳನೋಟ

ಸಹಜತೆಯತ್ತ ಬದುಕು

ಬೆಂಗಳೂರು: 'ಚೇತರಿಕೆಯಲ್ಲಿ ಪ್ರವಾಸೋದ್ಯಮ' ಶೀರ್ಷಿಕೆಯಡಿ 'ಪ್ರಜಾವಾಣಿ'ಯಲ್ಲಿ ಭಾನುವಾರ (ಫೆ.28) ಪ್ರಕಟವಾದ 'ಒಳನೋಟ' ವರದಿಗೆ ರಾಜ್ಯದಾದ್ಯಂತ ಓದುಗರು ಪ್ರತಿಕ್ರಿಯಿಸಿದ್ದಾರೆ. ಆಯ್ದ ಪ್ರತಿಕ್ರಿಯೆಗಳು ಇಲ್ಲಿವೆ.

ಪ್ರವಾಸೋದ್ಯಮಕ್ಕೆ ಪುಷ್ಟಿ ನೀಡಿ



ಪ್ರವಾಸಿ ಸ್ಥಳಗಳಲ್ಲಿ ಪ್ರವಾಸಿಗರನ್ನು ಅವಲಂಬಿಸಿರುವ ವಾಹನ ಚಾಲಕರು, ವ್ಯಾಪಾರಿಗಳು ಹಾಗೂ ಮನರಂಜನೆಯ ಚಟುವಟಿಕೆಗಳಲ್ಲಿ ತೊಡಗಿದ್ದವರಿಗೆ ಕೋವಿಡ್‌ನಿಂದ ದುಡಿಮೆಯೇ ಇಲ್ಲವಾಗಿತ್ತು. ಇದರಿಂದ ಜೀವನ ನಿರ್ವಹಣೆಗೆ ಬೇರೆ ದಿಕ್ಕು ತೋಚದ ಸ್ಥಿತಿಯಲ್ಲಿದ್ದರು. ನೆಲಕಚ್ಚಿದ್ದ ಪ್ರವಾಸೋದ್ಯಮ ಚೇತರಿಕೆ ಕಾಣಬೇಕು. ಇದರಿಂದ ಸಾವಿರಾರು ಕುಟುಂಬಗಳಿಗೆ ನೆರವಾಗಲಿದೆ. ಸರ್ಕಾರವೂ ಈ ಬಗ್ಗೆ ಹೆಚ್ಚಿನ ಆದ್ಯತೆ ನೀಡಬೇಕು.

ಈರಪ್ಪ, ದಾವಣಗೆರೆ

ಭೀತಿ ಬೇಡ, ಧೈರ್ಯ ತುಂಬಿ

ಪ್ರವಾಸೋದ್ಯಮ ಚೇತರಿಕೆ ಹೊಂದುತ್ತಿರುವುದು ಸಂತಸದ ವಿಚಾರ. ಪ್ರವಾಸಿ ತಾಣಗಳ ಬಳಿ ಇರುವ ಜನರ ಬದುಕು ಪ್ರವಾಸಿಗರನ್ನೇ ಆಧರಿಸಿದೆ. ಈಗ ಕೋವಿಡ್ ಎರಡನೇ ಅಲೆ ಎಂದು ಸೂಚನೆ ನೀಡುತ್ತಿರುವುದರಿಂದ ಪ್ರವಾಸಿಗರು ಮತ್ತೆ ತಮ್ಮ ಯೋಜನೆಗಳನ್ನು ಮುಂದೂಡುತ್ತಿದ್ದಾರೆ. ರಾಜಕೀಯ ನಾಯಕರ ಕುಟುಂಬಗಳಲ್ಲಿ ಅದ್ದೂರಿಯಾಗಿ ನಡೆಯುತ್ತಿರುವ ಶುಭ ಸಮಾರಂಭಗಳಿಗೆ ಜನರ ದಂಡೇ ಇರುತ್ತಿದೆ. ಇದನ್ನು ನೋಡಿದಾಗ ಕೋವಿಡ್ ಇದೆಯೇ? ಎಂಬ ಅನುಮಾನ. ಪ್ರವಾಸೋದ್ಯಮಕ್ಕೆ ಬಲ ತುಂಬುವ ಬದಲು ಜನರಲ್ಲಿ ಭೀತಿ ಹುಟ್ಟಿಸುವುದು ಸರಿಯಲ್ಲ.



ಮಂಜುನಾಥ, ಬೆಂಗಳೂರು

ಪ್ರವಾಸಿ ಸ್ಥಳಗಳಿಗೆ ಆದ್ಯತೆ ಬೇಕು



ಧಾರ್ಮಿಕ ಕ್ಷೇತ್ರಗಳಲ್ಲಿ ತಾತ್ಕಾಲಿಕ ಆದಾಯ ಕುಸಿತ ಕಂಡಿದ್ದರೂ ಮುಂದಿನ ದಿನಗಳಲ್ಲಿ ದುಪ್ಪಟ್ಟು ಆದಾಯ ಬರುವುದರಲ್ಲಿ ಅನುಮಾನವಿಲ್ಲ. ಧಾರ್ಮಿಕ ಕ್ಷೇತ್ರಗಳಲ್ಲಿ ಈಗ ಇದೇ ಆಗಿದೆ. ಆದರೆ, ಪ್ರವಾಸಿ ತಾಣಗಳಲ್ಲಿ ಮೊದಲಿನ ಸ್ಥಿತಿ ಕಾಣುವುದು ದೂರದ ಮಾತು. ಹಾಗಾಗಿ, ಪ್ರವಾಸಿ ತಾಣಗಳ ಅಭಿವೃದ್ಧಿ ಹಾಗೂ ಅದರ ಉಳಿವಿಗೆ ಹೆಚ್ಚು ಕೆಲಸಗಳು ನಡೆಯಬೇಕಿದೆ.

ಚಂದನ, ಮೈಸೂರು

ಪ್ರವಾಸಿಗರ ನೆರವು ಅಗತ್ಯ



ಕೊರೊನಾ ಕರಿ ನೆರಳಿನಿಂದ ಪ್ರವಾಸಿ ತಾಣಗಳು ಇಂದಿಗೂ ಚೇತರಿಸಿಕೊಂಡಿಲ್ಲ. ಪ್ರವಾಸಿಗರು ಬರಲಿದ್ದಾರೆ ಎಂಬ ಹುಸಿ ನಿರೀಕ್ಷೆಯಲ್ಲಿ ಅಲ್ಲಿನ ವ್ಯಾಪಾರಿಗಳು ಕಾದು ಕುಳಿತಿದ್ದಾರೆ. ಪ್ರವಾಸಿಗರು ಬಂದರಷ್ಟೇ ಇವರಿಗೆ ಬದುಕು. ಒಂದು ವರ್ಷದಿಂದ ಇವರು ಆರ್ಥಿಕ ಸಂಕಷ್ಟಕ್ಕೆ ಸಿಲುಕಿದ್ದಾರೆ. ಈ ಕುಟುಂಬಗಳಿಗೆ ಸರ್ಕಾರದ ಜೊತೆ ಪ್ರವಾಸಿಗರೂ ನೆರವಾಗಬೇಕಿದೆ.

ಪುನೀತ್ ಕುಮಾರ್, ಸುಳ್ಯ

ಆತಂಕ ಹೆಚ್ಚಾಗದಿರಲಿ



ಧಾರ್ಮಿಕ ಕ್ಷೇತ್ರಗಳು ಹಾಗೂ ಪ್ರವಾಸಿ ತಾಣಗಳು ಮತ್ತೆ ಸಹಜ ಸ್ಥಿತಿಗೆ ಮರಳುತ್ತಿರುವುದು ಸಂತಸದ ವಿಚಾರ. ಇದರಿಂದ ದೇವಸ್ಥಾನ ಹಾಗೂ ಪ್ರೇಕ್ಷಣೀಯ ಸ್ಥಳಗಳ ಮುಂದೆ ವ್ಯಾಪಾರ ವಹಿವಾಟು ಗರಿಗೆದರುತ್ತಿವೆ. ಮೊದಲಿನಷ್ಟು ವ್ಯಾಪಾರ ಇಲ್ಲದಿದ್ದರೂ ಅವರ ಜೀವನ ಸಾಗುತ್ತಿದೆ. ಆದರೆ, ಮತ್ತೆ ಕೊರೊನಾ ಎರಡನೇ ಅಲೆ ಬೀಸಲಿದೆ ಎಂಬ ವಿಚಾರ ಪ್ರವಾಸೋದ್ಯಮವನ್ನು ಅತಂತ್ರ ಸ್ಥಿತಿಯಲ್ಲಿ ನಿಲ್ಲಿಸಿದೆ. ಜನರೂ ಹೆಚ್ಚಿನ ಆತಂಕಕ್ಕೆ ಒಳಗಾಗಬಾರದು.

ಶ್ರೀಧರ್, ಕೊಪ್ಪಳ

ಎರಡನೇ ತಡೆ ಬೇಡ



ಈಗ ತಾನೇ ಮೈಕೊಡವಿಕೊಳ್ಳುತ್ತಿರುವ ಪ್ರವಾಸೋದ್ಯಮಕ್ಕೆ ಕೊರೊನಾ ಎರಡನೇ ಅಲೆ ಅಡ್ಡಗಾಲು ಹಾಕಿದೆ. ಜನರಲ್ಲಿ ಭೀತಿ ಹೆಚ್ಚಾಗುತ್ತಿದೆ. ಲಾಕ್‌ಡೌನ್ ಸ್ಥಿತಿಯತ್ತ ಜನರ ಮನಸ್ಥಿತಿ ಸಾಗಿದೆ. ಮನೆಯಿಂದ ಹೊರ ಬರಲು ಹೆದರುವ ಜನ ಪ್ರವಾಸಿ ತಾಣಗಳಿಗೆ ಬರುವುದು ಅನುಮಾನ. ಪ್ರವಾಸಿಗರನ್ನು ಕರೆತರಲು ಪ್ರವಾಸೋದ್ಯಮ ಇಲಾಖೆಯೂ ಕೈಜೋಡಿಸಬೇಕು.

ಉಮೇಶ್, ಹರಿಹರ

‘ಮನ್ ಕಿ ಬಾತ್’ ಕಾರ್ಯಕ್ರಮದಲ್ಲಿ ಸಾರ್ವಜನಿಕರಿಗೆ ಪ್ರಧಾನಿ ನರೇಂದ್ರ ಮೋದಿ ಕರೆ

‘ಜಲಮೂಲ ಸ್ವಚ್ಛತೆಗೆ ಅಭಿಯಾನ’

ನವದೆಹಲಿ (ಪಿಟಿಐ): ‘ಮುಂಗಾರು ಹಂಗಾಮು ಆರಂಭವಾಗುವುದರೊಳಗೆ ನಮ್ಮ ಸುತ್ತಮುತ್ತಲಿನ ಜಲಮೂಲಗಳನ್ನು ಸ್ವಚ್ಛಗೊಳಿಸಿ, ಮಳೆ ನೀರು ಹಿಡಿಯಲು ಅಣಿಗೊಳಿಸಬೇಕು’ ಎಂದು ಕರೆ ನೀಡಿದ ಪ್ರಧಾನಿ ನರೇಂದ್ರ ಮೋದಿ, ‘ಇದಕ್ಕಾಗಿ ನೂರು ದಿನಗಳ ಸಾರ್ವಜನಿಕ ಅಭಿಯಾನ ನಡೆಸಬಹುದೇ’ ಎಂದು ಜನತೆಯನ್ನು ಕೇಳಿದರು.

ಜಲಸಂರಕ್ಷಣೆ ಕುರಿತು ಜನಜಾಗೃತಿ ಮೂಡಿಸಲು ಕೇಂದ್ರ ಜಲಶಕ್ತಿ ಸಚಿವಾಲಯ ‘ಕ್ಯಾಚ್ ದಿ ರೈನ್’ ಅಭಿಯಾನ ಆರಂಭಿಸುತ್ತಿದೆ. ಬಿದ್ದ ಜಾಗದಲ್ಲಿ, ಬಿದ್ದ ಸಮಯದಲ್ಲೇ ಮಳೆ ನೀರನ್ನು ಸಂಗ್ರಹಿಸಬೇಕು' ಎಂಬುದು ಅಭಿಯಾನದ ಉದ್ದೇಶ’ ಎಂದು ಅವರು ‘ಮನ್ ಕಿ ಬಾತ್’ ಕಾರ್ಯಕ್ರಮದಲ್ಲಿ ಪ್ರಸ್ತಾಪಿಸಿದರು.

‘ಶತಮಾನಗಳಿಂದ ಮನುಕುಲದ ಅಭಿವೃದ್ಧಿಯಲ್ಲಿ ನೀರಿನ ಪಾತ್ರ ನಿರ್ಣಾಯಕವಾಗಿದೆ. ಜಲಸಂರಕ್ಷಣೆಯ ಬಗ್ಗೆ ಸಾಮೂಹಿಕ ಜವಾಬ್ದಾರಿಯನ್ನು ನಾವು ಅರ್ಥಮಾಡಿಕೊಳ್ಳಬೇಕು. ಮೇ, ಜೂನ್ ವೇಳೆಗೆ ದೇಶದ ಹಲವು ಭಾಗಗಳಲ್ಲಿ ಮುಂಗಾರು ಆರಂಭವಾಗಲಿದೆ. ಅಷ್ಟರೊಳಗೆ ಜಲಮೂಲಗಳ ಸ್ವಚ್ಛತಾ ಕಾರ್ಯ ಪೂರ್ಣಗೊಂಡಿರಬೇಕು’ ಎಂದು ಅವರು ಕೇಳಿಕೊಂಡರು.


ರಾಷ್ಟ್ರೀಯ ವಿಜ್ಞಾನ ದಿನಕ್ಕೆ ಶುಭ ಕೋರಿದ ಮೋದಿ, ‘ದೇಶದಾದ್ಯಂತ ವಿಜ್ಞಾನವನ್ನು ಹೆಚ್ಚು ಜನಪ್ರಿಯಗೊಳಿಸುವ ಅವಶ್ಯಕತೆಯಿದೆ‘ ಎಂದರು. ‘ವಿಜ್ಞಾನವನ್ನು ಭೌತವಿಜ್ಞಾನ, ರಸಾಯನ ವಿಜ್ಞಾನ ಮತ್ತು ಪ್ರಯೋಗಾಲಯಗಳಿಗೆ ಸೀಮಿತಗೊಳಿಸಬಾರದು. ಲ್ಯಾಬ್ ಟು ಲ್ಯಾಂಡ್ ಎಂಬ ಮಂತ್ರದೊಂದಿಗೆ ವಿಜ್ಞಾನವನ್ನು ವಿಸ್ತರಿಸಬೇಕು’ ಎಂದರು.

‘ಸ್ಥಳೀಯ ಉತ್ಪನ್ನಗಳ ಬಗ್ಗೆ ಜನರು ಹೆಮ್ಮೆಪಡುವಾಗ ಆತ್ಮನಿರ್ಭರ ಭಾರತ್ ಆರ್ಥಿಕ ಕಾರ್ಯಕ್ರಮವಾಗಿ ಅಷ್ಟೇ ಉಳಿಯದೇ, ರಾಷ್ಟ್ರೀಯ ಮನೋಭಾವವಾಗಿಯೂ ಬದಲಾಗುತ್ತದೆ. ಸ್ವಾವಲಂಬಿ ಭಾರತದ ಈ ಮಂತ್ರವು ದೇಶದ ಹಳ್ಳಿಗಳನ್ನು ತಲುಪುತ್ತಿದೆ’ ಎಂದರು.

ತಮಿಳಿನ ಸಾಹಿತ್ಯ ಸುಂದರ: ಇದೇ ವೇಳೆ ಪ್ರಾದೇಶಿಕ ಭಾಷೆಯ ಬಗ್ಗೆ ಪ್ರಸ್ತಾಪಿಸಿದ ಪ್ರಧಾನಿಯವರು, ‘ವಿಶ್ವದ ಅತ್ಯಂತ ಹಳೆಯ ಭಾಷೆ ತಮಿಳು. ತಮಿಳಿನ ಸಾಹಿತ್ಯ ಸುಂದರವಾಗಿದೆ. ಈ ಭಾಷೆ ಕಲಿಯಲು ಸಾಕಷ್ಟು ಪ್ರಯತ್ನಿಸಿದರೂ ಸಾಧ್ಯವಾಗಲಿಲ್ಲ ಎಂಬ ಕೊರಗಿದೆ’ ಎಂದು ಹೇಳಿದರು. ಸಂಸ್ಕೃತ ಭಾಷೆಯ ಬಗ್ಗೆಯೂ ಇದೇ ವೇಳೆ ಪ್ರಸ್ತಾಪಿಸಿದ ಪ್ರಧಾನಿ, ಸರ್ದಾರ್ ಪಟೇಲ್ ಪ್ರತಿಮೆ ಬಳಿ ಗೈಡ್ ಒಬ್ಬರು ಸಂಸ್ಕೃತ ಭಾಷೆಯಲ್ಲಿ ಜನರಿಗೆ ಮಾಹಿತಿ ನೀಡಿದ್ದನ್ನು ಹಾಗೂ ಸಂಸ್ಕೃತ ಭಾಷೆಯಲ್ಲಿನ ಕ್ರಿಕೆಟ್ ಕಾಮೆಂಟರಿಯನ್ನು ಹಂಚಿಕೊಂಡರು.

ಭಾರತ ಹಲವು ಭಾಷೆಗಳ ತವರು. ಭಾರತದ ವಿವಿಧ ಕ್ರೀಡೆಗಳಿಗೆ ಸಂಬಂಧಿಸಿದಂತೆ ವಿವಿಧ ಭಾಷೆಗಳಲ್ಲಿ ಉತ್ತಮ ಕಾಮೆಂಟರಿ ಬರಬೇಕು. ಇದಕ್ಕೆ ಅಗತ್ಯ ಪ್ರೋತ್ಸಾಹವನ್ನೂ ನೀಡಬೇಕು. ಈ ನಿಟ್ಟಿನಲ್ಲಿ ಕ್ರೀಡಾ ಸಚಿವಾಲಯ ಮತ್ತು ಖಾಸಗಿ ಸಂಸ್ಥೆಗಳು ಚಿಂತಿಸಬೇಕು ಎಂದು ಒತ್ತಾಯಿಸಿದರು.

‘ಸಂತೋಷದಿಂದ ಪರೀಕ್ಷೆ ಬರೆಯಿರಿ’



ಮೋದಿ

ಪರೀಕ್ಷೆಗಳು ಸಮೀಪಿಸುತ್ತಿರುವ ಈ ವೇಳೆಯಲ್ಲಿ ವಿದ್ಯಾರ್ಥಿಗಳು ಯೋಧರಂತಾಗಬೇಕೇ ಹೊರತು ಚಿಂತೆಯಲ್ಲಿ ಮುಳುಗಬಾರದು. ಸಂತೋಷದಿಂದ ಪರೀಕ್ಷೆ ಬರೆದು ನಗುವಿನೊಂದಿಗೆ ಹಿಂತಿರುಗಿ. ಸಾಕಷ್ಟು ನಿದ್ರೆ ಮಾಡಿ, ಸಮಯ ನಿರ್ವಹಣೆ ಬಗ್ಗೆ ಜಾಗರೂಕರಾಗಿರಿ. ಆಟವಾಡುವುದನ್ನು ನಿಲ್ಲಿಸಬೇಡಿ ಎಂದು ಕಿವಿಮಾತು ಹೇಳಿದರು.

ಮಾರ್ಚ್‌ನಲ್ಲಿ ನಡೆಯುವ 'ಪರೀಕ್ಷಾ ಪೆ ಚರ್ಚಾ' ಕಾರ್ಯಕ್ರಮದಲ್ಲಿ ಎಲ್ಲಾ ‘ಪರೀಕ್ಷಾ ಯೋಧರು’, ಪೋಷಕರು ಮತ್ತು ಶಿಕ್ಷಕರು ಭಾಗವಹಿಸಬೇಕೆಂದು ಅವರು ಆಗ್ರಹಿಸಿದರು.

‘ಅರುಣಾಚಲ ಪ್ರದೇಶ ಕೊರೊನಾ ಮುಕ್ತ’

ಮುಖ್ಯಾಂಶಗಳು

- 24 ಗಂಟೆಗಳಲ್ಲಿ ವರದಿಯಾಗದ ಹೊಸ ಪ್ರಕರಣ
- ಚೇತರಿಕೆ ಪ್ರಮಾಣ ಶೇ 99.66

ಇಟಾನಗರ (ಪಿಟಿಐ): ಅರುಣಾಚಲ ಪ್ರದೇಶವು ಭಾನುವಾರ ಕೊರೊನಾ ವೈರಸ್ ಮುಕ್ತವಾಗಿದೆ. ರಾಜ್ಯಲ್ಲಿ ಮೂರು ಸಕ್ರಿಯ ಪ್ರಕರಣಗಳಿದ್ದವು. ಸೋಂಕಿತರು ಗುಣಮುಖರಾಗಿದ್ದಾರೆ ಎಂದು ಹಿರಿಯ ಆರೋಗ್ಯಾಧಿಕಾರಿ ಲೋಬ್ಸಂಗ್ ಜಂಪಾ ತಿಳಿಸಿದ್ದಾರೆ.

ರಾಜ್ಯದಲ್ಲಿ ಒಟ್ಟು 16,836 ಪ್ರಕರಣಗಳು ದಾಖಲಾಗಿದ್ದು, ಈ ಪೈಕಿ 16,780 ಸೋಂಕಿತರು ಗುಣಮುಖರಾಗಿದ್ದಾರೆ ಎಂದು ಅವರು ಹೇಳಿದ್ದಾರೆ.

ಕಳೆದ 24 ಗಂಟೆಗಳಲ್ಲಿ ಹೊಸ ಕೋವಿಡ್ ಪ್ರಕರಣ ವರದಿಯಾಗಿಲ್ಲ. ಸೋಂಕಿನಿಂದಾಗಿ ಈವರೆಗೆ 56 ಮಂದಿ ಮೃತಪಟ್ಟಿದ್ದಾರೆ. ಅರುಣಾಚಲ ಪ್ರದೇಶದ ಕೋವಿಡ್–19 ಚೇತರಿಕೆ ಪ್ರಮಾಣ ಶೇ 99.66 ಹಾಗೂ ಸೋಂಕು ಪ್ರಕರಣಗಳ ಪ್ರಮಾಣ ಶೂನ್ಯ ಆಗಿದೆ. 4,05,647 ಮಾದರಿಗಳನ್ನು ಈವರೆಗೆ ಪರೀಕ್ಷೆಗೆ ಒಳಪಡಿಸಲಾಗಿದೆ. ಶನಿವಾರ 312 ಮಾದರಿಗಳ ಪರೀಕ್ಷೆ ನಡೆಸಲಾಗಿತ್ತು ಎಂದಿದ್ದಾರೆ. ಈ ಮಧ್ಯೆ ರಾಜ್ಯದಲ್ಲಿ 32,325 ಮುಂಚೂಣಿ ಕಾರ್ಯಕರ್ತರಿಗೆ ಲಸಿಕೆ ನೀಡಲಾಗಿದೆ ಎಂದೂ ತಿಳಿಸಿದ್ದಾರೆ.

ಬ್ಯಾಂಕ್ ಶುಲ್ಕ: ನಿಮಗಿದು ತಿಳಿದಿರಲಿ



ಬಂಡವಾಳ ಮಾರುಕಟ್ಟೆ

ಅವಿನಾಶ್ ಕೆ.ಟಿ.

ಉಳಿತಾಯ ಖಾತೆಗೆ ಹಲವು ಬಗೆಯ ಶುಲ್ಕ/ದಂಡಗಳನ್ನು ಬ್ಯಾಂಕ್‌ಗಳು ವಿಧಿಸುತ್ತವೆ. ಆದರೆ ಬಹುತೇಕರಿಗೆ ಆ ಬಗ್ಗೆ ತಿಳಿದಿಲ್ಲ. ಕೆಲವು ಶುಲ್ಕಗಳನ್ನು ಹೇರುವಾಗ ಬ್ಯಾಂಕ್‌ಗಳು ಎಸ್‌ಎಂಎಸ್ ಸಂದೇಶ ಕಳುಹಿಸುವುದಿಲ್ಲ. ನೇರವಾಗಿ ನಿಮ್ಮ ಖಾತೆಯಿಂದ ಹಣ ಕಡಿತ ಮಾಡುತ್ತವೆ. ಖಾತೆಯ ಜಮಾ–ಖರ್ಚು ವಿವರ ನೋಡಿದಾಗ ಮಾತ್ರ ಆ ಶುಲ್ಕಗಳ ಬಗ್ಗೆ ಗೊತ್ತಾಗುತ್ತದೆ. ಅಂತಹ ಶುಲ್ಕಗಳ ಪೈಕಿ ಪೋಸ್‌ಡೆಕ್ ಚಾರ್ಜಸ್ (POSDEC CHARGES) ಬಗ್ಗೆ ಮಾಹಿತಿ ಇಲ್ಲಿದೆ.

ಸಣ್ಣ ತಪ್ಪಿಗೆ ದಂಡ: ಫೆಬ್ರವರಿ 11ರಂದು ನನ್ನ ಸ್ನೇಹಿತನೊಬ್ಬ ಪೆಟ್ರೋಲ್ ಬಂಕ್‌ಗೆ ಹೋಗಿ ತನ್ನ ಕಾರಿಗೆ ₹ 2 ಸಾವಿರಕ್ಕೆ ಪೆಟ್ರೋಲ್ ತುಂಬಿಸಿದ. ಬಳಿಕ ತನ್ನ ಡೆಬಿಟ್ ಕಾರ್ಡ್ ಮೂಲಕ ಪಾವತಿಗೆ ಮುಂದಾದ. ಮೂರು ಸಲ ಪ್ರಯತ್ನ ಮಾಡಿದರೂ, ಖಾತೆಯಲ್ಲಿ ಸಾಕಷ್ಟು ಬ್ಯಾಲೆನ್ಸ್ ಇಲ್ಲದ ಕಾರಣ ಪಾವತಿ ಸಾಧ್ಯವಾಗಲಿಲ್ಲ. ಇದಾದ 13 ದಿನಗಳ ಬಳಿಕ ಅಂದರೆ ಫೆಬ್ರವರಿ 23ರಂದು ನನ್ನ ಸ್ನೇಹಿತನ ಬ್ಯಾಂಕ್ ಖಾತೆಯಿಂದ ಮೂರು ಬಾರಿ ₹ 29ರಂತೆ ಒಟ್ಟು ₹ 87 ಕಡಿತವಾಗಿದೆ. ಹೀಗೆ ಕಡಿತವಾಗಿರುವ ಹಣದ ಮುಂದೆ POSDEC CHG/11-02-2021 ಎಂಬ ಒಕ್ಕಣೆ ಇದೆ. ಏನಿದು ಎಂದು ಪರಿಶೀಲಿಸಲು ಹೊರಟಾಗ, ಖಾತೆಯಲ್ಲಿ ಹಣವಿಲ್ಲದಿದ್ದಾಗ ಡೆಬಿಟ್ ಕಾರ್ಡ್ ಮೂಲಕ ಆತ ಪಾವತಿಗೆ ಪ್ರಯತ್ನಿಸಿದ ಕಾರಣ ಬ್ಯಾಂಕ್ ದಂಡ ವಿಧಿಸಿರುವುದು ಗೊತ್ತಾಗಿದೆ. ಇದು ನನ್ನ ಸ್ನೇಹಿತನೊಬ್ಬನ ಕಥೆಯಲ್ಲ, ಬಹುತೇಕರು ಹೀಗೆ ಡೆಬಿಟ್ ಕಾರ್ಡ್‌ಗಳ ಶುಲ್ಕ/ದಂಡಗಳ ಬಗ್ಗೆ ಸರಿಯಾಗಿ ತಿಳಿದುಕೊಳ್ಳದೆ ಸಮಸ್ಯೆಗೆ ಸಿಲುಕಿದ್ದಾರೆ.

ಏನಿದು ಪೋಸ್‌ಡೆಕ್ ಶುಲ್ಕ/ದಂಡ?: ನಿಮ್ಮ ಬ್ಯಾಂಕ್ ಖಾತೆಯಲ್ಲಿ ಹಣವಿಲ್ಲದಿದ್ದಾಗ ತಿಳಿದೋ ತಿಳಿಯದೆಯೋ ಎಟಿಎಂ ಮೂಲಕ ಹಣ ತೆಗೆಯಲು ಪ್ರಯತ್ನಿಸಿದರೆ ಅಥವಾ ಡೆಬಿಟ್ ಕಾರ್ಡ್ ಮೂಲಕ ಪಾವತಿಗೆ ಮುಂದಾದರೆ ಕೆಲವು ಬ್ಯಾಂಕ್‌ಗಳು ನಿಮಗೆ ದಂಡ ವಿಧಿಸುತ್ತವೆ. ಇದನ್ನೇ ಪೋಸ್‌ಡೆಕ್ (POSDEC CHG / Point of Sale Decline Charges) ಎಂದು ಕರೆಯುತ್ತಾರೆ. ನಿಮ್ಮ ಖಾತೆಯಲ್ಲಿ ದುಡ್ಡಿಲ್ಲ ಎಂಬ ಕಾರಣಕ್ಕೆ ಎಷ್ಟು ಬಾರಿ ಪಾವತಿ ವಿಫಲವಾಗುತ್ತದೋ ಅಷ್ಟು ಬಾರಿ ನೀವು ದಂಡ ಕಟ್ಟಬೇಕಾಗುತ್ತದೆ. ಉದಾಹರಣೆಗೆ ನೀವು ಒಂದು ಬಾರಿ ಪಾವತಿಗೆ ಪ್ರಯತ್ನಿಸಿ ಅದು ವಿಫಲವಾದರೆ ₹ 29 ದಂಡ ಕಟ್ಟಬೇಕಾಗುತ್ತದೆ. ಖಾತೆಯಲ್ಲಿ ಹಣವಿಲ್ಲದಿದ್ದಾಗ ಹತ್ತು ಬಾರಿ ಪಾವತಿಗೆ ಯತ್ನಿಸಿ, ವಿಫಲವಾದರೆ ₹ 290 ದಂಡವನ್ನು ಬ್ಯಾಂಕ್ ವಿಧಿಸುತ್ತದೆ.

ನೆಟ್‌ವರ್ಕ್ ಸಮಸ್ಯೆಯಾದಾಗಲೂ ದಂಡ?: ನೆಟ್‌ವರ್ಕ್ ಸಮಸ್ಯೆಯಿಂದ ಕೆಲವು ಬಾರಿ ಡೆಬಿಟ್ ಕಾರ್ಡ್ ಪಾವತಿ ವಿಫಲವಾದರೆ ಅದಕ್ಕೂ ದಂಡ ವಿಧಿಸಿರುವ ಬಗ್ಗೆ ಜನರು ಆನ್‌ಲೈನ್ ವೇದಿಕೆಗಳಲ್ಲಿ ಪ್ರಸ್ತಾಪಿಸಿದ್ದಾರೆ. ಬ್ಯಾಂಕ್ ಖಾತೆಯಲ್ಲಿ ಹಣವಿದ್ದರೂ ಕೆಲ ಬ್ಯಾಂಕ್‌ಗಳು ಶುಲ್ಕ ವಿಧಿಸಿವೆ ಎಂದು ಜನರು ದೂರಿದ್ದಿದೆ.

ನೀವೂ ದಂಡ ಕಟ್ಟಿದ್ದೀರಾ?: ಬಹುತೇಕರಿಗೆ ಬ್ಯಾಂಕ್ ಖಾತೆಯ ವಿವರ ನೋಡುವ ರೂಢಿ ಇಲ್ಲ. ಖಾತೆಯಲ್ಲಿ ಇರುವ ಮೊತ್ತ ಎಷ್ಟು ಎಂಬುದರ ವಿವರ ಎಸ್‌ಎಂಎಸ್ ಮೂಲಕವೇ ಸಿಗುತ್ತದೆ ಎಂದು ಸುಮ್ಮನಾಗುತ್ತಾರೆ. ಆದರೆ ಬ್ಯಾಂಕ್‌ಗಳು ವಿಧಿಸುವ ಶುಲ್ಕ ಅಥವಾ ದಂಡದ ವಿವರ ಎಸ್‌ಎಂಎಸ್ ಮೂಲಕ ಗೊತ್ತಾಗಿಯೇ ಆಗುತ್ತದೆ ಎನ್ನಲಾಗದು. ಬ್ಯಾಂಕ್‌ನಿಂದ ಬರುವ ಮಾಸಿಕ ಸ್ಟೇಟ್‌ಮೆಂಟ್‌ನಲ್ಲಿ ಮಾತ್ರ ಈ ಬಗ್ಗೆ ಪ್ರಸ್ತಾಪವಿರುತ್ತದೆ. ಪ್ರತಿ ತಿಂಗಳು ತಪ್ಪದೇ ನಿಮ್ಮ ಖಾತೆಯ ಸ್ಟೇಟ್‌ಮೆಂಟ್ ನೋಡಿಕೊಳ್ಳುವುದು ಉತ್ತಮ. ಹೀಗೆ ಮಾಡಿದಾಗ, ಒಂದೊಮ್ಮೆ ನಿಮ್ಮದಲ್ಲದ ತಪ್ಪಿಗೆ ಶುಲ್ಕ ವಿಧಿಸಿದ್ದರೆ ದೂರು ನೀಡಿ ಪರಿಹಾರ ಕಂಡುಕೊಳ್ಳಬಹುದು.

(ಲೇಖಕ: ‘ಇಂಡಿಯನ್ ಮನಿ ಡಾಟ್ ಕಾಂ’ನ ಹಣಕಾಸು ಸಲಹಾ ವಿಭಾಗದ ಮುಖ್ಯಸ್ಥ)



ಬಾಂಡ್ ಏರಿಕೆಗೆ ಇಳಿದ ಷೇರುಪೇಟೆ

ಅಮೆರಿಕದಲ್ಲಿ ಬಾಂಡ್ ಮೇಲಿನ ಗಳಿಕೆ ಹೆಚ್ಚಳ, ಸಿರಿಯಾ ಮೇಲೆ ಅಮೆರಿಕ ದಾಳಿ, ಜಾಗತಿಕವಾಗಿ ಹೆಚ್ಚಳವಾಗುತ್ತಿರುವ ಕೋವಿಡ್–19 ಪ್ರಕರಣಗಳು, ವಿದೇಶಿ ಮಾರುಕಟ್ಟೆಗಳಲ್ಲಿ ಮಂದಗತಿಯ ವಹಿವಾಟು ಸೇರಿ ಪ್ರಮುಖ ಕಾರಣಗಳಿಂದಾಗಿ ಷೇರುಪೇಟೆ ಸೂಚ್ಯಂಕಗಳು ಭಾರೀ ಕುಸಿತ ದಾಖಲಿಸಿವೆ. 49,099 ಅಂಶಗಳಲ್ಲಿ ವಹಿವಾಟು ಮುಗಿಸಿರುವ ಸೆನ್ಸೆಕ್ಸ್ ವಾರದ ಅವಧಿಯಲ್ಲಿ ಶೇಕಡ 3.5ರಷ್ಟು ಕುಸಿತ ಕಂಡಿದೆ. 14,529 ಅಂಶಗಳಲ್ಲಿ ವಹಿವಾಟು ಪೂರ್ಣಗೊಳಿಸಿರುವ ನಿಫ್ಟಿ ಶೇ 3ರಷ್ಟು ಇಳಿಕೆ ದಾಖಲಿಸಿದೆ. ಬಜೆಟ್ ನಂತರದಲ್ಲಿ ಷೇರು ಮಾರುಕಟ್ಟೆ ಕಂಡಿದ್ದ ಗಳಿಕೆಯ ಶೇ 50ರಷ್ಟು ಈಗ ಇಲ್ಲವಾಗಿದೆ. ಫೆಬ್ರವರಿ 26ರಂದು ಒಂದೇ ದಿನ ಹೂಡಿಕೆದಾರರು ₹ 5 ಲಕ್ಷ ಕೋಟಿ ಕಳೆದುಕೊಂಡಿದ್ದಾರೆ.

ಮಾರುಕಟ್ಟೆಯಲ್ಲಿ ನಕಾರಾತ್ಮಕತೆ ಹೆಚ್ಚಾಗಿದ್ದು ಅನಿಶ್ಚಿತತೆ ಮುಂದುವರಿಯಲಿದೆ ಎನ್ನುವುದನ್ನು ಸತತ ಎರಡನೆಯ ವಾರ ಕುಸಿತ ದಾಖಲಿಸಿರುವ ಸೂಚ್ಯಂಕಗಳು ಹೇಳುತ್ತಿವೆ. ವಲಯವಾರು ಪ್ರಗತಿಯಲ್ಲಿ ನಿಫ್ಟಿ ಬ್ಯಾಂಕ್ ಸೂಚ್ಯಂಕ ವಾರದ ಅವಧಿಯಲ್ಲಿ ಶೇ 3ರಷ್ಟು ಕುಸಿತ ದಾಖಲಿಸಿದೆ. ಮಾಹಿತಿ ತಂತ್ರಜ್ಞಾನ, ವಾಹನ ಉತ್ಪಾದನೆ, ಫಾರ್ಮಾ ವಲಯಗಳು ಅತಿ ಹೆಚ್ಚು ಕುಸಿತ ದಾಖಲಿಸಿವೆ. ಆದರೆ ಲೋಹ ವಲಯ ಸದ್ಯ ಅಗ್ರಸ್ಥಾನದಲ್ಲಿದೆ. ಪ್ರಮುಖ ಸೂಚ್ಯಂಕಗಳ ಇಳಿಕೆಯ ನಡುವೆಯೂ ಮಿಡ್ ಕ್ಯಾಪ್ ಸೂಚ್ಯಂಕ ವಾರದ ಅವಧಿಯಲ್ಲಿ ಶೇ 0.6ರಷ್ಟು ಗಳಿಕೆ ಕಂಡಿದೆ.

ಇಳಿಕೆ–ಗಳಿಕೆ: ನಿಫ್ಟಿಯಲ್ಲಿ 37 ಪ್ರಮುಖ ಕಂಪನಿಗಳ ಷೇರುಗಳು ನಕಾರಾತ್ಮಕ ಫಲಿತಾಂಶ ಕೊಟ್ಟಿವೆ. ಮಹೀಂದ್ರ ಶೇ 8.29ರಷ್ಟು, ಕೋಟಕ್ ಮಹೀಂದ್ರ ಬ್ಯಾಂಕ್ ಶೇ 8.17ರಷ್ಟು, ಪವರ್ ಗ್ರಿಡ್ ಶೇ 7.71ರಷ್ಟು, ಟೆಕ್ ಮಹೀಂದ್ರ ಶೇ 7.56ರಷ್ಟು ಮತ್ತು ಎಚ್‌ಡಿಎಫ್‌ಸಿ ಶೇ 7.37ರಷ್ಟು ಕುಸಿತ ಕಂಡಿವೆ. ಹಿಂಡಾಲ್ಕೊ ಶೇ 10.47ರಷ್ಟು, ಕೋಲ್ ಇಂಡಿಯಾ ಶೇ 9.30ರಷ್ಟು, ಟಾಟಾ ಸ್ಟೀಲ್ ಶೇ 6.63ರಷ್ಟು, ಒಎನ್‌ಜಿಸಿ ಶೇ 6.76ರಷ್ಟು ಮತ್ತು ಬಿಪಿಸಿಎಲ್ ಶೇ 4.62ರಷ್ಟು ಗಳಿಸಿಕೊಂಡಿವೆ.

ಐಪಿಒ: ಎಂಟಾರ್ ಟೆಕ್ನಾಲಜೀಸ್‌ನ ಐಪಿಒ ಮಾರ್ಚ್ 3ರಿಂದ 5ರವರೆಗೆ ನಡೆಯಲಿದೆ.

ಮುನ್ನೋಟ: ಷೇರು ಮಾರುಕಟ್ಟೆಯ ಓಟಕ್ಕೂ ಅರ್ಥ ವ್ಯವಸ್ಥೆಗೂ ತಾಳಮೇಳ ಇಲ್ಲವಾಗಿದೆ ಎಂದು ಆರ್‌ಬಿಐ ಗವರ್ನರ್ ಶಕ್ತಿಕಾಂತ ದಾಸ್ ಈ ಹಿಂದೆಯೇ ಹೇಳಿದ್ದರು. ಇದೀಗ ಭಾರತೀಯ ಷೇರುಪೇಟೆ ನಿಯಂತ್ರಣ ಮಂಡಳಿ (ಸೆಬಿ) ಅಧ್ಯಕ್ಷ ಅಜಯ್ ತ್ಯಾಗಿ ಕೂಡ ಅದೇ ಮಾತು ಹೇಳಿದ್ದಾರೆ. ಇದರ ಅರ್ಥ, ಷೇರುಪೇಟೆ ಸೂಚ್ಯಂಕಗಳು ಅಲ್ಪಾವಧಿಯಲ್ಲಿ ಅನಿರೀಕ್ಷಿತ ಬೆಳವಣಿಗೆಯನ್ನು ಕಂಡಿವೆ ಎಂದು. ಈ ಕಾರಣದಿಂದಾಗಿ ಮುಂದಿನ ದಿನಗಳಲ್ಲೂ ಷೇರುಪೇಟೆಯ ಏರಿಳಿತ ಹೀಗೆಯೇ ಮುಂದುವರಿಯುವ ಸಾಧ್ಯತೆ ನಿಚ್ಚಳವಾಗಿದೆ. ಬಾಂಡ್‌ಗಳ ಮೇಲಿನ ಗಳಿಕೆ ಹೆಚ್ಚಾಗಿರುವುದು ಷೇರುಪೇಟೆಗೆ ತಲೆನೋವಾಗಿ ಪರಿಣಮಿಸಿದೆ. ಜಾಗತಿಕ ಮಾರುಕಟ್ಟೆಗಳ ಚಲನೆಯೂ ದೇಶಿಯ ಷೇರು ಮಾರುಕಟ್ಟೆಗಳ ಸೂಚ್ಯಂಕಗಳ ಗತಿ ನಿರ್ಧರಿಸಲಿದೆ.

ಕನಿಷ್ಠ ದಾಖಲೆ ಪತ್ರ ಪಡೆದು ಗ್ಯಾಸ್ ವಿತರಣೆ

ನವದೆಹಲಿ (ಪಿಟಿಐ): ದೇಶದಲ್ಲಿ ಹೊಸ ಗ್ಯಾಸ್ ಸಂಪರ್ಕ ಪಡೆದುಕೊಳ್ಳಲು ಇರುವ ಪ್ರಕ್ರಿಯೆಯಲ್ಲಿ ಕೆಲವೊಂದು ಬದಲಾವಣೆ ಮಾಡಲಾಗುವುದು ಮತ್ತು ಕನಿಷ್ಠ ದಾಖಲೆ ಪತ್ರಗಳನ್ನು ಪಡೆದುಕೊಂಡು ಹೊಸ ಅಡುಗೆ ಅನಿಲ ಸಂಪರ್ಕ ನೀಡಲು ಕ್ರಮ ಕೈಗೊಳ್ಳಲಾಗುತ್ತದೆ ಎಂದು ಪೆಟ್ರೋಲಿಯಂ ಸಚಿವಾಲಯದ ಕಾರ್ಯದರ್ಶಿ ತರುಣ್ ಕಪೂರ್ ಹೇಳಿದ್ದಾರೆ.

ಮುಂದಿನ ಎರಡು ವರ್ಷಗಳಲ್ಲಿ ಒಂದು ಕೋಟಿ ಉಚಿತ ಅಡುಗೆ ಅನಿಲ ಸಂಪರ್ಕ ಒದಗಿಸಲು ಸರ್ಕಾರ ಮುಂದಾಗುತ್ತಿದೆ. ಈ ಮೂಲಕ ದೇಶದಲ್ಲಿ ಶೇ 100 ಶುದ್ಧ ಇಂಧನ ಬಳಕೆ ಮತ್ತು ಅಡುಗೆ ಅನಿಲ ಸಂಪರ್ಕ ಜಾಲ ಹೊಂದಲು ನಿರ್ಧರಿಸಿದೆ ಎಂದು ಸಚಿವಾಲಯ ಹೇಳಿದೆ.

ಅಡುಗೆ ಅನಿಲ ಸಂಪರ್ಕ ಸುಲಭದಲ್ಲಿ ಪಡೆಯಲು ಅನುಕೂಲವಾಗುವಂತೆ, ವಿಳಾಸದ ದೃಢೀಕರಣ, ದಾಖಲೆ ಪತ್ರಗಳ ವಿಚಾರದಲ್ಲಿ ಸುಧಾರಣಾ ಕ್ರಮ ಕೈಗೊಳ್ಳಲಾಗುತ್ತದೆ. ಮನೆ ಸಮೀಪದ ಯಾವುದೇ ಮೂರು ಡೀಲರ್‌ಗಳಿಂದ ಗ್ಯಾಸ್ ರಿಫಿಲ್ ಬುಕ್ ಮಾಡಲು ಅವಕಾಶವನ್ನು ಶೀಘ್ರದಲ್ಲೇ ಪರಿಚಯಿಸಲಾಗುತ್ತದೆ ಎಂದು ಕಪೂರ್ ತಿಳಿಸಿದ್ದಾರೆ.

ಕಳೆದ ನಾಲ್ಕು ವರ್ಷಗಳಲ್ಲಿ 8 ಕೋಟಿ ಉಚಿತ ಎಲ್‌ಪಿಜಿ ಸಂಪರ್ಕವನ್ನು ಬಡ ಮಹಿಳೆಯರಿಗೆ ನೀಡಲಾಗಿದೆ. ಇದರಿಂದಾಗಿ ದೇಶದಲ್ಲಿ ಒಟ್ಟಾರೆ ಎಲ್‌ಪಿಜಿ ಬಳಕೆದಾರರ ಸಂಖ್ಯೆ 29 ಕೋಟಿ ತಲುಪಿದೆ ಎಂದು ತಿಳಿಸಲಾಗಿದೆ.

ಮಹಿಳೆ ಸಾವು ಪ್ರಕರಣ: ಮಹಾರಾಷ್ಟ್ರ ಸಚಿವ ರಾಜೀನಾಮೆ

ಮುಂಬೈ (ಪಿಟಿಐ): ಮಹಿಳೆಯೊಬ್ಬರ ಸಾವಿಗೆ ಸಂಬಂಧಿಸಿ ಪ್ರತಿಪಕ್ಷ ಬಿಜೆಪಿಯಿಂದ ತೀವ್ರ ಟೀಕೆ ಎದುರಿಸುತ್ತಿರುವ ಮಹಾರಾಷ್ಟ್ರ ಅರಣ್ಯ ಸಚಿವ ಸಂಜಯ್ ರಾಥೋಡ್ ಭಾನುವಾರ ರಾಜೀನಾಮೆ ಸಲ್ಲಿಸಿದ್ದಾರೆ.

ಮುಖ್ಯಮಂತ್ರಿ ಉದ್ಧವ್ ಠಾಕ್ರೆ ಅವರಿಗೆ ರಾಜೀನಾಮೆ ಸಲ್ಲಿಸಿದ ಬಳಿಕ ರಾಥೋಡ್ ಈ ವಿಚಾರ ಬಹಿರಂಗ ಪಡಿಸಿದ್ದಾರೆ.

‘ಮಹಿಳೆಯ ಸಾವಿಗೆ ಸಂಬಂಧಿಸಿ ಕೆಟ್ಟ ರಾಜಕೀಯ ನಡೆಯುತ್ತಿದೆ. ಸತ್ಯ ಹೊರಬರಲಿ ಎಂದು ರಾಜೀನಾಮೆ ನೀಡಿದ್ದೇನೆ’ ಎಂದರು.

‘30 ವರ್ಷಗಳ ಸಾರ್ವಜನಿಕ ಜೀವನದಲ್ಲಿ ನಾನು ಗಳಿಸಿರುವ ವರ್ಚಸ್ಸು, ಘನತೆ ಹಾಗೂ ಪ್ರತಿಷ್ಠೆಯನ್ನು ನಾಶ ಮಾಡುವ ಯತ್ನ ನಡೆದಿದೆ. ಯಾವುದೇ ನಿರ್ಧಾರ ತೆಗೆದುಕೊಳ್ಳುವ ಮುನ್ನ ತನಿಖೆಯಾಗಲಿ ಎಂದು ನಾನು ಹೇಳುತ್ತಿದ್ದೆ. ಆದರೆ, ಪ್ರತಿಪಕ್ಷದವರು ಬಜೆಟ್ ಅಧಿವೇಶನಕ್ಕೆ ಅಡ್ಡಿಪಡಿಸುವ ಬೆದರಿಕೆಯೊಡ್ಡಿದ್ದಾರೆ’ ಎಂದು ಅವರು ಹೇಳಿದರು.

ಭೀಡ್ ಜಿಲ್ಲೆಯ ಪೂಜಾ ಚವಾಣ್ (23) ಮೃತದೇಹ ಫೆಬ್ರುವರಿ 8ರಂದು ಪುಣೆಯಲ್ಲಿ ಪತ್ತೆಯಾಗಿತ್ತು. ಅವರು ಕಟ್ಟಡದಿಂದ ಬಿದ್ದು ಮೃತಪಟ್ಟಿದ್ದಾರೆ ಎನ್ನಲಾಗಿತ್ತು. ಮಹಿಳೆ ಜತೆ ಸಚಿವರಿಗೆ ಸಂಬಂಧವಿದೆ ಎಂದು ಬಿಜೆಪಿ ಆರೋಪಿಸಿದೆ. ಸಚಿವರು ಆಕೆಯ ಜತೆಗಿದ್ದರು ಎನ್ನಲಾದ ಫೋಟೊ, ಮಾತನಾಡಿದ್ದರು ಎನ್ನಲಾಗಿರುವ ಆಡಿಯೊ ಕ್ಲಿಪ್, ವಿಡಿಯೊ ಸಾಮಾಜಿಕ ಮಾಧ್ಯಮಗಳಲ್ಲಿ ವೈರಲ್ ಆದ ಬಳಿಕ ಬಿಜೆಪಿ ಈ ಆರೋಪ ಮಾಡಿತ್ತು.

ಈ ಮಧ್ಯೆ, ರಾಜೀನಾಮೆ ನೀಡಿದರಷ್ಟೇ ಸಾಲದು ಎಂದಿರುವ ವಿಧಾನಸಭೆ ಪ್ರತಿಪಕ್ಷ ನಾಯಕ ದೇವೇಂದ್ರ ಫಡಣವೀಸ್, ಸಚಿವರ ವಿರುದ್ಧ ಎಫ್‌ಐಆರ್ ದಾಖಲಿಸಬೇಕು ಎಂದು ಆಗ್ರಹಿಸಿದ್ದಾರೆ.

ಸಂಕ್ಷಿಪ್ತ ಸುದ್ದಿ

ಕೊಚ್ಚಿ ವಿಮಾನ ನಿಲ್ದಾಣಕ್ಕೆ ಬೆದರಿಕೆ ಕರೆ: ಬಿಗಿ ಭದ್ರತೆ

ಕೊಚ್ಚಿ (ಪಿಟಿಐ): ಬೆದರಿಕೆ ಕರೆ ಬಂದ ಹಿನ್ನೆಲೆಯಲ್ಲಿ ಕೊಚ್ಚಿ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಭದ್ರತೆಯನ್ನು ಬಿಗಿಗೊಳಿಸಲಾಗಿದೆ ಎಂದು ಪೊಲೀಸರು ಭಾನುವಾರ ತಿಳಿಸಿದ್ದಾರೆ.

ಮಾರ್ಚ್ 1 ರಂದು ಚೆನ್ನೈ ಮತ್ತು ಕೊಚ್ಚಿ ವಿಮಾನ ನಿಲ್ದಾಣಗಳಲ್ಲಿ ಹಾಗೂ ಚೆನ್ನೈಯ ಎಂಜಿಆರ್ ಸೆಂಟ್ರಲ್ ರೈಲು ನಿಲ್ದಾಣಗಳಲ್ಲಿ ಬಾಂಬ್ ಇಡಲಾಗುವುದು ಎಂದು ಚೆನ್ನೈ ರೈಲು ನಿಲ್ದಾಣಕ್ಕೆ ಕರೆ ಬಂದಿತ್ತು. ಹೀಗಾಗಿ ಈ ಮೂರೂ ಸ್ಥಳದಲ್ಲಿ ಪೊಲೀಸ್ ಮತ್ತು ಕೇಂದ್ರ ಕೈಗಾರಿಕಾ ಭದ್ರತಾ ಪಡೆ (ಸಿಐಎಸ್‌ಎಫ್) ಭದ್ರತೆಯನ್ನು ಹೆಚ್ಚಿಸಲಾಗಿದೆ ಎಂದು ಪೊಲೀಸ್ ಅಧಿಕಾರಿಗಳು ತಿಳಿಸಿದ್ದಾರೆ.

ಪ್ರಶ್ನೆಪತ್ರಿಕೆ ಸೋರಿಕೆ: ಪರೀಕ್ಷೆ ರದ್ದುಗೊಳಿಸಿದ ಸೇನೆ

ನವದೆಹಲಿ (ಪಿಟಿಐ): ಪ್ರಶ್ನೆಪತ್ರಿಕೆ ಸೋರಿಕೆಯಾಗಿದ್ದರಿಂದ ದೇಶದಾದ್ಯಂತ ಯೋಧರ ನೇಮಕಾತಿಗೆ ನಡೆಯಬೇಕಾಗಿದ್ದ ಪರೀಕ್ಷೆಯನ್ನು ಸೇನೆ ರದ್ದುಗೊಳಿಸಿದೆ.

ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಪುಣೆಯಲ್ಲಿ ಮೂವರನ್ನು ಬಂಧಿಸಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಪುಣೆಯ ಸ್ಥಳೀಯ ಪೊಲೀಸರ ನೆರವಿನೊಂದಿಗೆ ಜಂಟಿ ಕಾರ್ಯಾಚರಣೆ ನಡೆಸಿ ಸೈನಿಕರ ನೇಮಕಾತಿಗೆ ಸಂಬಂಧಿಸಿದಂತೆ ಸಾಮಾನ್ಯ ಪ್ರವೇಶ ಪರೀಕ್ಷೆಯ ಪ್ರಶ್ನೆಪತ್ರಿಕೆ ಸೋರಿಕೆಯಾಗಿರುವುದನ್ನು ಪತ್ತೆ ಮಾಡಲಾಗಿದೆ. ಈ ಬಗ್ಗೆ ತನಿಖೆ ಮುಂದುವರಿದಿದೆ.

ನೇಮಕಾತಿಗೆ ಸಂಬಂಧಿಸಿದಂತೆ ಭಾರತೀಯ ಸೇನೆ ಯಾವುದೇ ರೀತಿಯ ಅಕ್ರಮಗಳನ್ನು ಸಹಿಸುವುದಿಲ್ಲ. ಅಭ್ಯರ್ಥಿಗಳ ಆಯ್ಕೆ ಸಂಪೂರ್ಣವಾಗಿ ಪಾರದರ್ಶಕವಾಗಿ ನಡೆಯುತ್ತದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

17 ಭಾರತೀಯ ಮೀನುಗಾರರ ಬಂಧನ

ಕರಾಚಿ (ಪಿಟಿಐ): ಪಾಕಿಸ್ತಾನದ ಜಲ ಗಡಿ ಪ್ರವೇಶಿಸಿದ ಆರೋಪದ ಮೇಲೆ 17 ಭಾರತೀಯ ಮೀನುಗಾರರನ್ನು ಬಂಧಿಸಲಾಗಿದೆ.

‘ಮೂರು ಬೋಟ್‌ಗಳನ್ನೂ ವಶಕ್ಕೆ ಪಡೆಯಲಾಗಿದೆ. ಬಂಧಿತ ಮೀನುಗಾರರನ್ನು ಮ್ಯಾಜಿಸ್ಟ್ರೇಟ್ ಮುಂದೆ ಹಾಜರುಪಡಿಸಿ, ಸ್ಥಳೀಯ ಬಂದರು ಪೊಲೀಸರಿಗೆ ಹಸ್ತಾಂತರಿಸಲಾಗಿದೆ’ ಎಂದು ಭದ್ರತಾ ಪಡೆಯ ವಕ್ತಾರರು ತಿಳಿಸಿದ್ದಾರೆ.

ಪಾಕ್ ಜಲ ಗಡಿ ಪ್ರವೇಶಿಸುತ್ತಿದ್ದಂತೆ ಮೀನುಗಾರರಿಗೆ ದೂರ ಹೋಗುವಂತೆ ಎಚ್ಚರಿಕೆ ನೀಡಲಾಗಿತ್ತು. ಆದರೆ, ಅವರು ಕಿವಿಗೊಡಲಿಲ್ಲ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ವರ್ಷದ ಹಿಂದೆ ಜಲಗಡಿ ಉಲ್ಲಂಘಿಸಿದ ಆರೋಪದ ಮೇಲೆ ಪಾಕಿಸ್ತಾನವು 23 ಭಾರತೀಯರನ್ನು ಬಂಧಿಸಿ, ನಾಲ್ಕು ಬೋಟ್‌ಗಳನ್ನು ಪಾಕ್ ವಶಕ್ಕೆ ಪಡೆದಿತ್ತು.

ಐ.ಟಿ. ದಾಳಿ: ₹220 ಕೋಟಿ ಕಪ್ಪು ಹಣ ಪತ್ತೆ

ನವದೆಹಲಿ (ಪಿಟಿಐ): ಚೆನ್ನೈ ಮೂಲದ ಟೈಲ್ಸ್ ಮತ್ತು ಸ್ಯಾನಿಟರಿವೇರ್ ಕಂಪನಿಗೆ ಸಂಬಂಧಿಸಿದ ಕಚೇರಿಗಳ ಮೇಲೆ ದಾಳಿ ನಡೆಸಿದ ಆದಾಯ ತೆರಿಗೆ ಇಲಾಖೆ ಸುಮಾರು ₹220 ಕೋಟಿ ಲೆಕ್ಕ ಇಲ್ಲದ ಹಣವನ್ನು ಪತ್ತೆ ಮಾಡಿದೆ.

ಫೆಬ್ರುವರಿ 26ರಂದು ತಮಿಳುನಾಡು, ಗುಜರಾತ್ ಮತ್ತು ಕೋಲ್ಕತ್ತದಲ್ಲಿ ಈ ಶೋಧ ಕಾರ್ಯಾಚರಣೆಗಳನ್ನು ಕೈಗೊಳ್ಳಲಾಗಿತ್ತು. ದಾಳಿ ಸಂದರ್ಭದಲ್ಲಿ ₹8.30 ಕೋಟಿ ನಗದು ವಶಪಡಿಸಿಕೊಳ್ಳಲಾಗಿದೆ. ದಕ್ಷಿಣ ಭಾರತದಲ್ಲಿ ಈ ಕಂಪನಿ ಟೈಲ್ಸ್ ವ್ಯವಹಾರದಲ್ಲಿ ಮುಂಚೂಣಿಯಲ್ಲಿದೆ.

ಶೋಧ ಕಾರ್ಯಾಚರಣೆ ಸಂದರ್ಭದಲ್ಲಿ ಟೈಲ್ಸ್‌ಗಳ ಮಾರಾಟ ಮತ್ತು ಖರೀದಿಗೆ ಸಂಬಂಧಿಸಿದಂತೆ ಲೆಕ್ಕ ಇಲ್ಲದಿರುವುದು ಪತ್ತೆಯಾಗಿದೆ. ಕಂಪನಿಯ ರಹಸ್ಯ ಕಚೇರಿಯಲ್ಲಿ ಲೆಕ್ಕವಿಲ್ಲದ ವಹಿವಾಟು ನಡೆಸಿದ ದಾಖಲೆಗಳು ಪತ್ತೆಯಾಗಿವೆ. ಶೇಕಡ 50ರಷ್ಟು ವಹಿವಾಟಿಗೆ ದಾಖಲೆಗಳು ಇಲ್ಲ ಎಂದು ಇಲಾಖೆಯ ಪ್ರಕಟಣೆ ತಿಳಿಸಿದೆ.

ಕಾಡಾನೆ ಜತೆ ಸೆಲ್ಫಿಗೆ ಯತ್ನ; ಸಾವಿನಲ್ಲಿ ಅಂತ್ಯ

ರಾಯಗಡ (ಪಿಟಿಐ): ಕಾಡಾನೆಯೊಂದಿಗೆ ಸೆಲ್ಫಿ ತೆಗೆಯಲು ಯತ್ನಿಸಿದ ಯುವಕನನ್ನು ಅದೇ ಆನೆ ತುಳಿದು ಕೊಂದ ಘಟನೆ ಛತ್ತೀಸ್‌ಗಡದ ರಾಯಗಡ ಜಿಲ್ಲೆಯಲ್ಲಿ ಭಾನುವಾರ ನಡೆದಿದೆ.

ಯುವಕನನ್ನು ಮನೋಹರ ಪಟೇಲ್ ಎಂದು ಗುರುತಿಸಲಾಗಿದ್ದು, ಸಾರಂಗ ಅರಣ್ಯ ವ್ಯಾಪ್ತಿಯ ಗುಧ್ಯಾರಿ ಗ್ರಾಮದಲ್ಲಿ ಘಟನೆ ನಡೆದಿದೆ.

ಸೆಲ್ಫಿ ತೆಗೆಯುತ್ತಿದ್ದಾಗ ಮನೋಹರ್ ಜೊತೆ ಅವರ ಮೂರು ಜನ ಸ್ನೇಹಿತರು ಕೂಡ ಇದ್ದರು.

‘ಆನೆ ಅನಿರೀಕ್ಷಿತವಾಗಿ ಅವರ ಮೇಲೆ ದಾಳಿ ನಡೆಸಿದಾಗ ಸ್ನೇಹಿತರು ಅದೃಷ್ಟವಶಾತ್ ಪಾರಾದರು. ಆದರೆ ದಾಳಿಯಲ್ಲಿ ಮನೋಹರ್ ಸಾವನ್ನಪ್ಪಿದರು‘ ಎಂದು ರಾಯಗಡ ಅರಣ್ಯ ವಿಭಾಗದ ವಿಭಾಗೀಯ ಅರಣ್ಯಾಧಿಕಾರಿ ತಿಳಿಸಿದ್ದಾರೆ.

ಹಾಕಿ: ಭಾರತಕ್ಕೆ ಮಣಿದ ಜರ್ಮನಿ

ಕ್ರೆಫೆಲ್ಡ್, ಜರ್ಮನಿ (ಪಿಟಿಐ): ಯುವಪ್ರತಿಭೆ ವಿವೇಕ್ ಸಾಗರ್ ಪ್ರಸಾದ್ ಗಳಿಸಿದ ಎರಡು ಗೋಲುಗಳ ನೆರವಿನಿಂದ ಭಾರತ ಹಾಕಿ ತಂಡವು ಯುರೋಪ್ ಪ್ರವಾಸದಲ್ಲಿ ಜರ್ಮನಿ ಎದುರು ಶುಭಾರಂಭ ಮಾಡಿತು.

ಭಾನುವಾರ ನಡೆದ ಮೊದಲ ಪಂದ್ಯದಲ್ಲಿ ಭಾರತ ತಂಡವು 6–1ರಿಂದ ಜರ್ಮನಿಯನ್ನು ಸೋಲಿಸಿತು. ವಿವೇಕ್ (27 ಮತ್ತು 28ನೇ ನಿಮಿಷ) ಗೋಲು ಗಳಿಸಿದರು. ನೀಲಕಂಠ ಶರ್ಮಾ (13ನೇ ನಿ) ಗೋಲು ಹೊಡೆದು ಭಾರತಕ್ಕೆ ಉತ್ತಮ ಆರಂಭ ನೀಡಿದರು.

ಲಲಿತ್ ಉಪಾಧ್ಯಾಯ (41ನೇ ನಿ), ಅಕ್ಷದೀಪ್ ಸಿಂಗ್ (42ನೇ ನಿ) ಮತ್ತು ಹರ್ಮನ್‌ಪ್ರೀತ್ ಸಿಂಗ್ (47ನೇ ನಿ) ತಂಡದ ಗೆಲುವಿಗೆ ಕಾಣಿಕೆ ನೀಡಿದರು.

13ನೇ ನಿಮಿಷದಲ್ಲಿ ಲಭಿಸಿದ ಪೆನಾಲ್ಟಿ ಕಾರ್ನರ್‌ನಲ್ಲಿ ಮಿಡ್‌ಫೀಲ್ಡರ್ ನೀಲಕಂಠ ಅವರು ತೋರಿದ ಕೈಚಳಕ ಅಮೋಘವಾಗಿತ್ತು. ಎದುರಾಳಿ ಗೋಲ್ ಕೀಪರ್ ಮತ್ತು ರಕ್ಷಣಾ ಪಡೆಯನ್ನು ವಂಚಿಸಿದ ಅವರು ಚೆಂಡನ್ನು ಗೋಲುಪೆಟ್ಟಿಗೆ ಸೇರಿಸಿದರು.

ಅಥ್ಲೆಟಿಕ್ಸ್: ಪ್ರಿಯಾ, ತುಷಾರ್ ದಾಖಲೆ

ಬೆಂಗಳೂರು: ಕರ್ನಾಟಕದ ಪ್ರಿಯಾ ಮೋಹನ್ ಮತ್ತು ತುಷಾರ್ ವಸಂತ್, ಕೊಯಿಕ್ಕೋಡ್‌ನಲ್ಲಿ ನಡೆದ ದಕ್ಷಿಣ ವಲಯ ಜೂನಿಯರ್ ಅಥ್ಲೆಟಿಕ್ಸ್ ಚಾಂಪಿಯನ್‌ಷಿಪ್‌ನಲ್ಲಿ ಭಾನುವಾರ ಕೂಟ ದಾಖಲೆ ನಿರ್ಮಿಸಿದರು. ಪ್ರಿಯಾ 200 ಮೀಟರ್ಸ್ ಓಟದಲ್ಲಿ 24.64 ಸೆಕೆಂಡುಗಳ ಸಾಧನೆ ಮಾಡಿದರು. ಪುರುಷರ 1500 ಮೀಟರ್ಸ್ ಓಟವನ್ನು 4:01.80 ನಿಮಿಷಗಳಲ್ಲಿ ಪೂರ್ತಿಗೊಳಿಸಿದ ತುಷಾರ್, ಗೌರವ್ ಯಾದವ್ (4:03.23 ನಿ) ಮಾಡಿದ್ದ ದಾಖಲೆಯನ್ನು ಮುರಿದರು.


ಪ್ರಿಯಾ

ವಿಜಯ್ ಹಜಾರೆ ಟ್ರೋಫಿ: ದೇವದತ್ತ ಪಡಿಕ್ಕಲ್ – ಸಮರ್ಥ್ ಅಜೇಯ ದ್ವಿಶತಕದ ಜೊತೆಯಾಟ

ಎಂಟರ ಘಟ್ಟಕ್ಕೆ ಕರ್ನಾಟಕ ತಂಡ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹಾಲಿ ಚಾಂಪಿಯನ್ ಕರ್ನಾಟಕ ತಂಡವು ವಿಜಯ್ ಹಜಾರೆ ಟ್ರೋಫಿ ಕ್ರಿಕೆಟ್ ಟೂರ್ನಿಯಲ್ಲಿ ಎಂಟರ ಘಟ್ಟಕ್ಕೆ ಪ್ರವೇಶಿಸಿತು.

ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಭಾನುವಾರ ನಡೆದ ಸಿ ಗುಂಪಿನ ಕೊನೆಯ ಪಂದ್ಯದಲ್ಲಿ ದೇವದತ್ತ ಪಡಿಕ್ಕಲ್ ಮತ್ತು ಆರ್. ಸಮರ್ಥ್ ಅವರ ಅಜೇಯ ಶತಕ ಮತ್ತು ಮುರಿಯದ ಮೊದಲ ವಿಕೆಟ್ ಜೊತೆಯಾಟದ ಅಬ್ಬರಕ್ಕೆ ಎದುರಾಳಿ ರೈಲ್ವೆ ತಂಡವು ಶರಣಾಯಿತು. ಆತಿಥೇಯರು 10 ವಿಕೆಟ್‌ಗಳ ಜಯ ಸಾಧಿಸಿದರು.

ಗುಂಪು ಹಂತದ ಐದು ಪಂದ್ಯಗಳಲ್ಲಿ ನಾಲ್ಕರಲ್ಲಿ ಗೆದ್ದು 16 ಅಂಕಗಳು ಮತ್ತು ಉತ್ತಮ ರನ್ ಸರಾಸರಿಯ ಆಧಾರದಲ್ಲಿ ಕರ್ನಾಟಕವು ಅಗ್ರಸ್ಥಾನ ಪಡೆಯಿತು. ಗುಂಪಿನ ಕೊನೆಯ ಪಂದ್ಯದಲ್ಲಿ ಟಾಸ್ ಗೆದ್ದ ಸಮರ್ಥ್ ಪಡೆಯು ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು.

ಶ್ರೇಯಸ್ ಗೋಪಾಲ್ (41ಕ್ಕೆ3) ಮತ್ತು ಜೆ.ಸುಚಿತ್ (72ಕ್ಕೆ2) ಸ್ಪಿನ್ ಮೋಡಿಯ ನಡುವೆಯೂ ಶತಕ ಗಳಿಸಿದ ಪ್ರಥಮ್ ಸಿಂಗ್ (129 ರನ್) ಬಲದಿಂದ ರೈಲ್ವೇಸ್ 50 ಓವರ್‌ಗಳಲ್ಲಿ 9 ವಿಕೆಟ್‌ಗಳಿಗೆ 284 ರನ್ ಗಳಿಸಿತು.

ಗುರಿ ಬೆನ್ನಟ್ಟಿದ ಕರ್ನಾಟಕ 40.3 ಓವರ್‌ಗಳಲ್ಲಿ ವಿಕೆಟ್ ನಷ್ಟವಿಲ್ಲದೇ 285 ರನ್ ಗಳಿಸಿತು.

ಇದೇ ಮೊದಲ ಬಾರಿಗೆ ಕರ್ನಾಟಕ ತಂಡದ ಸಾರಥ್ಯ ನಿರ್ವಹಿಸು ತ್ತಿರುವ ಸಮರ್ಥ್ ಈ ಟೂರ್ನಿಯಲ್ಲಿ ಎರಡನೇ ಶತಕ ದಾಖಲಿಸಿದರು. ದೇವದತ್ತ ಜೊತೆಗೆ ಟಿ20 ಮಾದರಿಯ ಬ್ಯಾಟಿಂಗ್ ಮಾಡಿದ ಸಮರ್ಥ್ ತಂಡದ ಗೆಲುವಿಗೆ ಕಾರಣರಾದರು.

ಲಿಸ್ಟ್ ಎ ಕ್ರಿಕೆಟ್‌ನಲ್ಲಿ ಸಮರ್ಥ್ ಬಾರಿಸಿದ ಆರನೇ ಶತಕ ಇದು. ಒಂದು ವಾರದ ಹಿಂದೆ ಬಿಹಾರದ ವಿರುದ್ಧ ಶತಕ ದಾಖಲಿಸಿದ್ದರು. ಅದರ ನಂತರದ ಎರಡು ಪಂದ್ಯಗಳಲ್ಲಿ ಅರ್ಧಶತಕ ಗಳಿಸಿದ್ದರು. ಜನವರಿಯಲ್ಲಿ ನಡೆದಿದ್ದ ಸೈಯದ್ ಮುಷ್ತಾಕ್ ಅಲಿ ಟಿ20 ಟೂರ್ನಿಯಲ್ಲಿ ಸಮರ್ಥ್ ಆಡಿರಲಿಲ್ಲ. ಆಗ ತಂಡವನ್ನು ಮುನ್ನಡೆಸಿದ್ದ ಕರುಣ್ ನಾಯರ್ ಬ್ಯಾಟಿಂಗ್ ಮತ್ತು ನಾಯಕತ್ವದ ಕೌಶಲದಲ್ಲಿ ಹಿನ್ನಡೆ ಸಾಧಿಸಿದ್ದರು.

ಆದ್ದರಿಂದ ಏಕದಿನ ಮಾದರಿಯ ಟೂರ್ನಿಗೆ ಕರುಣ್ ಬದಲಿಗೆ ಸಮರ್ಥ್ ಅವರನ್ನು ನಾಯಕರನ್ನಾಗಿ ಮಾಡಲಾಗಿತ್ತು. ಈ ಟೂರ್ನಿಯಲ್ಲಿ ಸಮರ್ಥ್, ಐದು ಪಂದ್ಯಗಳಿಂದ 413 ರನ್ ಕಲೆಹಾಕಿದ್ದಾರೆ.

ಕೇರಳ, ಉತ್ತರಪ್ರದೇಶಕ್ಕೆ ಜಯ: ಸಿ ಗುಂಪಿನ ಇನ್ನುಳಿದ ಪಂದ್ಯಗಳಲ್ಲಿ ಉತ್ತರಪ್ರದೇಶ ತಂಡವು ಒಡಿಶಾ ಎದುರು 6 ವಿಕೆಟ್‌ಗಳಿಂದ ಜಯಿಸಿ, ಎರಡನೇ ಸ್ಥಾನ ಪಡೆಯಿತು. ಕೇರಳ ತಂಡವು ಬಿಹಾರದ ಎದುರು 9 ವಿಕೆಟ್‌ಗಳಿಂದ ಗೆದ್ದು ಮೂರನೇ ಸ್ಥಾನ ಪಡೆದಿದೆ.

ಸಂಕ್ಷಿಪ್ತ ಸ್ಕೋರು: **ಒಡಿಶಾ:** 40.1 ಓವರ್‌ಗಳಲ್ಲಿ 148 (ಶಂತನು ಮಿಶ್ರಾ 24, ರಾಕೇಶ್ ಪಟ್ನಾಯಕ್ 46, ಶುಭ್ರಾಂಶು ಸೇನಾಪತಿ 59, ಶಿವಂ ಶರ್ಮಾ 22ಕ್ಕೆ6), **ಉತ್ತರಪ್ರದೇಶ:** 21.4 ಓವರ್‌ಗಳಲ್ಲಿ 4ಕ್ಕೆ150 (ಅಭಿಷೇಕ್ ಗೋಸ್ವಾಮಿ 25, ಕರಣ್ ಶರ್ಮಾ 25, ಸಮೀರ್ ಚೌಧರಿ ಔಟಾಗದೆ 29, ಉಪೇಂದ್ರ ಯಾದವ್ 32, ರಾಜೇಶ್ ಮೋಹಾಂತಿ 37ಕ್ಕೆ2) **ಫಲಿತಾಂಶ:** ಉತ್ತರಪ್ರದೇಶಕ್ಕೆ 6 ವಿಕೆಟ್‌ಗಳ ಜಯ. **ಬಿಹಾರ:** 40.2 ಓವರ್‌ಗಳಲ್ಲಿ 148 (ಬಾಬುಲ್ ಕುಮಾರ್ 64, ಜಲಜ್ ಸಕ್ಸೇನಾ 30ಕ್ಕೆ3, ಎಸ್. ಶ್ರೀಶಾಂತ್ 30ಕ್ಕೆ4, ನಿಧೀಶ್ 30ಕ್ಕೆ2, ರಾಬಿನ್ ಉತ್ತಪ್ಪ ಔಟಾಗದೆ 87, ವಿಷ್ಣು ವಿನೋದ್ 37, ಸಂಜು ಸ್ಯಾಮ್ಸನ್ ಔಟಾ ಗದೆ 24) ಕೇರಳ ತಂಡಕ್ಕೆ 9 ವಿಕೆಟ್‌ಗಳ ಜಯ.


ಶತಕ ಗಳಿಸಿದ ಆರ್. ಸಮರ್ಥ್ – ಪ್ರಜಾವಾಣಿ ಸಂಗ್ರಹ

ಮುಖ್ಯಾಂಶಗಳು

- ಲಿಸ್ಟ್ ಎ ಕ್ರಿಕೆಟ್‌ನಲ್ಲಿ ಐದನೇ ಶತಕ ದಾಖಲಿಸಿದ ದೇವದತ್ತ ಪಡಿಕ್ಕಲ್
- ಪಾಯಿಂಟ್ ಪಟ್ಟಿಯಲ್ಲಿ ಅಗ್ರಸ್ಥಾನ ಗಳಿಸಿದ ಕರ್ನಾಟಕ

ಸ್ಕೋರ್‌ಕಾರ್ಡ್

ರೈಲ್ವೇಸ್ 9ಕ್ಕೆ 284 (50 ಓವರ್‌ಗಳಲ್ಲಿ)

ಮೃಣಾಲ್ ದೇವಧರ್ ಸಿ ಶರತ್ ಬಿ ಪ್ರಸಿದ್ಧ ಕೃಷ್ಣ	10
ಪ್ರಥಮ್ ಸಿಂಗ್ ಸಿ ದೇವದತ್ತ ಪಡಿಕ್ಕಲ್ ಬಿ ಜೆ.ಸುಚಿತ್	129
ಶಿವಂ ಚೌಧರಿ ಸಿ ಕರುಣ್ ನಾಯರ್ ಬಿ ವೈಶಾಖ್ ವಿಜಯಕುಮಾರ್	9
ಅರಿಂದಂ ಘೋಷ್ ಸಿ ವೈಶಾಖ್ ವಿಜಯಕುಮಾರ್ ಬಿ ಶ್ರೇಯಸ್ ಗೋಪಾಲ್	36
ಸೌರಭ್ ಸಿಂಗ್ ಸಿ ಅಭಿಮನ್ಯು ಮಿಥುನ್ ಬಿ ಶ್ರೇಯಸ್ ಗೋಪಾಲ್	20
ಅಭಿಷೇಕ್ ಪಾಂಡೆ ಸಿ ಸಮರ್ಥ್ ಬಿ ಅಭಿಮನ್ಯು ಮಿಥುನ್	8
ಕರ್ಣ ಶರ್ಮಾ ಸ್ಟಂಪ್ಡ್ ಶರತ್ ಬಿ ಶ್ರೇಯಸ್ ಗೋಪಾಲ್	9
ಹರ್ಷ್ ತ್ಯಾಗಿ ರನ್ ಔಟ್ (ಪ್ರಸಿದ್ಧ ಕೃಷ್ಣ)	11
ಟಿ.ಪ್ರದೀಪ್ ಸಿ ಕೆ.ವಿ.ಸಿದ್ಧಾರ್ಥ್ ಬಿ ಜೆ.ಸುಚಿತ್	16
ಅಮಿತ್ ಮಿಶ್ರಾ ಔಟಾಗದೆ	25
ಅನಂತ ಸಹಾ ಔಟಾಗದೆ	1
ಇತರೆ (ಲೆಗ್ ಬೈ 6, ನೋಬಾಲ್ 1, ವೈಡ್ 3)	10

ವಿಕೆಟ್ ಪತನ: 1-15 (ಮೃಣಾಲ್ ದೇವಧರ್, 5.2), 2-27 (ಶಿವಂ ಚೌಧರಿ, 8.1), 3-114 (ಅರಿಂದಂ ಘೋಷ್, 26.3), 4-159 (ಸೌರಭ್ ಸಿಂಗ್, 35.3), 5-179 (ಅಭಿಷೇಕ್ ಪಾಂಡೆ, 38.4), 6-194 (ಕರ್ಣ ಶರ್ಮಾ, 41.4), 7-242 (ಪ್ರಥಮ್ ಸಿಂಗ್, 46.5), 8-243 (ಹರ್ಷ್ ತ್ಯಾಗಿ, 47.1), 9-261 (ಟಿ.ಪ್ರದೀಪ್, 49.1)

ಬೌಲಿಂಗ್: ಅಭಿಮನ್ಯು ಮಿಥುನ್ 8.1–0–31–1, ಪ್ರಸಿದ್ಧ ಕೃಷ್ಣ 10–0–60–1, ವೈಶಾಖ್ ವಿಜಯಕುಮಾರ್ 10–1–59–1, ಜೆ.ಸುಚಿತ್ 8.5–0–72–2, ಶ್ರೇಯಸ್ ಗೋಪಾಲ್ 10–0–41–3, ಕರುಣ್ ನಾಯರ್ 3–0–15–0

ಕರ್ನಾಟಕ ವಿಕೆಟ್ ನಷ್ಟವಿಲ್ಲದೆ 285 (40.3 ಓವರ್‌ಗಳಲ್ಲಿ)

ಆರ್.ಸಮರ್ಥ್ ಔಟಾಗದೆ	130
ದೇವದತ್ತ ಪಡಿಕ್ಕಲ್ ಔಟಾಗದೆ	145
ಇತರೆ (ಲೆಗ್‌ಬೈ 4, ವೈಡ್ 6)	10

ಬೌಲಿಂಗ್: ಟಿ.ಪ್ರದೀಪ್ 5–0–36–0, ಅನಂತ ಸಹಾ 7–0–34–0, ಅಮಿತ್ ಮಿಶ್ರಾ 6–0–62–0, ಕರ್ಣ ಶರ್ಮಾ 7–0–51–0, ಹರ್ಷ ತ್ಯಾಗಿ 7.3–0–56–0, ಶಿವಂ ಚೌಧರಿ 8–0–42–0

ಫಲಿತಾಂಶ: ಕರ್ನಾಟಕಕ್ಕೆ 10 ವಿಕೆಟ್‌ಗಳ ಜಯ; ಕ್ವಾರ್ಟರ್ ಫೈನಲ್‌ಗೆ ಲಗ್ಗೆ

ಸುದ್ದಿ 2 ನಿಮಿಷ

ಟಿ20 ವಿಶ್ವಕಪ್: ಪಾಕ್ ಆಟಗಾರರಿಗೆ ವೀಸಾ – ಎಹ್ಸಾನ್ ಮಣಿ ವಿಶ್ವಾಸ

ಕರಾಚಿ (ಪಿಟಿಐ): ಭಾರತದಲ್ಲಿ ನಡೆಯಲಿರುವ ಟಿ20 ವಿಶ್ವಕಪ್ ಕ್ರಿಕೆಟ್ ಟೂರ್ನಿಯಲ್ಲಿ ಪಾಲ್ಗೊಳ್ಳುವ ಆಟಗಾರರು, ಅಧಿಕಾರಿಗಳು ಮತ್ತು ವರದಿ ಮಾಡುವ ಪತ್ರಕರ್ತರಿಗೆ ವೀಸಾ ಕೊಡಿಸುವ ಕುರಿತು ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿ ಮಾರ್ಚ್ ತಿಂಗಳಲ್ಲಿ ಲಿಖಿತ ಭರವಸೆ ನೀಡಲಿದೆ ಎಂದು ಐಸಿಸಿ ತಿಳಿಸಿರುವುದಾಗಿ ಪಾಕಿಸ್ತಾನ ಕ್ರಿಕೆಟ್ ಮಂಡಳಿ (ಪಿಸಿಬಿ) ಅಧ್ಯಕ್ಷ ಎಹ್ಸಾನ್ ಮಣಿ ಭಾನುವಾರ ತಿಳಿಸಿದರು.


‘ಕಳೆದ ವರ್ಷದ ಡಿಸೆಂಬರ್‌ನಲ್ಲಿ ವೀಸಾ ಸಿಗುವ ಸಾಧ್ಯತೆ ಇತ್ತು. ಆದರೆ ಬಿಸಿಸಿಐ ಅಧ್ಯಕ್ಷ ಸೌರವ್ ಗಂಗೂಲಿ ಎರಡು ಬಾರಿ ಆಸ್ಪತ್ರೆ ಸೇರಿದ ಕಾರಣ ಅದು ಸಾಧ್ಯವಾಗಲಿಲ್ಲ.

ಹೀಗಾಗಿ ಮತ್ತೊಮ್ಮೆ ಐಸಿಸಿಯನ್ನು ಸಂಪರ್ಕಿಸಿದ್ದೆ. ಸೋಮವಾರ ಮತ್ತೊಂದು ಸುತ್ತಿನ ಮಾತುಕತೆ ನಡೆಯಲಿದ್ದು ಅದರಲ್ಲೂ ಈ ವಿಷಯದ ಚರ್ಚೆ ನಡೆಯಲಿದೆ ಎಂದು ಎಹ್ಸಾನ್ ತಿಳಿಸಿದರು.

ಈ ನಡುವೆ, ಬಿಸಿಸಿಐನಿಂದ ಲಿಖಿತ ಭರವಸೆ ಪಡೆದುಕೊಳ್ಳುವುದಾಗಿ ಐಸಿಸಿ ತಿಳಿಸಿದೆ. ವಿಶ್ವಕಪ್‌ನಿಂದ ಹೊರಗೆ ಉಳಿಯಲು ಯಾರೂ ಇಷ್ಟಪಡುವುದಿಲ್ಲ.

ಆದ್ದರಿಂದ ವಿಸಾಗೆ ಬೇಡಿಕೆ ಒಡ್ಡುವುದು ನಮ್ಮ ಹಕ್ಕು’ ಎಂದು ಮಣಿ ಹೇಳಿದರು.

ವಿಶ್ವ ಟೆಸ್ಟ್ ಚಾಂಪಿಯನ್‌ಷಿಪ್‌ಗೆ ಭಾರತ ಅರ್ಹತೆ ಗಳಿಸಿದರೆ ಇದೇ ವರ್ಷದ ಜೂನ್ 18ರಿಂದ ಶ್ರೀಲಂಕಾದಲ್ಲಿ ನಡೆಯಲಿರುವ ಏಷ್ಯಾಕಪ್ ಕ್ರಿಕೆಟ್ ಟೂರ್ನಿಯನ್ನು ಮುಂದೂಡುವುದು ಒಳ್ಳೆಯದು ಎಂಬ ಅಭಿಪ್ರಾಯವನ್ನೂ ಎಹ್ಸಾನ್ ಮಣಿ ಅಭಿಪ್ರಾಯಪಟ್ಟರು. ಏಷ್ಯಾಕಪ್ ಟೂರ್ನಿ ಪಾಕಿಸ್ತಾನದಲ್ಲಿ ನಡೆಸಲು ಉದ್ದೇಶಿಸಲಾಗಿತ್ತು. ಆದರೆ ಭಾರತ ತಂಡ ಪಾಕಿಸ್ತಾನಕ್ಕೆ ಪಯಣಿಸಲು ಸಾಧ್ಯವಿಲ್ಲದ ಪರಿಸ್ಥಿತಿಯಿಂದಾಗಿ ಶ್ರೀಲಂಕಾಕ್ಕೆ ಸ್ಥಳಾಂತರಿಸಲು ನಿರ್ಧರಿಸಲಾಗಿತ್ತು.



ಕುಸ್ತಿ: ವಿನೇಶಾ ಪೋಗಟ್‌ಗೆ ಚಿನ್ನ

ಕೀವ್, ಉಕ್ರೇನ್(ಪಿಟಿಐ): ಭಾರತದ ವಿನೇಶಾ ಪೋಗಟ್ ಅವರು ಭಾನುವಾರ ಉಕ್ರೇನಿನ ಶ್ರೇಷ್ಠ ಕೋಚ್‌ಗಳು ಮತ್ತು ಕುಸ್ತಿಪಟುಗಳ ಸಾಧನೆ ಸ್ಮರಣೆಯ ಅಂಗವಾಗಿ ಏರ್ಪಡಿಸಲಾಗಿದ್ದ ಅಂತರರಾಷ್ಟ್ರೀಯ ಕುಸ್ತಿಯಲ್ಲಿ ಚಿನ್ನ ಗೆದ್ದರು.

ಮಹಿಳೆಯರ 53 ಕೆ.ಜಿ. ವಿಭಾಗದಲ್ಲಿ ವಿನೇಶಾ ಅವರು ಬೆಲಾರೂಸ್‌ನ ವಿ. ಕಲಾಜಿನಾಸ್ಕಿ ಅವರನ್ನು ಮಣಿಸಿದರು. ವಿಶ್ವ ರ್‍ಯಾಂಕಿಂಗ್‌ನಲ್ಲಿ ಬೆಲಾರೂಸ್ ಕುಸ್ತಿಪಟು ಏಳನೇ ಸ್ಥಾನದಲ್ಲಿದ್ದಾರೆ. ಅವರು 2017ರ ವಿಶ್ವ ಚಾಂಪಿಯನ್ ಕೂಡ ಆಗಿದ್ದರು.

ಹರಿಯಾಣದ ವಿನೇಶಾ ಮತ್ತು ಕಲಾಜಿನಾಸ್ಕಿ ನಡುವಣ ಜಿದ್ದಾಜಿದ್ದಿನ ಪೈಪೋಟಿ ನಡೆಯಿತು. 10–8ರ ಅಂತರದಲ್ಲಿ ವಿನೇಶಾ ಗೆದ್ದರು.

ಹೋದ ವರ್ಷ ಕೊರೊನಾ ವೈರಸ್ ಸೃಷ್ಟಿಸಿದ ಬಿಕ್ಕಟ್ಟಿನಿಂದಾಗಿ ಯಾವುದೇ ಕುಸ್ತಿ ಸ್ಪರ್ಧೆಗಳು ನಡೆದಿರಲಿಲ್ಲ. ಈ ವರ್ಷದ ಮೊದಲ ಸ್ಪರ್ಧೆಯಲ್ಲಿ ವಿನೇಶಾ ಚಿನ್ನದ ಆರಂಭ ಮಾಡಿದ್ದಾರೆ.

ಮುಂಬೈ ಸಿಟಿಗೆ ಲೀಗ್ ವಿಜೇತ ಪಟ್ಟ

ಐಎಸ್‌ಎಲ್: ದಾಖಲೆಯೊಂದಿಗೆ ಸೆಮಿಫೈನಲ್‌ಗೆ ಲಗ್ಗೆ ಇಟ್ಟ ಎಫ್‌ಸಿ ಗೋವಾ

ಬ್ಯಾಂಬೊಲಿಮ್, ಗೋವಾ (ಪಿಟಿಐ): ಪ್ರಬಲ ಎದುರಾಳಿ ಎಟಿಕೆ ಮೋಹನ್ ಬಾಗನ್ ತಂಡವನ್ನು ಮಣಿಸಿದ ಮುಂಬೈ ಸಿಟಿ ಎಫ್‌ಸಿ ತಂಡ ಇಂಡಿಯನ್ ಸೂಪರ್ ಲೀಗ್ (ಐಎಸ್‌ಎಲ್) ಫುಟ್‌ಬಾಲ್ ಟೂರ್ನಿಯ ‘ಲೀಗ್ ವಿಜೇತ’ ಪಟ್ಟ ಮುಡಿಗೇರಿಸಿಕೊಂಡಿತು.

ಜಿಎಂಸಿ ಕ್ರೀಡಾಂಗಣದಲ್ಲಿ ಭಾನುವಾರ ರಾತ್ರಿ ನಡೆದ ಲೀಗ್ ಹಂತದ ಕೊನೆಯ ಪಂದ್ಯದಲ್ಲಿ ಮುಂಬೈ ಸಿಟಿ ಎಫ್‌ಸಿ 2–0 ಗೋಲುಗಳಿಂದ ಜಯ ಸಾಧಿಸಿತು. ಏಳನೇ ನಿಮಿಷದಲ್ಲಿ ಮೊರ್ತಜಾ ಫಾಲ್ ಮತ್ತು 39ನೇ ನಿಮಿಷದಲ್ಲಿ ಬಾರ್ತೊಲೊಮೆ ಒಗ್ಬೆಚೆ ಗೋಲು ಗಳಿಸಿದರು.

ಫತೋರ್ಡದಲ್ಲಿ ಸಂಜೆ ನಡೆದ ಪಂದ್ಯದಲ್ಲಿ ಸತತ ಅವಕಾಶಗಳನ್ನು ಸೃಷ್ಟಿಸಿಕೊಂಡರೂ ಚೆಂಡನ್ನು ಗುರಿ ಮುಟ್ಟಿಸಲಾಗದ ಹೈದರಾಬಾದ್ ಎಫ್‌ಸಿ ತಂಡ ನಿರಾಸೆ ಅನುಭವಿಸಿತು. ರಕ್ಷಣಾ ವಿಭಾಗದ ಅಮೋಘ ಆಟದ ಬಲದಿಂದ ಆತಿಥೇಯ ಎಫ್‌ಸಿ ಗೋವಾ ಸೆಮಿಫೈನಲ್‌ಗೆ ಲಗ್ಗೆ ಇರಿಸಿತು. ಪಂದ್ಯದಲ್ಲಿ ಗೋವಾ ಮತ್ತು ಹೈದರಾಬಾದ್ ಗೋಲುರಹಿತ ಡ್ರಾ ಸಾಧಿಸಿದವು. ಗೋವಾ, ಲೀಗ್‌ನಲ್ಲಿ ಅತಿ ಹೆಚ್ಚು ಪಂದ್ಯಗಳಲ್ಲಿ ಅಜೇಯವಾಗಿ ಉಳಿದ ದಾಖಲೆ ಬರೆಯಿತು. ತಂಡ ಸತತ 13 ಪಂದ್ಯಗಳಲ್ಲಿ ಸೋತಿಲ್ಲ.

ಪಾಯಿಂಟ್ ಪಟ್ಟಿಯ ನಾಲ್ಕನೇ ಸ್ಥಾನದಲ್ಲಿದ್ದ ಗೋವಾವನ್ನು ಹಿಂದಿಕ್ಕಿ ಅಂತಿಮ ನಾಲ್ಕರಲ್ಲಿ ಸ್ಥಾನ ಗಳಿಸಬೇಕಾದರೆ ಹೈದರಾಬಾದ್‌ಗೆ ಈ ಪಂದ್ಯದಲ್ಲಿ ಜಯ ಅನಿವಾರ್ಯವಾಗಿತ್ತು. ಗೋವಾಗೆ ಪಂದ್ಯ ಡ್ರಾ ಮಾಡಿಕೊಂಡರೂ ಸಾಕಾಗಿತ್ತು. ನಿರ್ದಿಷ್ಟ ತಂತ್ರದೊಂದಿಗೆ ಕಣಕ್ಕೆ ಇಳಿದ ಗೋವಾ ರಕ್ಷಣಾ ವಿಭಾಗದಲ್ಲಿ ಉತ್ತಮ ಸಾಮರ್ಥ್ಯ ತೋರಿತು. ನೈಜ ಆಕ್ರಮಣಕಾರಿ ಆಟದಿಂದ ದೂರ ಉಳಿದು ತಾಳ್ಮೆಯಿಂದ ಚೆಂಡನ್ನು ನಿಯಂತ್ರಿಸಿತು. ಐವನ್ ಗೊನ್ಸಾಲೆಸ್ ನೇತೃತ್ವದ ರಕ್ಷಣಾ ವಿಭಾಗದ ಆಟಗಾರರು ಮತ್ತು ಗೋಲ್‌ಕೀಪರ್ ಧೀರಜ್ ಸಿಂಗ್ ಅವರು ತಂಡದ ಲೆಕ್ಕಾಚಾರಗಳು ತಪ್ಪದಂತೆ ನೋಡಿಕೊಂಡರು. ಕೊನೆಯ ಕ್ಷಣಗಳಲ್ಲಿ ಪ್ರಬಲ ಆಕ್ರಮಣದ ಮೂಲಕ ಹೈದರಾಬಾದ್ ಗೋಲು ಗಳಿಸಲು ಪ್ರಯತ್ನಿಸಿದರೂ ಕೋಚ್ ಜುವಾನ್ ಫೆರಾಂಡೊ ಅವರ ತಂಡವನ್ನು ಮಣಿಸಲು ಆಗಲಿಲ್ಲ. ಹೈದರಾಬಾದ್ ತಂಡ ಈ ಫಲಿತಾಂಶದೊಂದಿಗೆ ಸತತ 12 ಪಂದ್ಯಗಳಲ್ಲಿ ಸೋಲರಿಯದ ಸಾಧನೆ ಮಾಡಿತು. ಆದರೆ ಪಾಯಿಂಟ್ ಪಟ್ಟಿಯಲ್ಲಿ ಐದನೇ ಸ್ಥಾನದಲ್ಲೇ ಉಳಿಯಿತು.



ಲೀಗ್ ವಿಜೇತರಾದ ಮುಂಬೈ ಸಿಟಿ ಎಫ್‌ಸಿ ತಂಡದ ಆಟಗಾರರ ಸಂಭ್ರಮ –ಐಎಸ್‌ಎಲ್ ಮೀಡಿಯಾ ಚಿತ್ರ

ರ್‍ಯಾಂಕಿಂಗ್: ರೋಹಿತ್‌ಗೆ ಬಡ್ತಿ

ದುಬೈ (ಪಿಟಿಐ): ಭಾರತ ಕ್ರಿಕೆಟ್ ತಂಡದ ಆರಂಭಿಕ ಬ್ಯಾಟ್ಸ್‌ಮನ್ ರೋಹಿತ್ ಶರ್ಮಾ ಅಂತರರಾಷ್ಟ್ರೀಯ ಕ್ರಿಕೆಟ್ ಕೌನ್ಸಿಲ್ (ಐಸಿಸಿ) ಟೆಸ್ಟ್ ಬ್ಯಾಟ್ಸ್‌ಮನ್ ರ್‍ಯಾಂಕಿಂಗ್‌ನಲ್ಲಿ ಎಂಟನೇ ಸ್ಥಾನಕ್ಕೇರಿದ್ದಾರೆ.

ತಮ್ಮ ವೃತ್ತಿಜೀವನದಲ್ಲಿಯೇ ರೋಹಿತ್ ಗಳಿಸಿರುವ ಶ್ರೇಷ್ಠ ರ್‍ಯಾಂಕಿಂಗ್ ಇದಾಗಿದೆ.

ಕಳೆದ ಪಂದ್ಯದ ಶ್ರೇಷ್ಠ ಆಟಗಾರ ಗೌರವ ಗಳಿಸಿದ ಎಡಗೈ ಸ್ಪಿನ್ನರ್ ಅಕ್ಷರ್ ಪಟೇಲ್ ಬೌಲಿಂಗ್ ವಿಭಾಗದಲ್ಲಿ 38ನೇ ಸ್ಥಾನಕ್ಕೇರಿದ್ದಾರೆ. ಆಫ್‌ಸ್ಪಿನ್ನರ್ ಆರ್. ಅಶ್ವಿನ್ ನಾಲ್ಕು ಸ್ಥಾನಗಳ ಬಡ್ತಿ ಪಡೆದು ಮೂರನೇ ಸ್ಥಾನಕ್ಕೇರಿದ್ದಾರೆ.

ಇಂಗ್ಲೆಂಡ್ ಸ್ಪಿನ್ನರ್ ಜ್ಯಾಕ್ ಲೀಚ್ ಇದೇ ಮೊದಲ ಬಾರಿಗೆ ಮೂವತ್ತನೇ ಸ್ಥಾನ ಗಳಿಸಿದ್ದಾರೆ. ಜೋ ರೂಟ್ ಅವರು ಆಲ್‌ರೌಂಡರ್‌ಗಳ ಪಟ್ಟಿಯಲ್ಲಿ 16 ಸ್ಥಾನಗಳ ಏರಿಕೆ ಕಂಡಿದ್ದಾರೆ.

ಹೈದರಾಬಾದ್ ರೇಸ್

‘ಸ್ಮ್ಯಾಷಿಂಗ್ ಬ್ಲೂ’ ಗೆಲ್ಲುವ ನಿರೀಕ್ಷೆ

ಬೇಕಾನ್ ಪ್ಲೇಟ್ ಸೋಮವಾರದ ಹೈದರಾಬಾದ್ ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು ‘ಸ್ಮ್ಯಾಷಿಂಗ್ ಬ್ಲೂ’ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆ ಇದೆ. ಮಧ್ಯಾಹ್ನ 1.20ಕ್ಕೆ ಆರಂಭವಾಗಲಿರುವ ದಿನದ ಎಂಟು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡತಿದೆ:

1ನೇ ರೇಸ್: ಕ್ಯಾಂಪನಿಯಾ 2, ಕೀ ಟು ಟೈಮ್ 9, ಇನ್‌ಸೈಡ್ ಸ್ಟೋರಿ 8
2ನೇ ರೇಸ್: ಸರ್ಟಿಟ್ಯೂಡ್ 6, ಹೌಸ್ ಆಫ್ ಡೈಮಂಡ್ಸ್ 3, ಲಾಗೋಸ್ 4
3ನೇ ರೇಸ್: ಗ್ರೆಗರ್ ಕ್ಲೆಗೇನ್ 3, ಬ್ಯೂರಾನೊ 7, ಸ್ಟಾರ್ವಾಲ್ಟ್ 5
4ನೇ ರೇಸ್: ಸೆಲೆರಿಟಾಸ್ 3, ಹರ್ ಲೆಗಸಿ 1, ವಾಹ್ ಮಿಸ್ ಜಾರ 2
5ನೇ ರೇಸ್: ಆಲ್ವೇಸ್ ಸಕ್ಸಸ್ 6, ಕ್ವೀನ್ ಡೆನೆರೀಸ್ 4, ಆಸ್ಟ್ರೊನಾಟ್ 11
6ನೇ ರೇಸ್: ಸ್ಮ್ಯಾಷಿಂಗ್ ಬ್ಲೂ 10, ಅಗ್ನಿ 4, ಪಾಂಟಿಯಸ್ ಪಿಲೇಟ್ 2
7ನೇ ರೇಸ್: ಬ್ಲಿಸ್‌ಫುಲ್ 4, ಸ್ಟ್ರಾಮ್‌ಜೆಟ್ 8, ಗಸ್ಟಿ ನೋಟ್ 2
8ನೇ ರೇಸ್: ಫಾರೆವರ್ ಬಾಂಡ್ 3, ಡೆಸ್ಟಿನ್ ಟು ಬೀ 2, ಎನ್.ಆರ್.ಐ ಗಿಫ್ಟ್ 5

ಉತ್ತಮ ಬೆಟ್: ಆಲ್ವೇಸ್ ಸಕ್ಸಸ್

ಜಾಕ್‌ಪಾಟ್	1ನೇ ಟ್ರಿಬಲ್	2ನೇ ಟ್ರಿಬಲ್	3ನೇ ಟ್ರಿಬಲ್
4,5,6,7,8	1,2,3	3,4,5	6,7,8

ಸಾಮಾಜಿಕ ಜಾಲತಾಣ ನಿಯಂತ್ರಣಕ್ಕೆ ನಿಯಮ

‘ಸಣ್ಣ ಕಂಪನಿಗಳಿಗೆ ಸ್ಪರ್ಧೆ ಕಷ್ಟ’

ನವದೆಹಲಿ (ಪಿಟಿಐ): ಕೇಂದ್ರ ಸರ್ಕಾರವು ಸಾಮಾಜಿಕ ಜಾಲತಾಣ ಕಂಪನಿಗಳಿಗೆ ರೂಪಿಸಿರುವ ನಿಯಮಗಳಿಂದಾಗಿ ನಿಯಮ ಪಾಲನಾ ವೆಚ್ಚ ಹೆಚ್ಚಾಗುತ್ತದೆ. ಇದರಿಂದಾಗಿ, ಬೃಹತ್ ಕಂಪನಿಗಳ ಎದುರು ಸಣ್ಣ ಕಂಪನಿಗಳು ಸ್ಪರ್ಧಿಸುವುದೇ ಅಸಾಧ್ಯವಾಗಬಹುದು ಎಂದು ವಿಶ್ಲೇಷಕರು ಅಭಿಪ್ರಾಯಪಟ್ಟಿದ್ದಾರೆ.

ಸರ್ಕಾರ ಕಳೆದ ವಾರ ಜಾರಿ ಮಾಡಿರುವ ನಿಯಮಗಳು, 50 ಲಕ್ಷ ಬಳಕೆದಾರರ ಮಾನದಂಡವನ್ನಿಟ್ಟುಕೊಂಡು ‘ಸಾಮಾಜಿಕ ಮಾಧ್ಯಮಗಳು’ ಮತ್ತು ‘ಮಹತ್ವದ ಸಾಮಾಜಿಕ ಮಾಧ್ಯಮಗಳು’ ಎಂಬ ವಿಂಗಡಣೆ ಮಾಡುತ್ತವೆ. ಮಹತ್ವದ ಸಾಮಾಜಿಕ ಮಾಧ್ಯಮಗಳು, ಮುಖ್ಯ ಅನುಪಾಲನಾಧಿಕಾರಿ, ನೋಡಲ್ ಸಂಪರ್ಕ ವ್ಯಕ್ತಿ ಮತ್ತು ದೂರು ನಿರ್ವಹಣೆ ಅಧಿಕಾರಿಗಳನ್ನು ನೇಮಿಸುವುದೂ ಸೇರಿದಂತೆ ಹೆಚ್ಚುವರಿಯಾಗಿ ಕೆಲವು ಕ್ರಮಗಳನ್ನು ಅನುಸರಿಸಬೇಕು. ಈ ಅಧಿಕಾರಿಗಳೂ ಭಾರತದಲ್ಲಿಯೇ ನೆಲೆಸಿರಬೇಕಾಗುತ್ತದೆ.

ಈ ನಿಯಮಗಳ ಬಗ್ಗೆ ಅಧ್ಯಯನ ನಡೆಸುವುದಾಗಿ ಫೇಸ್‌ಬುಕ್‌ನಂಥ ಸಂಸ್ಥೆಗಳು ಹೇಳಿವೆ. ದೂರು ನಿರ್ವಹಣೆ, ಸುಳ್ಳು ಸುದ್ದಿ ಹಬ್ಬಿಸುವುದನ್ನು ತಡೆಯುವುದು, ಗ್ರಾಹಕರಿಗೆ ಆನ್‌ಲೈನ್ ಸುರಕ್ಷತೆ ಒದಗಿಸುವ ದೃಷ್ಟಿಯಿಂದ ಹೊಸ ನಿಯಮಗಳು ಮಹತ್ವದ ಹೆಜ್ಜೆಗಳಾಗಿವೆ ಎಂದು ಕೆಲವರು ಹೇಳಿದ್ದಾರೆ.

ಆದರೆ, ಇನ್ನು ಕೆಲವು ಸಂಸ್ಥೆಗಳು, ‘ಈ ಕ್ರಮವು ಕಾರ್ಯಾಚರಣೆ ವೆಚ್ಚ ಹೆಚ್ಚಿಸುತ್ತದೆ. ಸಣ್ಣ ಸಂಸ್ಥೆಗಳ ಮೇಲೆ ದೊಡ್ಡ ಪ್ರಮಾಣದಲ್ಲಿ ಇದು ಪರಿಣಾಮ ಬೀರುತ್ತದೆ’ ಎಂದಿದ್ದಾರೆ.

‘ಹೊಸ ನಿಯಮಗಳು ಸಂಸ್ಥೆಗಳ ಮೇಲೆ ಅನಗತ್ಯ ಆರ್ಥಿಕ ಹೊರೆ ಹೊರಿಸುತ್ತವೆ. ಆರ್ಥಿಕವಾಗಿ ಬಲಿಷ್ಠವಾಗಿರುವ, ದೊಡ್ಡ ಸಂಸ್ಥೆಗಳು ಮಾತ್ರ ಉಳಿಯುವಂತೆ ಮಾಡುತ್ತವೆ’ ಎಂದು ಸಾಫ್ಟ್‌ವೇರ್ ಫ್ರೀಡಂ ಲಾ ಸೆಂಟರ್ (ಎಸ್‌ಎಫ್‌ಎಲ್‌ಸಿ) ಸಂಸ್ಥಾಪಕರಾದ ಮಿಷಿ ಚೌಧುರಿ ಹೇಳಿದ್ದಾರೆ.

‘ಸರ್ಕಾರ ಅಥವಾ ನ್ಯಾಯಾಲಯವು ಯಾವುದೇ ವಿಷಯವನ್ನು ‘ವಿವಾದಿತ’ ಎಂದು ಘೋಷಿಸಿದರೆ, ಅದನ್ನು 36 ಗಂಟೆಗಳೊಳಗೆ ಸಾಮಾಜಿಕ ಮಾಧ್ಯಮದಿಂದ ತೆಗೆದುಹಾಕಬೇಕಾಗುತ್ತದೆ. ಆದರೆ, ಬಳಕೆದಾರರ ಖಾಸಗಿತನವನ್ನು ರಕ್ಷಿಸಲು ಬಯಸುವ ಕೆಲವು ಕಂಪನಿಗಳು ಈ ಕಾನೂನನ್ನು ನ್ಯಾಯಾಲಯದಲ್ಲಿ ಪ್ರಶ್ನಿಸುವ ಸಾಧ್ಯತೆ ಇದೆ’ ಎಂದು ಹೆಸರು ಬಹಿರಂಗಪಡಿಸಲು ಇಚ್ಛಿಸದ, ಈ ಕ್ಷೇತ್ರದಲ್ಲಿ ದುಡಿಯುತ್ತಿರುವ ಅಧಿಕಾರಿಯೊಬ್ಬರು ಹೇಳಿದ್ದಾರೆ. ಕೆಲವು ನಿಯಮಾವಳಿಗಳು ಅಸಂಬದ್ಧವಾಗಿ ಕಾಣಿಸುತ್ತಿದ್ದು, ಅವುಗಳ ಬಗ್ಗೆ ಇನ್ನಷ್ಟು ಸ್ಪಷ್ಟತೆ ಬೇಕಾಗಿದೆ ಎಂದು ಉದ್ದಿಮೆಯ ಹಲವರು ಹೇಳಿದ್ದಾರೆ.

‘ಜಗತ್ತಿನಲ್ಲಿ ತಂತ್ರಜ್ಞಾನ ಬಳಕೆಯ ವೇಗ ಅಧಿಕವಾಗಿದೆ. ಇಂಥ ಸ್ಥಿತಿಯಲ್ಲಿ ‘ನಿಯಂತ್ರಣ’ ಹಾಗೂ ‘ನಾವೀನ್ಯ’ದ ನಡುವೆ ಸಮತೋಲನ ಕಾಪಾಡುವುದು ಮುಖ್ಯ. ಜತೆಗೆ ಸಾಮಾಜಿಕ ಮಾಧ್ಯಮಗಳ ಜವಾಬ್ದಾರಿಯುತ ಬಳಕೆಯೂ ಮುಖ್ಯ’ ಎಂದು ನಾಸ್ಕಾಂ ಹೇಳಿದೆ.

ಮುಖ್ಯಾಂಶಗಳು

- ಸಣ್ಣ ಸಂಸ್ಥೆಗಳ ಆತಂಕ
- ಕೆಲವು ನಿಯಮಗಳ ಬಗ್ಗೆ ಸ್ಪಷ್ಟತೆ ಬೇಕಾಗಿದೆ
- ನ್ಯಾಯಾಲಯದ ಮೊರೆಹೋಗುವ ಸಾಧ್ಯತೆ

ನಕಲಿ ಕಂಪನಿ ಸೃಷ್ಟಿಸಿ ವಂಚನೆ: ಬಂಧನ

ನವದೆಹಲಿ (ಪಿಟಿಐ): ನಕಲಿ ಕಂಪನಿಗಳನ್ನು ಸೃಷ್ಟಿಸಿ ಆ ಮೂಲಕ ₹ 50 ಕೋಟಿ ಮೊತ್ತದ ಇನ್‌ಪುಟ್ ಟ್ಯಾಕ್ಸ್ ಕ್ರೆಡಿಟ್ (ಐಟಿಸಿ) ವಂಚಿಸಿರುವ ವ್ಯಕ್ತಿಯೊಬ್ಬನನ್ನು ಜಿಎಸ್‌ಟಿ ಅಧಿಕಾರಿಗಳು ಬಂಧಿಸಿರುವುದಾಗಿ ಹಣಕಾಸು ಸಚಿವಾಲಯ ಭಾನುವಾರ ಹೇಳಿದೆ.

ವೃತ್ತಿಯಲ್ಲಿ ವಕೀಲರಾಗಿರುವ ವಿಶಾಲ್ ಎನ್ನುವವರು ತಮ್ಮದೇ ಹೆಸರಿನಲ್ಲಿ ನಕಲಿ ಕಂಪನಿಯನ್ನು ನಡೆಸುತ್ತಿದ್ದು, ತಮ್ಮ ನಿವಾಸದ ವಿಳಾಸವನ್ನೇ ನೀಡಿ ನೋಂದಣಿ ಮಾಡಿಸಿಕೊಂಡಿದ್ದರು. ಅಲ್ಲದೆ, ಹಲವು ವ್ಯಕ್ತಿಗಳ ಕೆವೈಸಿ ಬಳಸಿಕೊಂಡು ಅನೇಕ ನಕಲಿ ಸಂಸ್ಥೆಗಳನ್ನು ರಚಿಸಿದ್ದರು. ಯಾವುದೇ ವಹಿವಾಟು ನಡೆಸುತ್ತಿರಲಿಲ್ಲ ಮತ್ತು ನಕಲಿ ಐಟಿಸಿ ರೂಪಿಸುತ್ತಿದ್ದರು ಎಂದು ಆರೋಪಿಸಲಾಗಿದೆ.

ಅವರ ಮನೆಯಲ್ಲಿ ಶೋಧ ಕಾರ್ಯ ನಡೆಸಿದಾಗ, ಹಲವು ವ್ಯಕ್ತಿಗಳ ಹೆಸರಿನ ಕೆವೈಸಿ ಮತ್ತು ಚೆಕ್‌ಗಳು ದೊರೆತಿವೆ. ಇನ್‌ವಾಯ್ಸ್ ಮೊತ್ತದ ಶೇ 2ರಷ್ಟು ಕಮಿಷನ್ ಪಡೆಯುವ ಮೂಲಕ ನಕಲಿ ಇನ್‌ಪುಟ್ ಟ್ಯಾಕ್ಸ್ ಕ್ರೆಡಿಟ್ ರೂಪಿಸಿ ತಮ್ಮ ಗ್ರಾಹಕರಿಗೆ ನೀಡುತ್ತಿದ್ದರು ಎಂದು ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ದೆಹಲಿ ಪೂರ್ವ ವಿಭಾಗದ ಕೇಂದ್ರ ಸರಕು ಮತ್ತು ಸೇವಾ ತೆರಿಗೆ (ಸಿಜಿಎಸ್‌ಟಿ) ಆಯುಕ್ತರ ಕಚೇರಿಯ ಅಧಿಕಾರಿಗಳು ಈ ವಂಚನೆ ಪ್ರಕರಣವನ್ನು ಭೇದಿಸಿದ್ದಾರೆ ಎಂದು ಸಚಿವಾಲಯವು ತನ್ನ ಪ್ರಕಟಣೆಯಲ್ಲಿ ತಿಳಿಸಿದೆ.

ವಿಶಾಲ್ ಅವರನ್ನು ಮಾರ್ಚ್ 13ರವರೆಗೆ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ. ಜಿಎಸ್‌ಟಿ ವ್ಯವಸ್ಥೆ ಜಾರಿಗೆ ಬಂದಾಗಿನಿಂದ ಇಲ್ಲಿಯವರೆಗೆ ದೆಹಲಿ ವಲಯವು ₹ 4,019 ಕೋಟಿಗೂ ಅಧಿಕ ಮೊತ್ತದ ವಿವಿಧ ಪ್ರಕರಣಗಳಲ್ಲಿ 27 ಜನರನ್ನು ಬಂಧಿಸಿದೆ ಎಂದು ಸಚಿವಾಲಯ ಹೇಳಿದೆ.

ಚಿನ್ನದ ಬಾಂಡ್‌ನ 12ನೇ ಕಂತು

ನವದೆಹಲಿ (ಪಿಟಿಐ): ಚಿನ್ನದ ಬಾಂಡ್‌ನ 12ನೇ ಕಂತು ಸೋಮವಾರ ಆರಂಭವಾಗಲಿದೆ. ಭಾರತೀಯ ಆರ್‌ಬಿಐ ನೀಡಿಕೆ ದರವನ್ನು ಪ್ರತಿ ಗ್ರಾಂಗೆ ₹ 4,662 ನಿಗದಿ ಮಾಡಿದೆ. ಬಾಂಡ್ ಖರೀದಿ ಹಣ ಆನ್‌ಲೈನ್ ಮೂಲಕ ಪಾವತಿಸುವವರಿಗೆ ಪ್ರತಿ ಗ್ರಾಂಗೆ ₹ 50ರಂತೆ ವಿನಾಯಿತಿ ಸಿಗಲಿದೆ. ಹೀಗಾಗಿ ಇಂತಹ ಹೂಡಿಕೆದಾರರಿಗೆ ನೀಡಿಕೆ ಬೆಲೆ ₹ 4,612 ಇರಲಿದೆ. ಕನಿಷ್ಠ ಹೂಡಿಕೆ 1 ಗ್ರಾಂ ಹಾಗೂ ಗರಿಷ್ಠ ಹೂಡಿಕೆ 500 ಗ್ರಾಂ ಇದೆ. ಹಿಂದೂ ಅವಿಭಕ್ತ ಕುಟುಂಬಕ್ಕೆ ಖರೀದಿ ಮಿತಿ 4 ಕೆ.ಜಿ ನಿಗದಿಪಡಿಸಲಾಗಿದೆ.

ಜಿಎಸ್‌ಟಿ: ಗಡುವು ವಿಸ್ತರಣೆ

ನವದೆಹಲಿ (ಪಿಟಿಐ): 2019–20ನೇ ಸಾಲಿನ ಜಿಎಸ್‌ಟಿ ವಾರ್ಷಿಕ ವಿವರ ಸಲ್ಲಿಸಲು ನೀಡಿದ್ದ ಗಡುವನ್ನು ಕೇಂದ್ರ ಸರ್ಕಾರ ಮಾರ್ಚ್ 31ರವರೆಗೆ ವಿಸ್ತರಿಸಿದೆ. ಗಡುವು ವಿಸ್ತರಣೆ ಆಗುತ್ತಿರುವುದು ಇದು ಎರಡನೆಯ ಬಾರಿ.

ಈ ಮೊದಲು ಗಡುವನ್ನು ಫೆಬ್ರುವರಿ 28ರವರೆಗೆ ವಿಸ್ತರಿಸಲಾಗಿತ್ತು. ‘ತೆರಿಗೆ ಪಾವತಿದಾರರು ಎದುರಿಸುತ್ತಿರುವ ಕಷ್ಟವನ್ನು ಪರಿಗಣಿಸಿ, ಚುನಾವಣಾ ಆಯೋಗದ ಅನುಮತಿಯೊಂದಿಗೆ, ಜಿಎಸ್‌ಟಿ ವಿವರ ಸಲ್ಲಿಸುವ ಗಡುವನ್ನು ವಿಸ್ತರಿಸಲಾಗುತ್ತಿದೆ’ ಎಂದು ಕೇಂದ್ರ ಹಣಕಾಸು ಸಚಿವಾಲಯದ ಪ್ರಕಟಣೆ ಹೇಳಿದೆ.

ಜಿಎಸ್‌ಟಿ ವ್ಯಾಪ್ತಿಗೆ ಪೆಟ್ರೋಲಿಯಂ ಉತ್ಪನ್ನ: ಸುಬ್ರಮಣಿಯನ್ ಬೆಂಬಲ

ಕೋಲ್ಕತ್ತ (ಪಿಟಿಐ): ಪೆಟ್ರೋಲಿಯಂ ಉತ್ಪನ್ನಗಳನ್ನು ಸರಕು ಮತ್ತು ಸೇವಾ ತೆರಿಗೆ (ಜಿಎಸ್‌ಟಿ) ವ್ಯಾಪ್ತಿಗೆ ತರುವ ಪ್ರಸ್ತಾವಕ್ಕೆ ಮುಖ್ಯ ಆರ್ಥಿಕ ಸಲಹೆಗಾರ ಕೆ.ವಿ. ಸುಬ್ರಮಣಿಯನ್ ಬೆಂಬಲ ಸೂಚಿಸಿದ್ದಾರೆ.

‘ಪೆಟ್ರೋಲಿಯಂ ಉತ್ಪನ್ನಗಳನ್ನು ಜಿಎಸ್‌ಟಿ ವ್ಯಾಪ್ತಿಗೆ ತರುವುದು ಉತ್ತಮ ನಡೆ. ಆದರೆ, ಆ ನಿರ್ಧಾರವನ್ನು ಜಿಎಸ್‌ಟಿ ಮಂಡಳಿ ತೆಗೆದುಕೊಳ್ಳಬೇಕಿದೆ’ ಎಂದು ಅವರು ಭಾರತೀಯ ವಾಣಿಜ್ಯೋದ್ಯಮ ಮಹಾಸಂಘದ (ಎಫ್‌ಐಸಿಸಿಐ) ಮಹಿಳಾ ಘಟಕದ (ಎಫ್‌ಎಲ್‌ಒ) ಸದಸ್ಯರೊಂದಿಗೆ ಈಚೆಗೆ ನಡೆಸಿದ ಸಂವಾದ ಕಾರ್ಯಕ್ರಮದಲ್ಲಿ ತಿಳಿಸಿದ್ದಾರೆ.

‘ಆಹಾರ ಉತ್ಪನ್ನಗಳ ಬೆಲೆ ಏರಿಕೆಯಿಂದಾಗಿ ಹಣದುಬ್ಬರದ ಒತ್ತಡ ಉಂಟಾಗಿರಬಹುದು’ ಎಂದೂ ಅವರು ಹೇಳಿದ್ದಾರೆ. ಪೆಟ್ರೋಲಿಯಂ ಉತ್ಪನ್ನಗಳನ್ನು ಜಿಎಸ್‌ಟಿ ವ್ಯಾಪ್ತಿಗೆ ತರುವಂತೆ ಪೆಟ್ರೋಲಿಯಂ ಸಚಿವ ಧರ್ಮೇಂದ್ರ ಪ್ರಧಾನ್ ಅವರು ಸಹ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರಿಗೆ ಮನವಿ ಮಾಡಿದ್ದಾರೆ.


ಸುಬ್ರಮಣಿಯನ್

ರಾಮನಗರ ರೇಷ್ಮೆ ಗೂಡು ಧಾರಣೆ



ಮಿಶ್ರತಳಿ (ಸಿ.ಬಿ) ₹200-385

ದ್ವಿತಳಿ (ಬಿ.ವಿ) ₹311-496

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹430
12 ಮೊಟ್ಟೆಗೆ	₹55
ಮೈಸೂರು	
100 ಮೊಟ್ಟೆಗೆ	₹433